ಮಾನವಿಕ ಕರ್ಣಾಟಕ

ಸಂಪುಟ ೧೦ ಸಂಚಿಕೆ ೩

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೦

ಲೇಖಕರಿಗೆ ಸೂಚನೆಗಳು

೧ ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೦ ಸಂಚಿಕೆ ೩

೩೯

ನೇ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೦

MANAVIKA KARNATAKA, Kannada quarterly of the University of Mysore. Volume 10, Number 3, May 1980. Edited by Dr. B. R. Gopal and Dr. C. M. Muniramappa.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಸಿ. ಎಂ. ಮುನಿರಾಮಪ್ಪ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ಎಚ್. ನರಸಣ್ಣ

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ಮೈಸೂರು ೫೭೦೦೦೬

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧.	ಆರ್. ವೆಂಕಟೇಶ್	ಕನ್ನಡ ಬರಹಗಾರರು, ತಲಕಾಡು-೫೭೧೧೨೨ ಟಿ. ನರಸೀಪುರ ತಾಲ್ಲೂಕು
೨.	ಇ. ಜಿ. ಕೆ. ರಾವ್	ಮಾಜಿ ಡೈರೆಕ್ಟರ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, 'ಆನಂದ ಆರಾಮ', P.O. ಕೋಟೆಕಾರು, ದಕ್ಷಿಣ ಕನ್ನಡ ಜಿಲ್ಲೆ
೩	ಸಿ. ವಿ. ರಂಗಸ್ವಾಮಿ	ಅಧ್ಯಾಪಕರು, ಇತಿಹಾಸ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ೫೮೦೦೦೩
೪.	ಕೆ. ಜಿ. ವಸಂತಮಾಧವ	ಇತಿಹಾಸದ ಅಧ್ಯಾಪಕರು, ವಿಜಯ ಕಾಲೇಜು, ಮುಲ್ಕಿ–೫೭೪೧೫೪, ದಕ್ಷಿಣ ಕನ್ನಡ ಜಿಲ್ಲೆ
೫	ಎಸ್. ಎಸ್. ರಾಘವಾಚಾರ್	ಪ್ರಾಧ್ಯಾಪಕರು (ನಿವೃತ್ತ), ತತ್ವಶಾಸ್ತ್ರ ವಿಭಾಗ, ೩೩, ಎಂ. ಎಚ್. ಬ್ಲಾಕ್, ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨
೬.	ಕೆಳದಿ ಗುಂಡಾಜೋಯಿಸ್	ಕ್ಯೂರೇಟರ್, ಕೆಳದಿ ಪ್ರಾಚ್ಯವಸ್ತು ಸಂಶೋಧನಾಲಯ, ಕೆಳದಿ ೫೭೭೪೪೩ ಶಿವಮೊಗ್ಗ ಜಿಲ್ಲೆ
೭.	ಟಿ. ವಿ. ವೆಂಕಟಾಚಲ ಶಾಸ್ತ್ರೀ	ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು ೫೭೦೦೦೬
೮.	ಡಿ. ಎನ್. ರಾಯ್ಕರ್	ಅರ್ಥಶಾಸ್ತ್ರದ ಅಧ್ಯಾಪಕರು, ವಿಜಯ ಕಾಲೇಜು, ಮುಲ್ಕಿ–೫೭೪೧೫೪, ದಕ್ಷಿಣ ಕನ್ನಡ ಜಿಲ್ಲೆ
೯.	ಸಿ. ಕೆ. ರೇಣುಕಾರ್ಯ	ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

ಆರ್. ವೆಂಕಟೇಶ್

ಧರ್ಮ : ಒಂದು ವಿವೇಚನೆ

"ಧರ್ಮ" ಎಂಬ ಶಬ್ದವು ನಾನಾರ್ಥಗಳಲ್ಲಿ ಇಂದು ಬಳಕೆಯಾಗುತ್ತಿದೆ. ಧಾರ್ಮಿಕರು ಸಂಪ್ರದಾಯ ಪರಂಪರೆಯನ್ನಾಶ್ರಯಿಸಿ ಧರ್ಮದ ವ್ಯಾಖ್ಯೆಯನ್ನು ಮಾಡುತ್ತಾರೆ. ಧರ್ಮ ಎಂದರೆ ಯಾವುದು? ಎಷ್ಟರಮಟ್ಟಿಗೆ ಅದು ಧರ್ಮ? ಎಂಬ ಪ್ರಶ್ನೆ ಚಿಂತನೀಯವಾಗಿದೆ! ಇಂದು ಧರ್ಮ ಎಂದರೆ ಹಿಂದೂ ಧರ್ಮವೋ, ಕ್ರೈಸ್ತಧರ್ಮವೋ, ಜೈನಧರ್ಮವೋ, ವೀರಶೈವಧರ್ಮವೋ ಎಂಬ ಸಮಸ್ಯೆ ಉಂಟಾಗುತ್ತದೆ. ಇವು ನಿಜಕ್ಕೂ ಧರ್ಮಗಳೇ? ಆಯಾ ಮತದ ಅನುಯಾಯಿಗಳ ದೃಷ್ಟಿಯಿಂದ ಇವನ್ನು ಧರ್ಮ ಎನ್ನಬಹುದೋ ಹೊರತು ವಿಶಾಲ ಅರ್ಥದಲ್ಲಲ್ಲ. ವೈಜ್ಞಾನಿಕವಾಗಿ ನೋಡುವುದಾದರೆ ಇವು ಯಾವುವೂ ಧರ್ಮಗಳಲ್ಲ!

ಹಿಂದೂಧರ್ಮವನ್ನು ಧರ್ಮ ಎಂದು ಒಪ್ಪುವುದಾದರೆ ಅದರಲ್ಲಿರುವ ವರ್ಣಾಶ್ರಮಧರ್ಮ ಅವತಾರ ಕಲ್ಪನೆ, ವಿಗ್ರಹಾರಾಧನೆ, ಪಿತೃಪೂಜೆ ಮುಂತಾದ ಪ್ರಧಾನ ಕಲ್ಪನೆಗಳನ್ನು ಸ್ವೀಕರಿಸಬೇಕಾಗುತ್ತದೆ. ಕ್ರೈಸ್ತಧರ್ಮಕ್ಕೆ ಬಂದರೆ ರಕ್ಷಕನಾಗಿ ಕ್ರಿಸ್ತನನ್ನು ಅಂಗೀಕರಿಸುವುದು, ದೀಕ್ಷಾಸ್ನಾನ, ಬಿಳೀ ಸಿಂಹಾಸನದ ವಿಚಾರಣೆ, ಮತಪ್ರಚಾರ, ಕನ್ಯಾಮೇರಿಯ ದಿವ್ಯತ್ವ, ವಿವಿಧ ಪಂಥಗಳ ಸೂಕ್ಷ್ಮಬೇಧಗಳು, ಚರ್ಚಿನ ಪರಮಪ್ರಾಮಾಣ್ಯತೆ ಇತ್ಯಾದಿಗಳನ್ನು ಅಂಗೀಕರಿಸಬೇಕಾಗುತ್ತದೆ. ಮಹಮ್ಮದೀಯ ಅಥವಾ ಇಸ್ಲಾಂ ಧರ್ಮಕ್ಕೆ ಬಂದರೆ ಮಕ್ಕಾಯಾತ್ರೆ ಪವಿತ್ರ ಕುರಾನ್ ಪಠಣ, ಜನ್ನತ್ ಸಂಸ್ಕಾರ, ಪರದಾ ಪದ್ಧತಿ, ರೋಜಾ ಉಪವಾಸ ಮುಂತಾದವುಗಳನ್ನಳವಡಿಸಿಕೊಳ್ಳಬೇಕಾಗುತ್ತದೆ. ಜೈನಧರ್ಮದಲ್ಲಾದರೆ ಅಣು ಸಿದ್ಧಾಂತ, ಪಂಚಪರಮೇಷ್ಠಿಗಳ ಪ್ರಾರ್ಥನೆ, ದಿಗಂಬರ-ಶ್ವೇತಾಂಬರ ಪಂಥಗಳು, ಅಹಿಂಸೆಯ ಪರಾಕಾಷ್ಠೆ, ಭವಾವಳಿಗಳು ಮುಂತಾದವುಗಳನ್ನು ಮಾನ್ಯಮಾಡಬೇಕಾಗುತ್ತದೆ. ವೀರಶೈವ ಧರ್ಮವು ಲಿಂಗದೀಕ್ಷೆ, ಪಂಚಸೂತಕ ನಿರಾಕರಣೆ, ಷಟ್‌ಸ್ಥಲ, ಪಂಚಾಚಾರ, ಅಷ್ಟಾವರಣಾದಿಗಳನ್ನು ಹೊಂದಿರುವುದಲ್ಲದೆ ಪಂಚಾಚಾರ್ಯರು ಮತ್ತು ಬಸವಾದಿ ಪ್ರಮಥರನ್ನು ಉಪಾಸಿಸುತ್ತದೆ. ಹೀಗೆ ವೀರಶೈವನಾಗುವವನು ಗುರು-ಲಿಂಗ-ಜಂಗಮಕ್ಕೆ ಪ್ರಾಧಾನ್ಯತೆ ಕೊಡಲೇಬೇಕಾಗುತ್ತದೆ. ಸಿಖ್ ಧರ್ಮ ಖಡ್ಗ, ಗಡ್ಡ ಬಿಡುವುದು, ಪೇಟಾ ಅಥವಾ ರುಮಾಲು ಧರಿಸುವುದು, ಗ್ರಂಥ ಸಾಹೀಬ್ ಮನ್ನಣೆ ಮುಂತಾದವುಗಳನ್ನು ಒಳಗೊಂಡಿದ್ದರೆ ಆರ್ಯಸಮಾಜ ವಿಗ್ರಹಾರಾಧನೆ ನಿಷೇಧ, ಜಾತಿಮತಗಳ ತ್ಯಾಗ, ವಿಶಿಷ್ಟ ಸಂಧ್ಯಾವಂದನೆ, ವೇದಗಳ ಪ್ರಾಮಾಣ್ಯತೆ ಮುಂತಾದವುಗಳನ್ನು ಆದರಿಸುತ್ತದೆ.

ಹೀಗೆ ನಾನಾ ಧರ್ಮಗಳು ಅದರ ಕಕ್ಷೆಯಲ್ಲಿ ಸೇರಿಕೊಂಡಿರುವ ಜನರಿಗೆ ಅನೇಕ ಕಟ್ಟಳೆಗಳನ್ನು ಹೇರುತ್ತವೆ. ಈ ಕಟ್ಟಳೆಗಳನ್ನು ಮೀರಿ ಹೊರಬಂದವನನ್ನು ಆಯಾಧರ್ಮಗಳು ಗೌರವಿಸದೆ "ಧರ್ಮ ಬಾಹಿರ" ಎಂದು ಹೊರಹಾಕುತ್ತವೆ. ಉದಾಹರಣೆಗೆ ಹೇಳುವುದಾದರೆ ಪಿತೃಪೂಜೆ, ವಿಗ್ರಹಾರಾಧನೆ ಮುಂತಾದವುಗಳನ್ನು ಒಪ್ಪದ ಹಿಂದೂವನ್ನು ಸಂಪ್ರದಾಯ ಸಮಾಜ ಧಿಕ್ಕರಿಸುತ್ತದೆ. ಹಾಗೆಯೇ ದೀಕ್ಷಾಸ್ನಾನವಾಗದ ಕ್ರೈಸ್ತನನ್ನು ಅಥವಾ ಜನ್ನತ್‌ಗೊಳಗಾಗದ ಮುಸ್ಲಿಮನನ್ನು ಕೂಡ ಆಯಾ ಮತ ಕೀಳಾಗಿ ಕಾಣುತ್ತವೆ. ಎಲ್ಲಾ ಸಂಪ್ರದಾಯಗಳನ್ನೂ ಮೀರಿದವೆಂದು ಹೇಳಿಕೊಳ್ಳುವ

ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯ, ಬಹಾಯೀ ಮುಂತಾದ ಪಂಥಗಳೂ ಕೂಡ ತನ್ನದೇ ಆದ ಸಂಕುಚಿತ ಧೋರಣೆಗಳನ್ನು ಹೊಂದಿವೆ. ಇದು ಏಕೆ? ಇವೆಲ್ಲ ನಿಜಕ್ಕೂ ಧರ್ಮಗಳೇ?

ಇನ್ನೂ ಒಂದು ಪ್ರಧಾನ ಸಂಶಯವುಂಟಾಗುವುದೆಂದರೆ ಸಮಾಜದ ಬಗ್ಗೆ ಧರ್ಮದ ದೃಷ್ಟಿ ಕೋನವೇನು? ಎಲ್ಲ ಮತಾಚಾರ್ಯರೂ ಸಂಸಾರದ ನಿಸ್ಸಾರತೆಯನ್ನು ಏಕೆ ಪ್ರತಿಪಾದಿಸುತ್ತಾರೆ? ಪರಲೋಕದ ಕಡೆಗೆ ಏಕೆ ಪ್ರಾಧಾನ್ಯತೆಯನ್ನು ಕೊಡುತ್ತಾರೆ. ಪರಮ ಕಾರುಣಿಕನೆಂದು ಹೆಸರಾದ ಬುದ್ಧದೇವನೂ ಕೂಡ ಸರ್ವಸ್ವವನ್ನೂ ಶೂನ್ಯವೆಂದು ಏಕೆ ಕರೆಕೊಟ್ಟನು? ಲೌಕಿಕ ವ್ಯವಹಾರ, ವಿಧಿ ವಿಧಾನಗಳೆಲ್ಲ ಶೂನ್ಯವಾಗಿ ನಿರರ್ಥಕವೆನಿಸುವುದಾದರೆ ಧರ್ಮದ ಸಾರ್ಥಕತೆಯಾದರೂ ಏನು?

ವೇದಗಳ ಕಾಲದ ಧರ್ಮ, ಉಪನಿಷತ್ತುಗಳ ಕಾಲದ ಧರ್ಮ, ಪುರಾಣಗಳ ಕಾಲದ ಧರ್ಮ, ಮಹಾಕಾವ್ಯ (ರಾಮಾಯಣ, ಮಹಾಭಾರತ)ಗಳ ಕಾಲದ ಧರ್ಮ, ಸ್ಮೃತಿಗಳ ಕಾಲದ ಧರ್ಮ—ಇವೆಲ್ಲ ಮೂಲತಃ ಬೇರೆ ಬೇರೆಯೇ? ಹಾಗಿಲ್ಲದೆ ಹೋದರೆ ಒಂದಕ್ಕೊಂದು ಅತ್ಯಂತ ಭಿನ್ನವಾಗಿ ಕಾಣಲು ಕಾರಣವೇನು? ದೇವರು ಮತ್ತು ಧರ್ಮದ ಸಂಬಂಧವೇನು? ಇವುಗಳ ಸಂಬಂಧದ ಪರಿ ಕಲ್ಪನೆ (concept) ಗಳು ಹಲವು ಹತ್ತು ಸಿದ್ಧಾಂತಗಳಲ್ಲಿ ಪರಸ್ಪರ ವಿರೋಧಾಭಾಸವಾಗಿ ಏಕೆ ಸಾಗಿವೆ?

ಮಾರ್ಕ್ಸ್, ಏಂಜಲ್ಸ್, ಸ್ಟಾಲಿನ್, ಲೆನಿನ್, ಮಾವೋ ಮುಂತಾದವರುಗಳ ವ್ಯಾಖ್ಯೆಯ ಮೇರೆಗೆ ದೇವರಿಲ್ಲದ ಅಥವಾ ಧರ್ಮವಿಲ್ಲದ ಸಮಾಜ ಏಕೆ ಅತ್ಯಂತ ದುರ್ಲಭವಾಗಿದೆ? ಕಮ್ಯೂನಿಸ್ಟ್ ಪದ್ಧತಿ ಯಂತೆ ಸರ್ಕಾರವಿಲ್ಲದ ಸಮಾಜ ಅಸ್ತಿತ್ವಕ್ಕೆ ಏಕೆ ಬಂದಿಲ್ಲ? ದೇವರಿದ್ದಾನೆ ಎಂಬುದು ಧರ್ಮವೋ ದೇವರಿಲ್ಲ ಎಂಬುದು ಧರ್ಮವೋ? ಅಥವಾ ದೇವರ ಬಗ್ಗೆ ಗೊತ್ತಿಲ್ಲ ಎಂಬ ಅಜ್ಞೇಯತಾವಾದವೇ ಧರ್ಮವೋ? ಅಥವಾ ಈ ಮೂರನ್ನೂ ಒಟ್ಟಾರೆಯಾಗಿ ಧರ್ಮ ಎನ್ನೋಣವೆ?

ಸಮಾಜಶಾಸ್ತ್ರಜ್ಞರಾದ ಮ್ಯಾಕ್ಸ್‌ಮುಲ್ಲರ್, ಡರ್ಕೀಂ, ವೆಬರ್ ಮುಂತಾದವರು ಸಮಾಜ ಶಾಸ್ತ್ರದ ಆಧಾರದ ಮೇಲೆ ನಾನಾವಿಧವಾದ ಧರ್ಮದ ವ್ಯಾಖ್ಯೆಗಳನ್ನು ನೀಡುತ್ತಾರೆ. ಶಕ್ತಿವಾದ ಮಾನಾಯಿಸಂ ಮುಂತಾದ ಕಾರ್ಯಾಧಾರಿತ ಸಿದ್ಧಾಂತಗಳನ್ನು (functional theories) ಮಂಡಿಸುತ್ತಾರೆ. ಇವು ಧರ್ಮದ ಸರಿಯಾದ ವಿವರಣೆಗಳೆ? ಇವುಗಳಲ್ಲೂ ಒಮ್ಮತವಿಲ್ಲದಿದ್ದಾಗ ಏನು ಮಾಡೋಣ?

ಇನ್ನೊಂದು ಮುಖ್ಯವಾದ ಸಮಸ್ಯೆ ಎದುರಾಗುವುದೇನೆಂದರೆ ವಿಜ್ಞಾನಕ್ಕೂ ಧರ್ಮಕ್ಕೂ ಪರಸ್ಪರ ವಿರೋಧವಿದೆಯೋ? ಸಾಮಂಜಸ್ಯವಿದೆಯೋ? ದೇವರು ಅಥವಾ ಧರ್ಮದ ಬಗ್ಗೆ "ಇದಮಿತ್ಥಂ" ಎಂದು ಸಿದ್ಧಾಂತ ಮಾಡಲಾಗದಿದ್ದರೂ ವಿಖ್ಯಾತ ವಿಜ್ಞಾನಿ ಐನ್‌ಸ್ಟೈನ್ ಧರ್ಮದ ಅಸ್ತಿತ್ವದಲ್ಲಿ ನಂಬಿಕೆಯುಳ್ಳವರಾಗಿದ್ದರಲ್ಲ? ಇದು ಹೇಗೆ ಸಾಧ್ಯವಾಗುತ್ತದೆ? ವಿಜ್ಞಾನ ಹಾಗೂ ಧರ್ಮದ ಸಂಬಂಧವೇನು? ವಿಜ್ಞಾನವನ್ನು ಧರ್ಮ ವಿರೋಧಿಸಬೇಕೋ? ಬೇಡವೋ?

ಮೊದಲು ಈ ಕಡೆಯ ಸಮಸ್ಯೆಯನ್ನೇ ತೆಗೆದುಕೊಳ್ಳೋಣ. ವಿಜ್ಞಾನ ಬುದ್ಧಿಯನ್ನು ಹರಿತ ಗೊಳಿಸುವ ಒಂದು ಶಿಸ್ತು (discipline). ವಿಚಾರ ಸ್ವಾತಂತ್ರ್ಯ ಮತ್ತು ಪರೀಕ್ಷಾ ಪ್ರಯೋಗಗಳು ಈ ವಿಜ್ಞಾನದ ಮುಖ್ಯ ಉಪಕರಣಗಳು. ವಿಜ್ಞಾನವು ಯಾವುದನ್ನೂ ಅಲ್ಲಗಳೆಯುವುದೂ ಇಲ್ಲ. ಒಪ್ಪಿಕೊಳ್ಳುವುದೂ ಇಲ್ಲ. ಅನುಭವದ ಆಧಾರದ ಮೇಲೆ ಪ್ರಯೋಗಿಸಿ ಸಿದ್ಧಾಂತೀಕರಿಸುವುದೇ ವೈಜ್ಞಾನಿಕ ಧೋರಣೆ. (scientific approach). ಇಂತಹ ವೈಜ್ಞಾನಿಕ ಧೋರಣೆಯಿಂದ ನೋಡಿದ್ದೇ ಆದರೆ ಧರ್ಮ ಅಂಗೀಕಾರಕ್ಕೆ ಹೊರತಾಗುವುದಿಲ್ಲ ಅಥವಾ ಸುಮ್ಮ ಸುಮ್ಮನೆ ತಳ್ಳಿಹಾಕುವು ದಾಗುವುದಿಲ್ಲ. ತರ್ಕಬದ್ಧವಾಗಿದ್ದು ಆಚರಣೆಯಲ್ಲಿ ಪ್ರಯೋಜಕದ್ದಾಗುವ ಧರ್ಮವನ್ನು ವಿಜ್ಞಾನ ಅಂಗೀಕರಿಸುತ್ತದೆ. ಹೀಗಾಗಿ ವಿಜ್ಞಾನ ಮತ್ತು ಧರ್ಮದ ಸಂಬಂಧ ಪೂರಕವೇ ಹೊರತು ಮಾರಕ ವಾಗಬೇಕಾಗಿಲ್ಲ.

ಎರಡನೆಯದಾಗಿ ದೇವರು-ಧರ್ಮದ ಸಂಬಂಧವನ್ನೇ ಪರಿಶೀಲಿಸೋಣ. ದೇವರನ್ನು ಕುರಿತಾಗಿ

ಆಸ್ತಿಕ, ನಾಸ್ತಿಕ, ಅಜ್ಞೇಯತಾವಾದಿ ಎಂಬ ಮೂರು ಸಿದ್ಧಾಂತಗಳಿವೆ. ಇವಕ್ಕೂ ಧರ್ಮಕ್ಕೂ ಸಂಬಂಧವಿಲ್ಲ. ಮನುಷ್ಯನು ಮೇಲೆ ಮೇಲೆ ಏರಿದಂತೆಲ್ಲ ಅವನಿಗೆ ಹಲವು ವಿಧದ ಆಧ್ಯಾತ್ಮಿಕ ಅನುಭವಗಳು ಆಗುತ್ತಿರುತ್ತವೆ. ಅದರಂತೆ ದೇವರ ಬಗೆಗಿನ ಅವನ ಕಲ್ಪನೆಗಳು ಬದಲಾಗುತ್ತಿರುತ್ತವೆ. ಆದರೆ ಮೂಲಭೂತವಾದ ಧರ್ಮದ ಭಾವನೆ ಎಂದಿಗೂ ಬದಲಾಗಬೇಕಿಲ್ಲ; ಬದಲಾಗ ಕೂಡದು. ಆದ್ದರಿಂದ ಆತ್ಮಸಾಕ್ಷಿ (conscience) ಎಂದಿಗೂ ಬದಲಾಗದೆ ಅಚಲವಾಗಿ ಉಳಿದಿರಲೇಬೇಕು. ಹಾಗಿದ್ದರೆ ಮಾತ್ರ ಧಾರ್ಮಿಕ ಜೀವನ (spiritual life) ಸಾಧ್ಯ. ಕ್ಷಣಕ್ಷಣಕ್ಕೆ ಬದಲಾಗುವ ಆತ್ಮಸಾಕ್ಷಿಯಿಂದ ಧರ್ಮಕ್ಕೆ ಬಾಧೆಯೇ ಹೊರತು ಅದಕ್ಕೆ ಯಾವ ಲಾಭವೂ ಇಲ್ಲ. ದೇವರ ಬಗ್ಗೆ ಯಾರ ಭಾವನೆ ಹೇಗಿರಲಿ, ಧರ್ಮದ ಬಗೆಗೆ ಮಾತ್ರ ಅವನು ಅಚಲನಾಗಿಯೇ ಇರಬೇಕು. ಅದುವೆ ನಿಜವಾದ ನೆಲೆ. ದೇವರ ನಂಬಿಕೆಯನ್ನೂ ಧರ್ಮವನ್ನೂ ಪರಸ್ಪರ ಬೆಸೆಯುವುದು ಅನಿವಾರ್ಯವೇನೂ ಅಲ್ಲ. ದೇವರ ಬಗೆಗಿನ ಮೂರು ಸಿದ್ಧಾಂತಗಳನ್ನು ಮೀರಿಯೂ ಕೂಡ ಮೂಲಭೂತವಾದ ಧರ್ಮ (ಅಂದರೆ ಒಬ್ಬನ ಸಹಜಸ್ವಭಾವ) ದಲ್ಲಿ ಸ್ಥಿರವಾಗಿರಲು ಸಾಧ್ಯ. ಮಾಧ್ವ ತತ್ತ್ವಜ್ಞಾನವು "ಸ್ವಸ್ವರೂಪೇಣ ವ್ಯವಸ್ಥಿತಿಃ" ಎಂಬ ಸೂತ್ರದಲ್ಲಿ ವಿವರಿಸಿರುವಂತೆ ಅವನವನ ವ್ಯಕ್ತಿತ್ವಕ್ಕೆ ಸಹಜವಾದ ಸ್ಥಿತಿಯಲ್ಲಿ ಅವನು ಸದಾ ನೆಲೆಸಿರಬೇಕಾದುದನ್ನೇ ಧರ್ಮ ಎಂದು ಕರೆಯಬಹುದು.

ಇನ್ನು ಆಚರಣೆಗಳು ಧರ್ಮವೆ? ಎಂಬ ಪ್ರಶ್ನೆ! ಮತೀಯ ಆಚರಣೆಗಳು—ಬ್ರಹ್ಮೋಪದೇಶವಾಗಲೀ, ಲಿಂಗಧಾರಣೆಯಾಗಲೀ, ತೀರ್ಥಯಾತ್ರೆಗಳಾಗಲೀ ಅಥವಾ ಆದಿಮಾನವನ ಧರ್ಮದ ಬಲಿಕೊಡುವಿಕೆ ಮುಂತಾದ ಯಾವುದೇ ಆಗಿರಲಿ—ಧರ್ಮಗಳಲ್ಲ. ಮೊದಲೇ ಹೇಳಿರುವಂತೆ ಅವು ಆಯಾ ಸಂಪ್ರದಾಯಗಳ ಆಚಾರ್ಯರುಗಳು ನಿಗದಿಪಡಿಸಿದ ಕಟ್ಟುಕಟ್ಟಳೆಗಳ ಸೀಮಿತ ಮತೀಯ ಆಚರಣೆಗಳು ಅವನ್ನು ಧರ್ಮ ಎಂದು ಸರ್ವಥಾ ಪರಿಗಣಿಸುವುದು ಸಾಧ್ಯವಿಲ್ಲ! ಧರ್ಮವನ್ನು ಒಂದು ದೊಡ್ಡ ಮರಕ್ಕೆ ಹೋಲಿಸುವುದಾದರೆ ಆ ಮರದ ತೊಗಟೆಗಳು ಇವು ಎಂದು ಬೇಕಾದನ್ನು ಕರೆಯಬಹುದು! ಧರ್ಮ ಈ ಎಲ್ಲ ಆಚರಣೆ ಹಾಗೂ ವಿಧಿವಿಧಾನಗಳನ್ನು ಮೀರಿ ನಿಂತಿದೆ!

ಸಮಾಜಶಾಸ್ತ್ರವು ನೈತಿಕನಿಯಮಗಳು, ಸಂಪ್ರದಾಯಗಳು, ರೂಢಿಗಳು ಮುಂತಾದವುಗಳನ್ನು ಪ್ರತಿಪಾದಿಸುತ್ತದೆ. ಇವಕ್ಕೂ ಧರ್ಮಕ್ಕೂ ಏನು ಸಂಬಂಧ? ಇವುಗಳು ಬಿಡಿಬಿಡಿಯಾಗಿಯಾಗಲೀ ಒಟ್ಟಾಗಿಯಾಗಲೀ ಧರ್ಮವಾಗಲಾರವು. ಏಕೆಂದರೆ ಅವುಗಳಲ್ಲಿ ಒಮ್ಮತವಾಗಲೀ ಏಕಸೂತ್ರತೆಯಾಗಲೀ ಇರುವುದಿಲ್ಲ. ಹೀಗಾಗಿ ಅವುಗಳಿಗೂ ಧರ್ಮಕ್ಕೂ ಏನೇನೂ ಸಂಬಂಧವಿಲ್ಲ. ಸಮಾಜದ ಪದ್ಧತಿಗಳು ಮತ್ತು ಆಚರಣೆಗಳಿಗೆ ಮಾತ್ರ ಅವು ಸೀಮಿತವಾಗಿವೆ.

ಕಡೆಯಲ್ಲಿ "ಧರ್ಮ" ಎಂಬ ಶಬ್ದದ ನಿಜವಾದ ಅರ್ಥವೇನು? ಎಂಬ ಸಮಸ್ಯೆ ಇದಿರಾಗುತ್ತದೆ.

"ಧಾರಣಾದ್ಧರ್ಮ ಇತ್ಯಾಹುಃ", ಧರತೀತಿ ಧರ್ಮಃ" ಧೃತಿಯಿಂದ ಕೂಡಿದ, ಧರಿಸುವ ಸ್ವಭಾವವುಳ್ಳ ಗುಣವೇ ಧರ್ಮ. ಹರಿದಿಲ್ಲದ ಮತ್ತು ಸ್ವಚ್ಛವಾದ ಬಟ್ಟೆಯನ್ನು ಪ್ರತಿಯೊಬ್ಬ ಮನುಷ್ಯನೂ ಧರಿಸಲಿಚ್ಛಿಸುತ್ತಾನೆ. ಹಾಗೆಯೇ ಜೀವ ಪೋಷಕ ಧಾತು (vitamins)ಗಳು ಮನುಷ್ಯನ ದೇಹದ ಪೋಷಣೆಗೆ ಅನಿವಾರ್ಯವಾಗಿಯೇ ಬೇಕಾಗಿವೆ. ಹಾಗೆಯೇ ಮನುಷ್ಯನು ಮನಸ್ಸುಳ್ಳ ಪ್ರಾಣಿ. "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ॥" ಮನುಷ್ಯನ ಬಂಧನ ಮೋಕ್ಷಗಳಿಗೆ ಮನಸ್ಸೇ ಕಾರಣ. ಶರೀರ-ಮನಸ್ಸು ಎರಡೂ ಒಂದರೊಡನೊಂದು ಹೊಂದಿಕೊಂಡು ಸಾಗಿದಾಗಲೇ ವ್ಯಕ್ತಿಯ ವ್ಯಕ್ತಿತ್ವ ಇಡಿಯಾಗಿ ತೋರಿಕೊಳ್ಳುತ್ತದೆ. ಇಲ್ಲದಿದ್ದರೆ ಆ ವ್ಯಕ್ತಿತ್ವ ಪೂರ್ಣವಾಗಿರುವುದಿಲ್ಲ. ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳು ದೈಹಿಕವಾದ ರೋಗಗಳೆಂದು ತೋರಿಕೊಳ್ಳುವ ರೋಗಗಳೂ ಕೂಡ ಮನಸ್ಸಿನಿಂದ ಮೂಡಿದವೇ ಎಂದು ದೃಢಪಡಿಸಿವೆ. ಹೀಗಾಗಿ ಮಾನಸಿಕ ಆರೋಗ್ಯಕ್ಕೆ ಅಗತ್ಯವಾದ ಪೋಷಕವಸ್ತುವೇ "ಧರ್ಮ" ಎಂದು ಹೇಳಬಹುದು. ಇದೇ ಅರ್ಥದಲ್ಲಿ "ಧರ್ಮೋ ರಕ್ಷತಿ ರಕ್ಷಿತಃ" ಎಂದು ಹೇಳುತ್ತಾರೆ. ಧರ್ಮವನ್ನು ರಕ್ಷಿಸಿದವನನ್ನು ಅದೂ ರಕ್ಷಿಸುತ್ತದೆ. ಇದೇ ಧರ್ಮದ ಸ್ವಭಾವ.

Religion ಎಂಬುದು ರೀ ಮತ್ತು ಲಯಗರ್ ಎಂಬ ಎರಡು ಶಬ್ದಗಳಿಂದಾಗಿದೆ. ಇದರ

ಅರ್ಥ ಪುನಃ ಬಂಧಿಸುವುದು. ಅಂದರೆ ವ್ಯಕ್ತಿಯೊಡನೆ ತತ್ತ್ವದ ಬೆಸುಗೆಯೇ ಧರ್ಮ. ಸಾಧಾರಣ ಅರ್ಥದಲ್ಲಿ ಧರ್ಮ ಎಂದರೆ ಸ್ವಭಾವ (conduct or nature). ರೂಸೋ ಎಂಬ ದಾರ್ಶನಿಕ ರಾಜಕೀಯ ಚಿಂತಕನು "ನಿಸರ್ಗಕ್ಕೆ ಹಿಂದಿರುಗಿ" (Go to Nature) ಎಂದು ಹೇಳಿದ್ದಾನೆ. ನಿಸರ್ಗ ದತ್ತವಾಗಿ, ಪ್ರಕೃತಿ ಸಹಜವಾಗಿ ಬಂದ ಗುಣಗಳೇ ಧರ್ಮ ಎನಿಸುತ್ತವೆ. ಉದಾಹರಣೆಗೆ ನೀರಿನ ಧರ್ಮ ಹರಿಯುವುದು, ಪುಸ್ತಕದ ಧರ್ಮ ಓದಿಸಿಕೊಳ್ಳುವುದು, ಬೆಂಕಿಯ ಧರ್ಮ ಸುಡುವುದು, ಕಾಲಿನ ಧರ್ಮ ನಡೆಯುವುದು ಇತ್ಯಾದಿ. ಪ್ರಾಥಮಿಕ ಹಂತ (primary stage)ದ ಧರ್ಮ ವೆಂದರೆ ಪ್ರತಿಯೊಬ್ಬ (individual)ನ ಸಹಜ ಸ್ವಭಾವವೇ ಆಗಿದೆ. ಅದನ್ನು ಮೀರಿದ ಪ್ರೌಢ ಹಂತದ (secondary stage) ಧರ್ಮ ಎಂದರೆ ಶಾಶ್ವತ ಧರ್ಮ. "ಆನೋ ಭದ್ರಾ ಕ್ರತವೋ ಯಂತು ವಿಶ್ವತಃ" ಎಂಬ ಸೂತ್ರಪ್ರಾಯ ನುಡಿಯಲ್ಲಿ ಋಗ್ವೇದ" ಇಡೀ ವಿಶ್ವದ ಎಲ್ಲೆಡೆಗಳಿಂದ ಒಳ್ಳೆಯ ಭಾವನೆಗಳು ಬರಲಿ" ಎಂದು ಹೇಳಿದೆ. "ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಕೂಡಲ ಸಂಗನ ಶರಣರೇ ಕುಲಜರು" ಎಂದಿದ್ದಾರೆ ಬಸವಣ್ಣನವರು. "ಈಸಬೇಕು ಇದ್ದು ಜೈಸಬೇಕು" ಎಂದು ಪುರಂದರ ದಾಸರು ಹೇಳಿದ್ದಾರೆ. ಸಮಾಜದ ಸಕಲ ಜೀವಿಗಳಿಗೆ ಸತತವೂ ಹಿತವನ್ನು ಕೋರುವುದೇ ಧರ್ಮ. ಸಮಾಜಕ್ಕೆ ಕಂಟಕಪ್ರಾಯವಾದ ಮೂಢನಂಬಿಕೆಗಳನ್ನು, ಕಲ್ಪನೆಗಳನ್ನು ಬದಿಗೊತ್ತಿ ಮಾನವ ಹಿತಕ್ಕಾಗಿ ಕಂಕಣಬದ್ಧನಾಗುವುದೇ ಧರ್ಮ. ಮಾನವೀಯತೆಯನ್ನು ಪೋಷಿಸುವ ಭಾವನೆಗಳನ್ನೇ ಧರ್ಮ ಎಂದು ಕರೆಯಬಹುದು. ಮಾನವೀಯತೆಗೆ ಕಳಂಕಪ್ರಾಯವಾದ ಭಿನ್ನತೆಗಳು, ವೈಷಮ್ಯ ಮುಂತಾದವುಗಳನ್ನು ನೀಗಿ ವೈಜ್ಞಾನಿಕ ಚಿಂತನೆ ನಡೆಸಿ ಸಮಾಜದ ಸರ್ವತೋಮುಖ ಪ್ರಗತಿಗಾಗಿ ಧ್ಯೇಯಧೋರಣೆಗಳನ್ನು ರೂಪಿಸಿಕೊಳ್ಳುವುದನ್ನೇ ಧರ್ಮ ಎನ್ನಬಹುದು. ಧರ್ಮವು ವಿಶ್ವ ವಿಶಾಲ ಪ್ರಕ್ರಿಯೆಗಳನ್ನು ರೂಪಿಸುವಲ್ಲಿ ತನ್ನ ಸಾರ್ಥಕತೆ ತೋರುತ್ತದೆ.

ಇ. ಜಿ. ಕೆ. ರಾವ್

ಭಾರತದಲ್ಲಿನ ಸಾಂಪ್ರದಾಯಿಕ ಹಣಕಾಸಿನ ನಿಯಂತ್ರಣ ಹಾಗೂ ದೇಶದ ನಿರಂತರ ದಾರಿದ್ರ್ಯ

ಭಾರತವು ಸನಾತನ ಧರ್ಮದ ನೆಲೆವೀಡಾಗಿದ್ದು, ನಮ್ಮ ವೇದಾಂತ ತತ್ವಗಳು ಅನೇಕ ಪಾಶ್ಚಾತ್ಯ ಪಂಡಿತರನ್ನು ಪ್ರಭಾವಿತಗೊಳಿಸಿದುದು ಎಲ್ಲರಿಗೂ ತಿಳಿದ ವಿಷಯ. ಆಧುನಿಕ ವೈಜ್ಞಾನಿಕ ತತ್ವಗಳಿಗೂ ನಮ್ಮ ವೇದಶಾಸ್ತ್ರಪುರಾಣಗಳಲ್ಲಿ ಹೇಳಿರುವ ತತ್ವಗಳಿಗೂ ವಿಶೇಷ ಹೋಲಿಕೆಯಿರುವುದು ಅನೇಕರನ್ನು ಚಕಿತಗೊಳಿಸಿರುತ್ತದೆ. ಇವೆಲ್ಲದರ ಅರಿವು ನಮ್ಮ ಪೂರ್ವಜರಿಗೆ ಇತ್ತಾದರೂ, ನಮ್ಮ ದೇಶದಲ್ಲಿ ನಿರಂತರವಾಗಿ ದಾರಿದ್ರ್ಯವು ತಾಂಡವವಾಡುತ್ತಿದ್ದುದಕ್ಕೆ ಏನು ಕಾರಣ ಎಂಬುದು ಈ ಲೇಖನದ ಪರಿಶೀಲನ ವಿಷಯ. ನಮ್ಮ ದೇಶದಲ್ಲಿ ತಾಜಮಹಲ್, ಖಜುರಾಹೋ, ಅಜಂತ, ಎಲ್ಲೋರಾ ಹಾಗೂ ಕೋಣಾರಕ ಮುಂತಾದುವು ನಮ್ಮ ಉಜ್ವಲ ಸಂಸ್ಕೃತಿಗೆ ಸಾಕ್ಷಿಯಾಗಿದೆ. ಆದರೂ ನಮ್ಮ ಸಮಾಜವು ಲೌಕಿಕ ವಿಷಯಗಳಲ್ಲಿ ಪ್ರಗತಿ ಹೊಂದದೆ ಹಿಂದುಳಿದಿತ್ತು. ಹಣದ ಅಭಾವದಿಂದ ಹೀಗಾಯಿತೇ, ಅಥವಾ ಇನ್ನಾವ ಕಾರಣವಾದರೂ ಇರಬಹುದೆ? ಎಂಬುದು ವಿಚಾರಣೀಯ. ನಮ್ಮ ದೇಶದ ದಾರಿದ್ರ್ಯಕ್ಕೆ ಮುಖ್ಯ ಕಾರಣ ಹಣದ ಅಭಾವವಲ್ಲ, ಅದರ ವಿನಿಯೋಗದ ವಿಷಯದಲ್ಲಿ ರೂಢಿಗತವಾಗಿ ಬಂದ ಕೆಲವು ಅಪಚಾರಗಳು ಎಂದು ತೋರುವುದು.

ಹಣದ ಮೇಲಿನ ಸಾಂಪ್ರದಾಯಿಕ ಅಭಿಪ್ರಾಯ

ಅಮರಕೋಶ (ಕ್ರಿ. ಶ. ೬ನೇ ಶತಾಬ್ದಿ)ದಲ್ಲಿ ಹಣಕ್ಕೆ ೧೩ ಪರ್ಯಾಯ ಪದಗಳನ್ನು ಕೊಟ್ಟಿರುತ್ತದೆ.

ದ್ರವ್ಯಂ, ವಿತ್ತಂ, ಸ್ವಾಪತೇಯಂ, ರಿಕ್ಥಮೃಕ್ಥಂ ಧನಂ ವಸು
ಹಿರಣ್ಯಂ ದ್ರವಿಣಂ, ದ್ಯುಮ್ನಂ, ಅರ್ಥ್ಯ, ರೈ, ವಿಭಾವಾ (ಅವೆ).

'ದ್ರವ್ಯ' ವೆಂದರೆ ಹರಿಯುವ ದ್ರವ ಪದಾರ್ಥ ಎಂಬ ಅರ್ಥವೂ ಇದೆ. ಇಂಗ್ಲೀಷಿನಲ್ಲಿ "ಕರೆನ್ಸೀ" ಎಂಬ ಪದವು ಇದಕ್ಕೆ ಸಮಾನ ಪದವಾಗಿದೆ. ಹಣವು ಚಲಾವಣೆಯಲ್ಲಿದ್ದರೇನೆ ತನ್ನ ಸಹಜ ಕರ್ತವ್ಯವನ್ನು ನಿರ್ವಹಿಸಬಲ್ಲುದು. ದ್ರವ್ಯಕ್ಕೆ "ಅರ್ಥ"ವೆಂದರೆ ನಾವು ಮಾತಿನಲ್ಲಿ ಉಪಯೋಗಿಸುವ ಪದಗಳ ಅರ್ಥವೆಂದೂ ಹೇಳಲಾಗಿದೆ. ಹಣಕ್ಕೂ, ಪದಕ್ಕೂ ಬಹಳ ಹೋಲಿಕೆ ಇದೆ. ಎರಡೂ ಸಂಕೇತಗಳೇ, ಪದವೆಂದರೆ ನಮ್ಮ ಮನದಲ್ಲಿ ಮೂಡುವ ಭಾವನೆಗಳನ್ನು ಇನ್ನೊಬ್ಬರ ಮನದಲ್ಲಿ ಸಂವಾದದ ಮೂಲಕ ಪ್ರತಿಬಿಂಬಿಸುವಂತೆ ಮಾಡುವ ಶಬ್ದ ಸಂಕೇತಗಳು. ಹಣವೆಂದರೆ, ವ್ಯವಹಾರದಲ್ಲಿ ವಸ್ತುಗಳನ್ನು ಹಂಚಿಕೊಳ್ಳಲು ಉಪಯೋಗಿಸುವ ವಸ್ತು ಸಂಕೇತ. ಎರಡಕ್ಕೂ ಇರುವುದು ಕೃತ್ರಿಮವಾದ ಮೌಲ್ಯ. ಪದಕ್ಕೆ ಅರ್ಥವು ಅಗತ್ಯವಾಗಿರುವಂತೆ, ಹಣ ನಾಣ್ಯಕ್ಕೆ ನಾವು ಗುರುತಿಸುವಂತಹ ಮೌಲ್ಯವಿರುವುದು ಅವಶ್ಯ. ಶ್ರೋತೃವಿನ ಮನ್ನಣೆಯಿಂದ ಭಾಷೆಗೆ ಅರ್ಥ ಹಾಗೂ ವಿಕ್ರೇತನ ಮನ್ನಣೆಯಿಂದಲೇ

ಹಣಕ್ಕೆ ಬೆಲೆ ಬರುವುದು. ಸ್ವಕೀಯವಾದ ಬೆಲೆ ಹಣಕ್ಕೆ ಇಲ್ಲವೆಂಬುದೊಂದು ನಿಗೂಢ ಸತ್ಯ. ಈ ಸತ್ಯವನ್ನು ತಿಳಿಯಲು ತಜ್ಞರಿಗೆ ಅನೇಕ ಶತಮಾನಗಳ ಅನುಭವ ಬೇಕಾಗಿ ಬಂತು. ಲೋಕದಲ್ಲಿ ಸಂಭವಿಸುವ ಆರ್ಥಿಕ ಸಮಸ್ಯೆಗಳೆಲ್ಲವೂ ಹಣಕಾಸಿನ ಮೌಲ್ಯದ ಏರುಪೇರುಗಳಿಂದ ಉಂಟಾಗುತ್ತವೆ.

ಸಾಟಿ ವ್ಯಾಪಾರದ (Barter) ಕುಂದುಗಳು

ಗ್ರಾಮೀಣ ನೆಲೆಯಲ್ಲಿ ವ್ಯವಹಾರವೆಲ್ಲವೂ ಸಾಟಿ ವ್ಯಾಪಾರವನ್ನು ಆಧರಿಸಿರುವುದು ಗಮನಾರ್ಹ. ಚಿಕ್ಕಮಟ್ಟದಲ್ಲಿ ಸ್ವತಂತ್ರವಾಗಿ ಜೀವಿಸುವ ಗ್ರಾಮೀಣ ಸಮಾಜದಲ್ಲಿ ಹಣದ ಉಪಯೋಗದ ಪ್ರಭಾವ ಅತಿಕಮ್ಮಿ. ನಾಗರಿಕ ಜೀವನದಲ್ಲಿ ಹಣವೆಂಬುದು ಗಾಳಿನೀರಿನಂತೆ ಅತ್ಯವಶ್ಯ ವಸ್ತುವಾಗಿರುವುದು. ಸಮಾಜ, ನಾಗರಿಕತೆ ಬೆಳೆದಂತೆ, ಹಣದ ಪ್ರಭಾವವು ಹೆಚ್ಚುತ್ತ ಹೋಗುವುದು. ಸಾಟಿ ವ್ಯಾಪಾರದಲ್ಲಿ ಒಂದು ವಿಶೇಷತರದ ಕುಂದನ್ನು ಗಮನಿಸಬಹುದು. ಅಕ್ಕಿಯನ್ನು ಕೊಟ್ಟು ಎಣ್ಣೆ ಪಡೆಯಬೇಕಾದರೆ, ಅಕ್ಕಿ ಇರುವವನು ಎಣ್ಣೆ ಇರುವವನನ್ನೇ ಸಮೀಪಿಸಬೇಕು. ಹಾಗೂ ಎಣ್ಣೆ ಇರುವವನಿಗೆ ಅಕ್ಕಿಯೇ ಬೇಕಾಗುವುದು ಅಗತ್ಯ. ಅವನಿಗೆ ಅಕ್ಕಿ ಬೇಡವಾಗಿದ್ದರೆ, ಅಕ್ಕಿ ಇದ್ದವನಿಗೆ ಎಣ್ಣೆ ಪಡೆಯಲು ಸಾಧ್ಯವಿಲ್ಲ. ಈ ಕುಂದನ್ನು ನಿವಾರಿಸಲು ಹಣವೆಂಬ ಸರ್ವಗ್ರಾಹ್ಯ ಸಂಕೇತ ರೂಪದ ವಸ್ತುವನ್ನು ನಿರ್ಮಿಸಿಕೊಳ್ಳ ಬೇಕಾಯಿತು. ಇದಕ್ಕೆ ಯಾವುದನ್ನು ಬೇಕಾದರೂ ಬದಲಾಗಿ ಕೊಡಬಹುದು. ವಿಕ್ರೇತನು ಇದನ್ನು ನಿರ್ಲಕ್ಷಿಸದೇ, ತನ್ನ ಸ್ವಂತ ಉಪಯೋಗಕ್ಕಿಂತ ಹೆಚ್ಚು ಮಿಕ್ಕಿರುವ ಯಾವುದನ್ನಾದರೂ ಕೊಡಲು ಸಿದ್ಧನಾಗುವನು. ಹಣಕ್ಕೆ ಇರಬೇಕಾದ ಗುಣಗಳು ಮೂರೇ ಮೂರು. ಅದನ್ನು ವಿಕ್ರೇತನು ಸುಲಭ ವಾಗಿ ಗುರುತಿಸಿ ಪಡೆಯಲು ಸಿದ್ಧವಿರಬೇಕು. ಅದು ಚಲಾವಣೆಯಲ್ಲಿ ರೂಪ ಕೆಡಬಾರದು. ಹಾಗೂ ಅದನ್ನು ಶಾಶ್ವತವಾಗಿ ಕೆಡದೆ ಉಳಿಸಿಕೊಳ್ಳಲು ಸಾಧ್ಯವಾಗಬೇಕು. ಅದರ ಸ್ವಕೀಯ ಮೌಲ್ಯಕ್ಕೂ ವ್ಯಾವಹಾರಿಕ ಮೌಲ್ಯಕ್ಕೂ ಯಾವ ಸಂಬಂಧವೂ ಇಲ್ಲ. ಅದು ಅಲಭ್ಯವಾದ ಯಾವ ವಸ್ತುವನ್ನೂ ತಂದುಕೊಡಲಾರದು. ಹಾಗೂ, ಒಲ್ಲದ ಸೇವೆಯನ್ನು ಯಾರಿಂದಲೂ ಮಾಡಿಸಲಾರದು. ಪರ್ವತ ಪ್ರಮಾಣದಲ್ಲಿ ಹೊನ್ನಿದ್ದರೂ ಅದು ಒಂದು ಅಗಳು ಅಕ್ಕಿಯನ್ನು ಹುಟ್ಟಿಸಲಾರದು. ಅಕ್ಕಿಯನ್ನು ಬೆಳೆಯಲು ವೈಯಕ್ತಿಕ ಪರಿಶ್ರಮ ಮಾತ್ರವಲ್ಲದೇ, ಅನುಕೂಲವಾದ ಮಣ್ಣು, ನೀರು, ಹವಾಗುಣ ಮೊದಲಾದವು ಇರಬೇಕು. ಬಿತ್ತಲು, ನೆಡಲು, ಕೊಯ್ಯಲು ಜನ ಸಹಾಯ ಬೇಕು. ಕಾಲಾವಧಿಯೂ ಬೇಕು. ಹಣಕ್ಕಿಂತ, ಹಣದಿಂದ ಪಡೆಯಬಹುದಾದ ಸಾಮಗ್ರಿಗಳು, ಸೇವಾ ಸೌಲಭ್ಯಗಳು ಇರುವುದು ಮುಖ್ಯ. ಹಣದ ಮೆರಗಿನೊಡನೆ ಯಾವ ಸಮಾಜದ ಸುಧಾರಣೆಯೂ ಆಗುವುದಿಲ್ಲ. ಸಮಾಜದ ಉತ್ಪಾದನೆ, ಹಾಗೂ ವ್ಯಕ್ತಿಗಳ ಪರಿಶ್ರಮದಿಂದಲೇ ಸಮಾಜದ ಅಭಿವೃದ್ಧಿ ಸಾಧ್ಯ. ಆರ್ಥಿಕ ಚರಿತ್ರೆಯಲ್ಲಿ ತಂಬಾಕು ಮೊದಲಾದುವನ್ನು ಹಣಕಾಸಾಗಿ ಉಪಯೋಗಿಸಿಕೊಂಡು ನಾಗರಿಕ ವಿಶೇಷವಾಗಿ ಮುನ್ನಡೆ ಗಳಿಸಿದ ಕೆಲವು ನಿದರ್ಶನಗಳಿವೆ. ಹೊನ್ನು ಹೇರಳವಾಗಿ ಇದ್ದರೂ, ಹಿಂದುಳಿದ ರಾಷ್ಟ್ರಗಳೂ ಇವೆ. ಉದಾಹರಣೆಗಾಗಿ ಇಥಿಯೋಪಿಯಾದ ಗಣಿಗಳಿಂದ ರೋಮನರು ಬಂಗಾರವನ್ನು ಪಡೆಯುತ್ತಿದ್ದರು. ಅದು ಪುರಾತನದಿಂದಲೂ ಸ್ವತಂತ್ರ ರಾಷ್ಟ್ರವಾಗಿತ್ತು. ಆದರೆ ಅದು ಇಂದಿಗೂ ಹಿಂದುಳಿದ ದೇಶ ವಾಗಿದೆ. ಅಮೆರಿಕಾದ ಸಂಯುಕ್ತರಾಷ್ಟ್ರಕ್ಕೆ ಆರಂಭದಲ್ಲಿ ಯಾವ ಚಿನ್ನ ಬೆಳ್ಳಿಯ ನಿಕ್ಷೇಪಗಳೂ ಅವರಲ್ಲಿ ಇರಲಿಲ್ಲ. ಕೆಲಿಫೋರ್ನಿಯವು ಆ ಗಣ ರಾಜ್ಯವನ್ನು ಬಹಳ ಸೇರಿದುದು ಅನಂತರ. ಅಲ್ಲಿಯ ಚಿನ್ನದ ಗಣಿಗಳು ದೊರೆತದ್ದೂ ಅನಂತರವೇ, ಆದರೂ ಅದು ವಿಶೇಷ ಪ್ರಗತಿ ಗಳಿಸಿತ್ತು. ಈ ಅಮೆರಿಕಾದ ಚಿನ್ನದ ಗಣಿಗಳು ಈಗ ಬರಿದಾಗಿವೆ. ಈಗಿನ ಅತಿ ಶ್ರೀಮಂತ ಪ್ರದೇಶಗಳಾದ ಸಿಂಗಪೂರ್, ಹಾಂಗ್‌ಕಾಂಗ್‌ಗಳಲ್ಲಿ ಯಾವ ಚಿನ್ನದ ಗಣಿಯೂ ದೊರೆತಿಲ್ಲ. ಆದರೂ ಅವು ಆಧುನಿಕ ರಾಷ್ಟ್ರಗಳಲ್ಲೆಲ್ಲ ವಿಶೇಷ ಶ್ರೀಮಂತಿಕೆಯನ್ನು ಪಡೆದಿವೆ. ಶ್ರೀಮಂತಿಕೆಗೆ ಹಣವು ಕಾರಣವಲ್ಲ.

ಹಣದ ಮೌಲ್ಯದ ಮರ್ಮ

ಲೋಕದಲ್ಲಿ ಅನೇಕ ಕಾಲದ ವರೆಗೆ ರಜತ ಕಾಂಚನಗಳು ನಾಣ್ಯಗಳಾಗಿ ಉಪಯೋಗವಾಗುತ್ತಿದ್ದುದರಿಂದ, ಹಿರಣ್ಯವೇ ಮೌಲ್ಯದ ತವರೆಂಬ ಭಾವನೆಯು ಜನರಲ್ಲಿ ಬಲವಾಗಿ ಮೂಡಿರುತ್ತದೆ. ಹಣಕ್ಕೆ ನಿಜವಾದ

ಮೌಲ್ಯವಿಲ್ಲ. ಅದಕ್ಕೆ ಜನರು ಕೊಡುವ ಮೌಲ್ಯವು ಬಿಸಿಲುಗುದುರೆಯಂತೆ ಕೇವಲ ಕಾಲ್ಪನಿಕವಾದದ್ದೆಂದು ಜನರಿಗೆ ತಿಳಿಯಲು ಅನೇಕ ಶತಮಾನಗಳು ಬೇಕಾಯಿತು. ಅದು ಕೂಡ ಅನೇಕ ಕಹಿ ಅನುಭವಗಳಾದ ಮೇಲೆ. ಈಗಲೂ ಜನರಲ್ಲಿ ಹಣದ ಮೌಲ್ಯದ ವಿಷಯದಲ್ಲಿ ಸರಿಯಾದ ಅರಿವು ಮೂಡದಿರುವುದರಿಂದ ಧನವ್ಯಾಮೋಹವೇ ಜನರನ್ನು ಆರ್ಥಿಕ ಪತನದೆಡೆಗೆ ಕೊಂಡೊಯ್ಯುತ್ತಿರುವುದನ್ನು ನಾವು ಗಮನಿಸಬಹುದು.

ಇದರ ಮೊದಲನೆಯ ಅನುಭವವು ಯೂರೋಪಿನಲ್ಲಿ, ಕೊಲಂಬಸನು ಅಮೆರಿಕಾ ಭೂಖಂಡವನ್ನು ಕಂಡುಹಿಡಿದೊಡನೆ (ಕ್ರಿ. ಶ. ೧೪೯೨). ಉಂಟಾಯಿತು. ಭಗೀರಥನನ್ನು ಗಂಗೆ ಹಿಂಬಾಲಿಸಿದಂತೆ, ರಜತ ಕಾಂಚನದ ಮಹಾಪೂರವೊಂದು. ದಕ್ಷಿಣ ಅಮೆರಿಕಾದ ಖಣಿಗಳಿಂದ ಮೇಲಕ್ಕೆದ್ದು ಬಂದು ಯೂರೋಪಿನತ್ತ ಧಾವಿಸಿತು. ೧೫೩೧–೩೨ ರಲ್ಲಿ ಫ್ರಾನ್ಸಿಸ್ಕೋ ಪಿರ್‌ಝಾರೋ ಎಂಬ ಸ್ಪೈಯಿನಿನ ಧೂರ್ತ ನಾಯಕನು. ಪೆರೂ ದೇಶದ ಕಾಜಮಾರ್ಕ್ ಎಂಬ ಇಂಕಾ ಜನರ ರಾಜಧಾನಿಯಲ್ಲಿ ಅವರ ದೊರೆ ದಂಡ ಅತಾಹುಅಲ್ಪ ಎಂಬವನನ್ನು ಸೆರೆಹಿಡಿದು. ಅವನ ರಾಜಸಭಾಂಗಣ ತುಂಬುವಷ್ಟು ಹಿರಣ್ಯವನ್ನು ಬಿಡುಗಡೆ ಧನವಾಗಿ ಕೋರಿದನು. ಆಗ ದೊರೆತ ಧನವನ್ನು ಆಧುನಿಕ ನೆಲೆಯಲ್ಲಿ (ಔನ್ಸ್ ಚಿನ್ನಕ್ಕೆ ೩೫ ಡಾಲರಿನಂತೆ ೧೧೭ ಕೋಟಿ ಡಾಲರಿನಷ್ಟಾಗಿತ್ತೆಂದು ಅಂದಾಜಿಸಲಾಗಿರುತ್ತದೆ. ಅಷ್ಟು ಧನ ಪಡೆದ ನಂತರವೂ ಅತಾಹುಅಲ್ಪನನ್ನು ಚಿತ್ರಹಿಂಸೆ ಮಾಡಿ ಕೊಂದನು. ದೇಶವನ್ನೇ ಸೂರೆಗೊಂಡನು.

ಆದರೆ ಈ ಅಪಾರ ಧನ ರಾಶಿಯು. ಅಮೇರಿಕಾದ ಖಣಿಗಳಿಂದ ಅಗೆದು ತಂದ ಲೋಹದ, ಎಳ್ಳಿನ ಗಾತ್ರಕ್ಕೂ ಸರಿತೂಗದೆಂದು ಡಾ॥ ಜೆ. ಕೆ. ಗ್ಯಾಲ್ಬ್ರಾಯಿತರು (ಭಾರತದ ಮಾಜಿ ಅಮೆರಿಕನ್ ರಾಯಭಾರಿ) ತಮ್ಮ ಪುಸ್ತಕದಲ್ಲಿ ಬರೆದಿರುತ್ತಾರೆ. ಇದರಲ್ಲಿ ಅನೇಕಾಂಶ ಸಮುದ್ರಗಳ್ಳರ ಹಾಗೂ ವೈರಿಗಳ ದಾಳಿಗೆ ತುತ್ತಾದರೂ ಯುರೋಪಿಗೆ ತಲುಪಿದ ಧನರಾಶಿ ಊಹಾತೀತವಾಗಿತ್ತು. ಈ ಧನಲೋಹಗಳು ಸ್ಪೈಯಿನಿನಲ್ಲಿ ಟಂಕಗೊಂಡು, ವ್ಯಾಪಾರಮುಖೇನ ಯುರೋಪಿನ ಮೂಲೆ ಮೂಲೆಯನ್ನೂ ತೋಯಿಸಿತು. ಯುರೋಪಿನ ಮೂಲೆ ಮೂಲೆಗೂ ಹೊಸ ಖಂಡದ ಸುದ್ದಿ ತಲುಪಿಸಿದ್ದು ಈ ಧನವೃಷ್ಟಿಯಲ್ಲದೇ, ಕೊಲಂಬಸ್ ಪಿಝಾರೋ, ಕೋರ್ಟೆಸರ ರೋಮಾಂಚಕ ಸಾಹಸಗಳಲ್ಲ.

ಈ ಧನವೃಷ್ಟಿಯು ಎಲ್ಲರಿಗೂ ಹಿತವನ್ನುಂಟು ಮಾಡಲಿಲ್ಲ. ವ್ಯಾಪಾರಿಗಳಿಗೆ ಹಾಲೋಗರ ಉಣಿಸಿದರೂ. ಕೆಲವರಿಗೆ ಕಹಿ ತುತ್ತಾಗದೇ ಬಿಡಲಿಲ್ಲ. ಈ ವೃಷ್ಟಿಯ ಮೊದಲನೆಯ ಪರಿಣಾಮವಾಗಿ ಸ್ಪೈಯಿನಿನಲ್ಲಿ ೧೫೦೦–೧೬೦೦ರ ನಡುವೆ ಬೆಲೆಗಳು ಏರಿದವು. ಇಂಗ್ಲೆಂಡಿನಲ್ಲಿ ಕೊಲಂಬಸನ ಪೂರ್ವದಲ್ಲಿ ತೂಕಡಿಸುತ್ತಿದ್ದ ಬೆಲೆಗಳನ್ನು ೧೦೦ ಎಂದುಕೊಂಡರೆ ೧೬ನೆಯ ಶತಮಾನದ ಅಂತ್ಯದಲ್ಲಿ ೨೫೦ಕ್ಕೇರಿದವು. ೫೦ ವರ್ಷದ ನಂತರ ೧೬೭೩–೮೨ರ ದಶಕ ತಲುಪಲು ೩೫೦ಕ್ಕೆ ಹೆಡೆಯೇರಿಸಿ ನಿಂತವು. ಯೂರೋಪಿನ ಇತರ ದೇಶಗಳಲ್ಲೂ ಪರಿಸ್ಥಿತಿ ಇಂತೆಯೇ ಇತ್ತು. ಅನೇಕ ಕಡೆಗಳಲ್ಲಿ ನಾಣ್ಯಗಳನ್ನು ಟಂಕ ಹೊಡಿಸುವುದು ಒಂದು ಮುಖ್ಯ ಕೈಗಾರಿಕೆಯಾಯಿತು. ಇದಕ್ಕೆ ಮುಖ್ಯ ಕಾರಣ ನಾಣ್ಯಗಳಲ್ಲಿ ಕಲಬೆರಕೆ ಉಂಟು ಮಾಡಿ ಲಾಭ ಪಡೆಯಲು ಅವಕಾಶ ದೊರೆತಿರುವುದು.

ಈ ದೀರ್ಘವಾದ ಬೆಲೆ ಏರಿಕೆಯ ಯುಗವು ವ್ಯಾಪಾರಿಗಳಿಗೆ ಸುಗ್ಗಿಯಾಯಿತು. ಸ್ಪೈಯಿನಿನಲ್ಲಂತೂ ಕೂಲಿ ಜೀತ ವೇತನಗಳು ಹೆಚ್ಚಿನ ಮಟ್ಟಕ್ಕೆ ಬೆಲೆಗಳೊಂದಿಗೆ ಹೆಗಲು ಕೊಟ್ಟೇ ನಡೆದುದರಿಂದ ಹಣವು ಜನರಲ್ಲಿ ಹಂಚಿ ಹೋಯಿತು. ಆದರೆ ಇಂಗ್ಲೆಂಡಿನಲ್ಲಿ ಜೀತಗಳು, ಬೆಲೆಗಳು ಬಹಳ ಹಿಂದುಳಿದವು.

೧೬೭೩–೮೨ರ ದಶಕದಲ್ಲಿ ಬೆಲೆಗಳು ೩½ ಪಾಲಿಗೇರಿದಾಗ, ಕೂಲಿ ಜೀತಗಳು ೨ಕ್ಕೂ ಏರಲಿಲ್ಲ. ಕೂಲಿ ಕೊಂಬವರ ನಷ್ಟ ಕೂಲಿ ಕೊಡುವವರ ಲಾಭವಾಯಿತು. ಧನವೆಲ್ಲ ಅನೇಕಾಂಶ ವ್ಯಾಪಾರಿಗಳ ಕೈಯಲ್ಲೇ ಸೇರಿಕೊಂಡಿತು. ಬೆಲೆ ಏರಿಕೆ ಸಮಯದಲ್ಲಿ ವ್ಯಾಪಾರ ಮಾಡಲು ಹೆಚ್ಚಿನ ಕುಶಲತೆ ಬೇಡ. ಮಾಲು ತೆಗೆಸಿದರೆ ಸಾಕು. ಮಿಕ್ಕೆಲ್ಲವನ್ನು ಕಾಲಾವಧಿಯೇ ಸಾಧಿಸುವುದು. ಸ್ವಲ್ಪ ಬಂಡವಾಳ ಕೈಸೇರಿದೊಡನೆ. ಅದನ್ನು ಹೆಚ್ಚಿಸಲು ಅನೇಕರು ವ್ಯಾಪಾರಕ್ಕೆ ಇಳಿದರು. ಯೂರೋಪಿನಲ್ಲಿ ಧನವ್ಯಾಮೋಹ ಬೆಳೆದು ಬಂಡವಾಳಶಾಹಿಯು ಬೇರೂರಲು ಇದು ಪ್ರಬಲ ಕಾರಣವಾಗಿತ್ತೆಂದು ಗ್ಯಾಲ್ಬ್ರಾಯಿತರು

ಅಭಿಪ್ರಾಯ ಪಟ್ಟಿರುತ್ತಾರೆ. "ಧನ ಕೈಸೇರಿದರೆ ಅದರ ಮೇಲಿನ ವಾತ್ಸಲ್ಯವೂ ಬೆಳೆಯುವುದೆಂದು ಜವೆನಾಲ್ ಎಂಬ ರೋಮನ್ ಕವಿ ಕ್ರಿಸ್ತ ಶಕದಾದಿಯಲ್ಲಿ ನುಡಿದ ವ್ಯಂಗ್ಯೋಕ್ತಿ ಅಕ್ಷರಶಃ ಸತ್ಯವಾಯಿತು.

ಯೂರೋಪಿನಲ್ಲಿ ವ್ಯಾಪಾರವು ಬಲಪಟ್ಟಂತೆ ಅನೇಕ ಬ್ಯಾಂಕು ಸಂಸ್ಥೆಗಳು ಹುಟ್ಟಿಕೊಂಡವು. ಆಧುನಿಕ ಬ್ಯಾಂಕ್ ವ್ಯವಹಾರ ಪದ್ಧತಿಗಳು ರೂಪವೆತ್ತಿದ್ದು ಈ ಯುಗಗಳಲ್ಲೇ. ಎಲ್ಲರಿಗೂ ಧನವೇ ಪುರುಷಾರ್ಥದ ಮುಖ್ಯ ಸಾಧನವೆಂದು ತೋರಲಾಗಿ, ಹಣದಿಂದ ಹಣಕೂಡಿಸುವ ಅನೇಕ ಸಂಸ್ಥೆಗಳು ಆಗ ತಲೆ ಎತ್ತಿದವು. ಬ್ರಿಟನಿನ ಈಸ್ಟ್ ಇಂಡಿಯಾ ಕಂಪೆನಿ, ಹಾಲೆಂಡಿನಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪೆನಿ ಜನ್ಮವೆತ್ತಿ ಬಲಪಟ್ಟುದೂ ಇದೇ ಯುಗದಲ್ಲಿ.

ಆದರೆ ಹಣವೇ ಮೌಲ್ಯದ ತೌರು. ಎಂಬ ಭಾವನೆಯ ಮೇಲೆ ಕಾಲ ಕ್ರಮೇಣ ತಜ್ಞರಿಗೆ ಅನುಮಾನ ಮೂಡಲು ಆರಂಭವಾಯಿತು. ಧನದಾಸೆಗೆ ಬಲಿಬಿದ್ದು ಅದನ್ನು ಬಿಸಿಲುಗುದುರೆಯಂತೆ ಹಿಂಬಾಲಿಸಿದವರು ಆರ್ಥಿಕ ಪತನಕ್ಕೆ ಗುರಿಯಾಗುತ್ತಿದ್ದುದು ಪದೇ ಪದೇ ಕಂಡು ಬರುತ್ತಿದ್ದುದೇ ಈ ಪರಿವರ್ತನೆಗೆ ಕಾರಣ. ನೀತಿ ನಿಯಂತ್ರಣವಿಲ್ಲದ ವ್ಯವಹಾರ, ಪತನಕ್ಕೆ ಕಾರಣವೆಂದು ಅನೇಕ ಅನುಭವಗಳು ವಿವೇಕದ ಪಾಠವನ್ನು ಒತ್ತಿಹೇಳುತ್ತಿದ್ದವು.

ಹಣದ ಮೌಲ್ಯ ಕಲ್ಪನೆಯ ಮೇಲೆ ಮೊದಲನೆಯ ಸೂತ್ರವೆಂಬ, ಕ್ವಾಂಟಿಟಿ ಥಿಯರಿ (Quantity Theory) ಎಂಬುದನ್ನು "ಜಾನ್ ಸ್ಟುವರ್ಟ್ ಮಿಲ್" ಎಂಬ ಆಂಗ್ಲ ಅರ್ಥಜ್ಞನು. ಆತ ೧೮೪೮ರಲ್ಲಿ ಬರೆದ "ರಾಜಕೀಯ ಅರ್ಥ ಶಾಸ್ತ್ರದ ಮೂಲ ತತ್ತ್ವಗಳು" (Principles of Political Economy) ಎಂಬುದರಲ್ಲಿ ಹೀಗೆ ಸೂಚಿಸಿರುತ್ತಾನೆ. "ಹಣದ ಕ್ರಯ ಸಾಮರ್ಥ್ಯವು (purchasing power) ಪ್ರಥಮವಾಗಿ ಪೂರೈಕೆ ಬೇಡಿಕೆಗಳನ್ನು ಅನುಸರಿಸಿರುತ್ತದೆ. ಪೂರೈಕೆ (supply) ಯೆಂದರೆ ಆ ಸಮಯದಲ್ಲಿ ಚಲಾವಣೆಯಲ್ಲಿರುವ ಹಣದಮೊತ್ತವೆಂದು ತಿಳಿಯತಕ್ಕದ್ದು. ಬೇಡಿಕೆ (demand) ಯೆಂದರೆ, ಮಾರಾಟದಲ್ಲಿರಿಸಿರುವ ಎಲ್ಲ ಮಾಲುಗಳ ಮೊತ್ತ ಎಂದು ತಿಳಿಯಬೇಕು."

ಈ ಸೂತ್ರವು ಚಲಾವಣೆಯ ಪ್ರಭಾವವನ್ನು ನಿರ್ಲಕ್ಷಿಸಿರುವುದು ಗಮನೀಯ. ಇದರ ಪ್ರಭಾವವು ೧೯೩೦ರಲ್ಲಿ ಅಮೆರಿಕಾದಲ್ಲಿ ಸಂಭವಿಸಿದ ಮಹಾ ಆರ್ಥಿಕ ಸನ್ನಿಪಾತ (Great Depression)ವರೆಗೂ ತಜ್ಞರ ಲಕ್ಷ್ಯಕ್ಕೆ ಬರಲಿಲ್ಲ. ೧೯ನೆಯ ಶತಮಾನದಲ್ಲಿ ಸಾಧಾರಣ ೨೦ ವರ್ಷಗಳಿಗೊಮ್ಮೆಯಂತೆ ವ್ಯಾಪಾರದ ಏರುಪೇರುಗಳಿಂದ ಆರ್ಥಿಕ ಪತನಗಳು ಆಗುತ್ತಲೇ ಇದ್ದವು. ಇದರಲ್ಲಿ ಮಹಾ ಗಂಭೀರವಾದದ್ದು ೧೯೩೦ರ ಸನ್ನಿಪಾತ. ಆಗ ಸಾಧಾರಣ ೯೦೦೦ ಅಮೆರಿಕದ ಬ್ಯಾಂಕುಗಳು ಮಣ್ಣು ಕಚ್ಚಿದವು. ೫ ಲಕ್ಷ ಕಾರ್ಮಿಕರು ತಮ್ಮ ಕೆಲಸವನ್ನು ಕಳೆದುಕೊಂಡರು. ಉತ್ಪಾದನೆ ಸ್ಥಗಿತಗೊಂಡಿತು. ದೇಶದ ಪರಿಸ್ಥಿತಿ ಭೀಕರವಾಯಿತು. ಆಗ ಆಳವಾದ ಅಧ್ಯಯನವನ್ನು ನಡೆಸಿ, ಇರ್ವಿಂಗ್ ಫಿಷರೆಂಬ ಅಮೆರಿಕದ ಗಣಿತ ಅರ್ಥಜ್ಞನು ಹಣದ ಕ್ರಯ ಸಾಮರ್ಥ್ಯಕ್ಕೂ ಚಲಾವಣೆಯಲ್ಲಿರುವ ಹಣದ ಮೊತ್ತ ಹಾಗೂ ಚಲಾವಣೆಗೂ ಇರುವ ಸಂಬಂಧವನ್ನು ಒಂದು ಸಮೀಕರಣ ರೂಪದಲ್ಲಿ ಸಿದ್ಧಪಡಿಸಿದನು. ಇದು ವಿನಿಮಯ ಸಮೀಕರಣ (Exchange Equation) ವೆಂದು ಪ್ರಸಿದ್ಧವಾಗಿದೆ. ಇದರ ರೂಪ ಹೀಗಿರುತ್ತದೆ

$$P = \frac{M.V. + M'.V'.}{T}$$

P ಎಂದರೆ ಮೌಲ್ಯ. M ಎಂದರೆ ಚಲಾವಣೆಯಲ್ಲಿರುವ ಹಣದ ಮೊತ್ತ. ಎಂದರೆ ಅದರ ಚಲಾವಣೆಯ ತೀವ್ರತೆ (circulation velocity). M ಎಂದರೆ ಚೆಕ್ಕಿಗೆ ಅನುಕೂಲವಿರುವ ಠೇವಣಿಗಳ ಮೊತ್ತ V' ಎಂದರೆ ಅವು ಮಗಚುವ ತೀವ್ರತೆ (Rate of turn over) T ಎಂದರೆ ವ್ಯವಹಾರ ಸನ್ನಿವೇಶಗಳ ಮೊತ್ತ ಅಥವಾ ವ್ಯಾಪಾರದ ಮಟ್ಟ ಅಥವಾ ಪರಿಸ್ಥಿತಿ. (Level of Trade).

ಇದರಿಂದ ಹಣದ ಮೌಲ್ಯವು ವ್ಯಾಪಾರದ ಸ್ಥಿತಿಗತಿಯನ್ನೇ ಅನುಸರಿಸುವುದು. ನಾಣ್ಯದ ಧಾತುವಿಗೂ ಸ್ವಕೀಯ ಮೌಲ್ಯಕ್ಕೂ ವ್ಯಾವಹಾರಿಕ ಮೌಲ್ಯಕ್ಕೂ ಯಾವ ಸಂಬಂಧವಿಲ್ಲವೆಂದು ಸಿದ್ಧಾಂತವಾಯಿತು. ಆ ವರೆಗೆ ಹಣ ನಾಣ್ಯದ ವಸ್ತುವಿಗೂ ಅದರ ಕ್ರಯ ಸಾಮರ್ಥ್ಯಕ್ಕೂ ಯಾವುದೋ ಒಂದು ವಿಶೇಷ ಸಂಬಂಧವಿರಬೇಕೆಂಬ ಭಾವನೆ ನಿರಾಧಾರವೆಂದು ತೀರ್ಮಾನಿಸಲಾಯಿತು. ಇದು ಅರ್ಥಶಾಸ್ತ್ರದ ಕ್ರಾಂತಿಕಾರಿ ಪರಿವರ್ತನೆ ಎಂಬುವುದರಲ್ಲಿ ಸಂದೇಹವಿಲ್ಲ. ಈ ತತ್ವವನ್ನು ನಿರ್ಲಕ್ಷಿಸಿರುವುದೇ ಭಾರತದ ದಾರಿದ್ರ್ಯಕ್ಕೆ ಕಾರಣ ಎಂಬುದನ್ನು ಈಗ ನಾವು ಕಾಣಬಹುದು. ಈ ಸಂದರ್ಭದಲ್ಲಿ ಒಂದು ಜ್ಞಾನೋಕ್ತಿಯನ್ನು ಜ್ಞಾಪಿಸಿಕೊಳ್ಳಬಹುದು:

"When wealth is lost naught is lost
When health is lost a mite is lost
When character is lost all is lost"
"ಹಣವಳಿದರೆ 'ಏನೂ ಅಳಿಯಲಿಲ್ಲ
ಆರೋಗ್ಯವಳಿದರೆ ತುಸು ಅಳಿಯಿತು
ನೀತಿ ಅಳಿದರೆ ಸರ್ವವೂ ಅಳಿಯಿತು"

ಯುರೋಪಿನಲ್ಲಿ ಸಂಭವಿಸಿದ ಅನೇಕ ರಾಜಕೀಯ ವಿಪ್ಲವಗಳು ಆರ್ಥಿಕ ಹಿನ್ನೆಲೆಯನ್ನು ಹೊಂದಿಕೊಂಡಿವೆ ಎಂಬುದು ಚರಿತ್ರೆಯ ಮುಖ್ಯ ಸಂದೇಶ. ಧನವ್ಯಾಮೋಹವೇ ಎಲ್ಲಾ ಸಾಮಾಜಿಕ ಜಾಡ್ಯಗಳಿಗೆ ಮೂಲ ಕಾರಣವೆಂಬುದು ನಿರ್ವಿವಾದ. ನಮ್ಮ ಶಾಸ್ತ್ರದಲ್ಲಿ "ಮಾಗೃಧಃ ಕಸ್ಯಚಿದ್ಧನಂ" (ಯಾರದ್ದೂ ಆಶಿಸಬೇಡ) ಎಂದು ಹೇಳಿರುವ ಸತ್ಯವನ್ನೇ ಆಧುನಿಕ ತಜ್ಞರೂ ಕಂಡು ಹಿಡಿದಿರುವುದೂ ಗಮನೀಯ.

ಭಾರತದಲ್ಲಿ ಹರಿಯುತ್ತಿದ್ದ ನಿರಂತರ ಧನದ ಝರಿ

ಭಾರತದಲ್ಲಿ ಅನೇಕ ಶತಮಾನಗಳಿಂದ ಧನದ ಝರಿಯು ವ್ಯಾಪಾರದ ಮಾರ್ಗದಲ್ಲಿ ಒಳಹರಿಯುತ್ತಲೇ ಇತ್ತು. ರೋಮನ್ ಚರಿತ್ರಕಾರನಾದ ಪ್ಲಿನೀಯು (Pliny) ಭಾರತವನ್ನು "ಅಮೂಲ್ಯ ಲೋಹಗಳ ಇಂಗು ಕೂಪ" (sink of precious metal) ಎಂದು ಕರೆದಿರುತ್ತಾನೆ ಎಂದು ಸಿ.ಪಿ ನ್. ಕುಕ್ ೧೮೬೭ರಲ್ಲಿ ಬರೆದ ಒಂದು ಪುಸ್ತಕದಲ್ಲಿ ಬರೆದಿರುತ್ತಾನೆ. ಭಾರತದ ಜನಾಂಗದಲ್ಲಿ ಬೆಳ್ಳಿ ಹೊನ್ನು ಒಡವೆಗಳ ಮೇಲೆ ವಿಶೇಷ ಆಸಕ್ತಿ ಇರುವುದರಿಂದ. ದೇಶವನ್ನು ಹೊಕ್ಕ ಹೇಮ ರಜತವೆಲ್ಲ ಚಲಾವಣೆಯಲ್ಲಿರದೇ ಮಾಯವಾಗಿ ಬಿಡುತ್ತಿತ್ತು. ಚಲಾವಣೆಯಲ್ಲಿ ಹಣದ ಅಭಾವವಿರುವುದರಿಂದ, ಮಾಲುಗಳ ಬೆಲೆಗಳು ತಗ್ಗಿನ ಮಟ್ಟದಲ್ಲೇ ಇದ್ದವು. ಇದು ವಿದೇಶ ವ್ಯಾಪಾರಿಗಳಿಗೂ ಸ್ಥಳೀಯ ವರ್ತಕರಿಗೂ ವಿಶೇಷ ರೂಪದಲ್ಲಿ ಅನುಕೂಲವಾಗಿತ್ತು. ವ್ಯಾಪಾರದ ಲಾಭವೆಲ್ಲ ವೈಶ್ಯರ ಕೈಗೇ ಸೇರಿಕೊಳ್ಳುತ್ತಿತ್ತು. ಗ್ರಾಮೀಣ ಮಟ್ಟದಲ್ಲಿ ವ್ಯಾಪಾರವೇ ರೂಢಿಯಲ್ಲಿದ್ದು ಹಣದ /ಅಭಾವದಿಂದ ಅವರು ಹೆಚ್ಚು ಬಾಧಿತರಾಗುತ್ತಿದ್ದಿಲ್ಲ. ದೇಶದ ಆರ್ಥಿಕ ವ್ಯವಸ್ಥೆಯ ಕಡಿವಾಣವು ವರ್ತಕರ ಕೈಯಲ್ಲೇ ಇತ್ತು. ರಾಜರೆಲ್ಲ ರಾಜ್ಯ ಪಿಪಾಸೆಯಿಂದ ಯುದ್ಧಾಸಕ್ತರಾಗಿದ್ದು, ಆರ್ಥಿಕ ವ್ಯವಸ್ಥೆಯ ಮೇಲೆ ನಿರುತ್ಸಾಹಿಗಳಾಗಿಯೇ ಇದ್ದರೆಂದು ತೋರುತ್ತದೆ. ಬ್ಯಾಂಕು ಸಂಸ್ಥೆಗಳಿದ್ದುದು ಪ್ರಾಚೀನ ಭಾರತದ ಚರಿತ್ರೆಯಲ್ಲಿ ಕಂಡುಬರುವುದೇ ಇಲ್ಲ. ಇವುಗಳನ್ನು ಸ್ಥಾಪಿಸಿದ ಕೀರ್ತಿ ಬ್ರಿಟಿಷರಿಗೇ ಸಲ್ಲಬೇಕು.

ಹಿಂದೂ ಸಮಾಜದಲ್ಲಿ ವರ್ಣಾಶ್ರಮ ಧರ್ಮದ ಪ್ರಭಾವವು ವಿಶೇಷವಾಗಿ ಇದ್ದುದನ್ನು ಎಲ್ಲರೂ ಒಪ್ಪುತ್ತಾರೆ. ಅಮರ ಕೋಶದ ದ್ವಿತೀಯ ಕಾಂಡದಲ್ಲಿ ಬ್ರಹ್ಮವರ್ಗ. ಕ್ಷತ್ರಿಯ ವರ್ಗ. ವೈಶ್ಯ ವರ್ಗ ಹಾಗೂ ಶೂದ್ರ ವರ್ಗ ಎಂಬ ಭಾಗಗಳಿವೆ. ಅವುಗಳಲ್ಲಿ ಆಯಾ ಸಾಮಾಜಿಕ ಪಂಗಡಗಳಿಗೆ ಸಂಬಂಧಪಟ್ಟ ವೃತ್ತಿಗಳ ಪದಗಳನ್ನೆಲ್ಲಾ ಒಟ್ಟಾಗಿ ಕೊಟ್ಟಿರುವುದು ಗಮನಾರ್ಹ. ವೈಶ್ಯ ವರ್ಗದವರಿಗೆ ಕೃಷಿ. ಗೋ ಸಂಗೋಪನೆ. ಪಾಕಶಾಸ್ತ್ರ ಹಾಗೂ ವ್ಯಾಪಾರ ವ್ಯವಹಾರಕ್ಕೆ ಸಂಬಂಧಿಸಿದ ಪದಗಳು

ಕಾಣಿಸಿಕೊಳ್ಳುತ್ತವೆ. ಆದ್ದರಿಂದ ವೈಶ್ಯರ ಪ್ರಭಾವವು ಸಮಾಜ ವ್ಯವಹಾರಗಳಲ್ಲಿ ವಿಶೇಷವಾಗಿತ್ತೆಂಬ ನಿರ್ಧಾರ ಸಾಧ್ಯ. ಬೇರಾವ ಸರ್ಗಗಳಲ್ಲೂ ಈ ವೃತ್ತಿಗಳಿಗೆ ಸಂಬಂಧಿಸಿದ ಪದಗಳು ಕಾಣದಿರುವುದು ಗಮನಾರ್ಹ.

೧೯ನೆಯ ಶತಮಾನದಲ್ಲಿ ಒಳ ಕೈಯಲ್ಲಿದ್ದ ಸ್ಥಳೀಯ ವ್ಯಾಪಾರ ಪದ್ಧತಿಗಳನ್ನು ಸಿ. ಎನ್. ಕುಕ್ ಎಂಬ ಬೆಂಗಾಲ್ ಬ್ಯಾಂಕಿನ ಅಡಳಿತಾಧಿಕಾರಿಗಳಲ್ಲೊರ್ವ ೧೮೬೩ರಲ್ಲಿ ಮುದ್ರಿಸಿರುವ "ಭಾರತದಲ್ಲಿ ಬ್ಯಾಂಕು ಸಂಸ್ಥೆಗಳ ಅಭ್ಯುದಯ ಬೆಳವಣಿಗೆ ಹಾಗೂ ವರ್ತಮಾನ ಪರಿಸ್ಥಿತಿ (The Rise, Progress, and Present Position of Banking in India) ಎಂಬ ಪುಸ್ತಕದಲ್ಲಿ ಭಾರತ ಸಮಾಜದಲ್ಲಿ ವಣಿಜನ ಸ್ಥಾನ ಅತಿ ಮುಖ್ಯವಾಗಿತ್ತು. ರಾಜನ ಮಂತ್ರಿಮಂಡಲದಲ್ಲಿ ರಾಜ್ಯದ ವಣಿಜಾಗ್ರಣಿಗೆ ಒಂದು ವಿಶೇಷ ಸ್ಥಾನವಿದಲಾಗಿತ್ತು. ಸಮಾಜದ ಪ್ರತಿಯೊಂದು ಹಂತದಲ್ಲೂ ವರ್ತಕರ ಸ್ಥಾನ ಬಲವಾಗಿತ್ತು. ಇವರ ಮುಂಗಮುಷ್ಟಿಯಲ್ಲೇ ಲೋಕದ ವ್ಯಾಪಾರ ವ್ಯವಹಾರಗಳೆಲ್ಲವೂ ಭದ್ರವಾಗಿ ಅಡಕವಾಗಿತ್ತು. ಅವರು ಸಾಂಪ್ರದಾಯಿಕವಾಗಿ ಇರಿಸಿಕೊಂಡ ವ್ಯವಹಾರ ಪದ್ಧತಿಗಳೆಲ್ಲಾ ಹಣವನ್ನು ತಮ್ಮೆಡೆಗೇ ಸೆಳೆದುಕೊಳ್ಳುವಂತಿದ್ದುದನ್ನು ಗಮನಿಸಬೇಕು. ಇದರ ಮುಖ್ಯ ಪರಿಣಾಮ ಉತ್ಪಾದಕರ ಕೈಯಲ್ಲಿ ಹಣ ಸೇರದೇ ಅದರ ಉಪಯೋಗ ಇಲ್ಲದೆ ಹೋದದ್ದು. ನಾಣ್ಯದ ರೂಪದಲ್ಲಿ ಹಣವನ್ನು ಗ್ರಾಮೀಣ ಬಜಾರು ಸಂತೆಗಳಲ್ಲಿ ಉಪಯೋಗಿಸುತ್ತಲೇ ಇರಲಿಲ್ಲ. ನಾಣ್ಯದಲ್ಲಿ ಸರಕುಗಳ ಬೆಲೆಗಳು ಅತಿ ತಗ್ಗಿನ ಮಟ್ಟದಲ್ಲಿದ್ದುದರಿಂದ, ಸಂತೆ ಬಜಾರುಗಳಲ್ಲಿ ಕವಡೆ ಚಿಪ್ಪನ್ನೇ ಹಣದ ಸ್ಥಾನದಲ್ಲಿ ಉಪಯೋಗಿಸಲಾಗುತ್ತಿತ್ತು. ಕುಕ್ ತನ್ನ ಪುಸ್ತಕದಲ್ಲಿ ಕವಡೆ ಚಿಪ್ಪಿನ ಹಣ ಕೋಷ್ಟಕವನ್ನು ಈರೀತಿಯಲ್ಲಿ ಕೊಟ್ಟಿರುತ್ತಾನೆ.

೪ ಕವಡೆಗಳು = ೧ ಗುಂಡ
೨೦ ಗುಂಡಗಳು = ೧ ಪಣ (ಮುಂಚಿನ ಕಾಲಾಣೆಯ ತಾಮ್ರ ನಾಣ್ಯ) ಒಂದು ಹಳೆಯ ಪೈಸೆ
೪ ಪೈಸೆಗಳು = ಒಂದು ಆಣೆ
೪ ಆಣೆಗಳು = ೧ ನಾಲ್ಕಾಣೆ ಪಾವಲಿ (ನಮ್ಮಲ್ಲಿ ಇದನ್ನು ಚಕ್ರವೆಂದು ಕರೆಯುತ್ತಿದ್ದರು.)
೪ ಚಕ್ರಗಳು = ೧ ರೂಪಾಯಿ (ಸಂಸ್ಕೃತದ ರೂಪ್ಯವೆಂಬುದರ ತದ್ಭವ)

ಈ ಕೋಷ್ಟಕದ ಪ್ರಕಾರ ಒಂದು ರೂಪಾಯಿಗೆ ೫,೧೨೦ ಕವಡೆಗಳು ಬರುತ್ತಿದ್ದವು. ಆದರೆ ಅವುಗಳ ಕ್ರಯಸಾಮರ್ಥ್ಯದಲ್ಲಿ ವಿಶೇಷ ಬದಲಾವಣೆಗಳು 'ಮಿಲ್ಲ'ನ ಸೂತ್ರವನ್ನು ಅನುಸರಿಸಿ ಆಗುತ್ತಿದ್ದವು. ಕವಡೆ ಚಿಪ್ಪಿನ ಬಳಕೆ ಈಗಿನ ಅನೇಕ ಹಳೆಬರ ನೆನಪಿನಲ್ಲಿರುತ್ತದೆ. ಹಣದ ಕ್ರಯಸಾಮರ್ಥ್ಯದ ವಿಷಯದಲ್ಲಿ ನಮ್ಮ ವರ್ತಕರು ನುರಿತಿದ್ದಂತೆ ಕಾಣುತ್ತದೆ.

ವರ್ತಕರು ಕವಡೆ ಮೂಟೆಗಳನ್ನು ಹೊತ್ತುಕೊಂಡು ಹಳ್ಳಿ ಹಳ್ಳಿಯ ಸಂತೆ ಬಜಾರುಗಳನ್ನು ಸೇರಿಕೊಳ್ಳುತ್ತಿದ್ದರು ಅವರಲ್ಲಿ ಶ್ರೀಮಂತರಾದವರು ತಮ್ಮ ಧನ ಮೂಟೆಗಳನ್ನು ಹೊರಲು ಹೋರಿಗಳನ್ನು ಉಪಯೋಗಿಸುತ್ತಿದ್ದರು. ಒಂದು ಬಲಿಷ್ಟ ಪ್ರಾಣಿಯು ನೂರೈವತ್ತು ರೂಪಾಯಿಗಳಷ್ಟು ಕವಡೆಗಳನ್ನು ಹೊರುತ್ತಿತ್ತೆಂದು ಕುಕ್ ವಿವರಿಸುತ್ತಾನೆ. ಇದರಿಂದಲೇ ಶ್ರೀಮಂತ ವರ್ತಕನಿಗೆ ಸಾಹುಕಾರ (ಸೌಗಾರ)ನೆಂಬ ಹೆಸರು ಬಂದಿರಬೇಕು.

ಸಂತೆಗೆ ಸರಕು ಕೊಳ್ಳಲು ಬಂದ ಗ್ರಾಹಕರು. ಆಣೆಗೆ ೩೬೦ ರಂತೆ ನಾಣ್ಯಗಳನ್ನು ತೆತ್ತು ತಮಗೆ ಬೇಕಾದಷ್ಟು ಕವಡೆಗಳನ್ನು ಪಡಕೊಳ್ಳುತ್ತಿದ್ದರು. ದಿನಾಂತ್ಯದಲ್ಲಿ ಸರಕು ವರ್ತಕರು ತಮ್ಮಲ್ಲಿ ಸೇರಿರುವ ಕವಡೆಗಳನ್ನು ಒಂದಾಣೆಗೆ ೩೭೦ ರಂತೆ ಕೊಟ್ಟು ನಾಣ್ಯಗಳನ್ನು ಪಡೆದುಕೊಳ್ಳುತ್ತಿದ್ದರು. ಈ ವ್ಯವಹಾರದಲ್ಲಿ ಕವಡೆ ವ್ಯಾಪಾರಿಗೆ ಒಂದು ಸಲಕ್ಕೆ ೧/೩೬ ರಷ್ಟು ಲಾಭ ಗಿಟ್ಟುವುದನ್ನು ಕಾಣಬಹುದು. ಅನೇಕ ಕಡೆಗಳಲ್ಲಿ ವಾರಕ್ಕೊಮ್ಮೆ ಸಂತೆ ಸೇರುತ್ತಿದ್ದುದು ಮಾಮೂಲಾಗಿತ್ತು. ಇದರಿಂದ ಒಂದು ವರ್ಷದ ಲಾಭ. ೧೪೪ ಪ್ರತಿಸಲ ಗಿಟ್ಟುತ್ತಿರುವುದು ಗಮನಾರ್ಹ.

ವರ್ತಕರು ತಮ್ಮ ಭೃತ್ಯರಿಗೆ ಮಾಸಿಕ ವೇತನಗಳನ್ನು ನಾಣ್ಯ ರೂಪದಲ್ಲೇ ಕೊಡುತ್ತಿದ್ದರು. ಇವು ತಗ್ಗಿನ ಮಟ್ಟದಲ್ಲೇ ಇದ್ದುವೆನ್ನುವುದರಲ್ಲಿ ಸಂಶಯವಿಲ್ಲ. ಮಾಸದ ನಡುವಲ್ಲಿ ಭೃತ್ಯರು

ಒಡೆಯನಿಂದ ಪ್ರತಿ ಖರ್ಚಿಗಾಗಿ ಕವಡೆಗಳ ರೂಪದಲ್ಲೇ ಕೈ ಸಾಲಗಳನ್ನು ಪಡೆದುಕೊಳ್ಳುತ್ತಿದ್ದರು. ಮಾಸಾಂತ್ಯದಲ್ಲಿ ನಾಣ್ಯರೂಪದಲ್ಲೇ ಸಾಲಗಳು ವಸೂಲಾಗುತ್ತಿದ್ದವು. ಆಗ ವ್ಯಾಪಾರಿಯು ರೂಪಾಯಿಗೆ ೭೦ ಗುಂಡಗಳಂತೆ ಲೆಕ್ಕವಿಡುತ್ತಿದ್ದುದರಿಂದ ಅವನಿಗೆ ೬/೬೪ ರಷ್ಟು ಲಾಭ ಇದರಲ್ಲೂ ಗಿಟ್ಟುತ್ತಿತ್ತು. ವಾರ್ಷಿಕ ಲಾಭಾಂಶವು ೧೧೨% ಪ್ರತಿ ಸಲ ಗಿಟ್ಟುತ್ತಿತ್ತು.

ಕೈ ಸಾಲಗಳನ್ನು ಕೊಡುವಾಗಲೂ ತಮ್ಮೊಳಗೆ ತಿಂಗಳ ಬಡ್ಡಿಯು ೫ ರಿಂದ ೬ ಪ್ರತಿಶತ ರೂಢಿಯಲ್ಲಿತ್ತು (ವರ್ಷಾವಧಿ ಬಡ್ಡಿ ೬೦ ರಿಂದ ೭೨ರ ಪ್ರತಿಶತ). ೬೬ ಪ್ರತಿಶತಿಗಿಂತ ಕಮ್ಮಿಯ ವರ್ಷಾವಧಿ ಬಡ್ಡಿ ಯಾವ ಸಂದರ್ಭದಲ್ಲೂ ಇರುತ್ತಿರಲಿಲ್ಲ. ವೈಶ್ಯರಿಗೆ ಅಮರದಲ್ಲಿ "ಭೂಮಿಸ್ಪೃಶ" ನೆಂಬ ನಾಮಧೇಯವಿರುವುದು ಗಮನಾರ್ಹ. ಸಾಂಪ್ರದಾಯಿಕವಾದ ಭೂಕರವು ಉತ್ಪಾದನೆಯಲ್ಲಿ ಮೂರನೇ ಒಂದಂಶ ರಾಜನಿಗೆ ಸಲ್ಲುವುದಿತ್ತು. ಇದನ್ನು ವಸೂಲು ಮಾಡಿ, ಮಾರಿ ಹಣ ತೆರುವ ಜವಾಬ್ದಾರಿ ವೈಶ್ಯನದಾಗಿತ್ತು. ಶೂದ್ರರಿಗೆ ಭೂಮಿಯ ಮೇಲೆ ದುಡಿಯುವ ಅಧಿಕಾರ ಮಾತ್ರ ಇತ್ತೆನ್ನಬಹುದು. ಆದರೆ ಬರಗಾಲದಲ್ಲಿ ಫಸಲು ನಷ್ಟವಾದಾಗ ರೈತನಿಗೆ ವ್ಯಾಪಾರಿಯಿಂದ ಆಹಾರ ಹಾಗೂ ಬೀಜದ ರೂಪದಲ್ಲಿ ಉಧಾರ ಪಡೆಯುವುದು ಅನಿವಾರ್ಯವಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಆಹಾರಕ್ಕಾಗಿ ಸಾಲ ಪಡೆದು ಧಾನ್ಯವನ್ನು ಅರ್ಧದಷ್ಟು ಸೇರಿಸಿ ಮುಂದಿನ ಫಸಲಿನಲ್ಲಿ ಹಿಂತಿರುಗಿಸಬೇಕಾಗಿತ್ತು. ಬೀಜದ ಧಾನ್ಯವನ್ನು ಎರಡು ಪಟ್ಟಿನಲ್ಲಿ ಮರುಪಾವತಿ ಪಡೆಯಲಾಗುತ್ತಿದ್ದುದು ರೂಢಿ. ಧಾನ್ಯಾದಿಗಳು ಬೆಳೆಯುತ್ತಿದ್ದ ರೈತರಲ್ಲಿ ಹಣ ಕೊಡುವ ಸಂದರ್ಭವೇ ಇರುತ್ತಿರಲಿಲ್ಲ. ಫಸಲಿನ ಬೆಲೆ ಕಟ್ಟುವ ಅಧಿಕಾರವೂ ವರ್ತಕರಿಗೇ ಸೇರಿತ್ತು. ವ್ಯಾಪಾರದಲ್ಲಿ ಕಾನೂನಿನ ನಿಯಂತ್ರಣವನ್ನು ಹೇರಿಸಲು ರಾಜರಂತೂ ಉತ್ಸಾಹ ತೋರಿಸುತ್ತಿರಲಿಲ್ಲ.

ಧನವನ್ನು ಬಂಡವಲವಾಗಿಟ್ಟುಕೊಂಡು ವೃದ್ಧಿಗೊಳಿಸುವುವವರನ್ನು ಅಮರದಲ್ಲಿ 'ವೃದ್ಧಿ ಜೀವಿ' ಎಂದು ವಿವರಿಸಲಾಗಿದೆ. ಹಿಂದೂ ಧರ್ಮ ಶಾಸ್ತ್ರದಲ್ಲಿ ಬಡ್ಡಿಗೆ ಮಿತಿ ಸೂಚಿಸದಿರುವುದು ವೈಶ್ಯರಿಗೆ ವಿಶೇಷ ಅನುಕೂಲವನ್ನು ಒದಗಿಸುತ್ತಿತ್ತು. ಅವರ ಧನ ಲಾಂಚನಕ್ಕೆ ರಾಜರು ಮಾತ್ರವಲ್ಲದೆ, ಗುಡಿ ದೇವಾಲಯ ಮಠಗಳೂ ಅಧೀನವಾಗಿದ್ದವು. ಅವರ ಬಿಗಿ ಕಡಿವಾಣದಲ್ಲಿದ್ದ ದೇಶದ ಆರ್ಥಿಕ ವ್ಯವಸ್ಥೆಯು ಸರಕುಗಳ ಬೆಲೆಯನ್ನು ಅದುಮಿ ಹಿಡಿದು, ವಿದೇಶಿ ವ್ಯಾಪಾರಿಗಳು ಕಮ್ಮಿ ದರದಲ್ಲಿ ದೇಶದ ಸಾಮಗ್ರಿ ಲಕ್ಷ್ಮಿಯನ್ನು ವಿದೇಶಕ್ಕೆ ಒಯ್ದರೂ ವ್ಯಾಪಾರದ ಲಾಭವೂ ನಾಡಿನ ವರ್ತಕರಲ್ಲಿ ಸೇರಿಕೊಳ್ಳುತ್ತಿತ್ತು. ಗಗನಚುಂಬಿ ಬಡ್ಡಿಯನ್ನು ಹೇರಿ ದೇಶದ ಭಾಗ್ಯಲಕ್ಷ್ಮಿಯು ವೈಶ್ಯಜನಾಂಗದ ವಶದಲ್ಲಿದ್ದಿತ್ತು. ದೇಶದಲ್ಲಿ ವ್ಯಾಪಕವಾದ ದಾರಿದ್ರ್ಯ ಮಾತ್ರ ಉಳಿಯಿತು. ದೇಶದ ಹಣವು ಅನೇಕಾಂಶದಲ್ಲಿ ಗುಡಿ. ದೇವಾಲಯಗಳಲ್ಲಿ. ಸ್ತ್ರೀಯರ ಮೈ ಮೇಲಿನ ಒಡವೆಗಳಲ್ಲಿ, ಹಾಗೂ ಗುಪ್ತ ನಿಧಿಗಳಲ್ಲಿ ಸೇರಿ ಕುಳಿತಿತ್ತು. ಆದರೆ ಇವುಗಳ ಅನುಭೋಗವು ದೇಶದ ಜನರಿಗೆ ಸಿಗದೇ ಹೋಯಿತು. ದೇಶದಿಂದ ಕೊಳ್ಳೆ ಹೋದ ಧನದ ಅಂಶ ಅಲ್ಪವಾಗಿರಲಿಲ್ಲ. ಈ ಧನವು ಕೆಲವರ ಸ್ವಾರ್ಥಕ್ಕೆ ಮೀಸಲಾಗಿರದೇ ಜನಕಲ್ಯಾಣಕಾರ್ಯಗಳಲ್ಲಿ ವಿನಿಯೋಗವಾಗುತ್ತಿದ್ದರೆ, ನಮ್ಮ ದೇಶವು ದುರ್ಗತಿಗೀಡಾಗುತ್ತಿರಲಿಲ್ಲ. ನಮ್ಮ ಹಿಂದಿನ ಕಟ್ಟಡಗಳಲ್ಲಿ ನಾವು ಕಾಣುವುದು ಗುಡಿ ದೇವಾಲಯಗಳನ್ನೂ ಗೋರಿ ಮಂದಿರಗಳನ್ನೂ ಹಾಗು ಕೋಟೆ ರಾಜಭವನಗಳನ್ನು. ವಿಶ್ವವಿದ್ಯಾಲಯಗಳನ್ನೂ ನೀರಾವರಿ ಯೋಜನೆಗಳನ್ನೂ ಹಾಗೂ ವಿದ್ಯಾಮಂದಿರಗಳನ್ನು ಕಾಣುವುದಿಲ್ಲ. ಆದ ಕಾರಣ ಜನ ಸಾಮಾನ್ಯರು ಅಶಿಕ್ಷಿತರಾಗಿ. ಜ್ಞಾನ ಮೂಢರಾಗಿ ಹಾಗೂ ನಿತ್ಯ ದರಿದ್ರರಾಗಿ ಇದ್ದಿರುವುದು ಅನೇಕ ಹಿಂದಿನವರೆಗೂ ಕಾಣುತ್ತದೆ(ನಳಂದ. ತಕ್ಷಶಿಲೆ ಮೊದಲಾದವು ಕ್ರೈಸ್ತ ಪೂರ್ವದ ಅವಶೇಷಗಳು). ಅಶೋಕನ ನಂತರ ಭಾರತವು ಏಕಚಕ್ರಾಧಿಪತ್ಯಕ್ಕೆ ಒಳಗಾದುದನ್ನು ನಾವು ಕಾಣುವುದಿಲ್ಲ. ಇದಕ್ಕೆಲ್ಲಾ ಆಚಾರ ಬದ್ಧವಾದ ಸ್ವಾರ್ಥಪರ ಸಾಮಾಜಿಕ ಸಂಪ್ರದಾಯಗಳೇ ಕಾರಣವೆಂದು ಹೇಳಬಹುದು.

ಕೊಳ್ಳೆಯಲ್ಲಿ ವೈರಿಗಳ ಪಾಲಾಗಿ ಧನ ಅಲ್ಪ ಪ್ರಮಾಣದಲ್ಲಿರಲಿಲ್ಲ. ಮಹಮ್ಮದ್ ಘಜನಿಯ ದಂಡಯಾತ್ರೆಗಳು ಹಾಗೂ ಗುಜರಾತಿನ ಸೋಮನಾಥ ದೇವಾಲಯದ ಸೂರೆ ಭಾರತದ ಇತಿಹಾಸದಲ್ಲಿ ವಿಖ್ಯಾತವಾಗಿವೆ. ೧೮೫೭ ರಂದು ಕರ್ನಲ್ ಸೈಕ್ಸ್ ಎಂಬ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತ

ಮಂಡಳಿಯ ಅಧ್ಯಕ್ಷನು ಬರೆದ. "ಭಾರತದ ವಿದೇಶ ವ್ಯಾಪಾರ' (Foreign Trade of British India) ಎಂಬ ಲೇಖನದಲ್ಲಿ. 'ಭಾರತದ ವಿದೇಶ ವ್ಯಾಪಾರದಲ್ಲಿ ಆಮದಿಗಿಂತ ರಫ್ತೇ ಎಂದಿನಂತೇ ಹೆಚ್ಚಾಗಿರುತ್ತದೆ. ಇದರಿಂದ ಇದೇ ಶತಮಾನದೊಳಗೆ ಭಾರತಕ್ಕೆ ೧೦ ಕೋಟಿ ಪವನಿಗಿಂತ ಹೆಚ್ಚಿನಲ್ಲೇ ಬಂದಿದ್ದರೂ. ಇದರ ಒಂದು ಬಿಡಿ ಕಾಸೂ ದೇಶವನ್ನು ಬಿಟ್ಟಿಲ್ಲ. ಅದು ಚಲಾವಣೆಯಲ್ಲಿ ಕಾಣಿಸಿಕೊಳ್ಳುವುದೂ ಇಲ್ಲ. ಇದಕ್ಕೆ ಕಾರಣ ದೇಶೀಯರ ತಗ್ಗುಮಟ್ಟದ ನಾಗರಿಕತೆ ಹಾಗೂ ರಕ್ತಗತವಾದ ಧನಸಂಚಯದ ಹವ್ಯಾಸ." "ಬಡವರು ಶ್ರೀಮಂತರೆಂಬ ವ್ಯತ್ಯಾಸವಿಲ್ಲದೇ ಹೊನ್ನುಗಳನ್ನು ಕರಗಿಸಿ ನಗಾಭರಣಗಳನ್ನಾಗಿ ಇರಿಸಿಕೊಳ್ಳುತ್ತಾರೆ. ಗುಡಿ ದೇವಾಲಯಗಳಲ್ಲೂ ಸೇರಿಸುತ್ತಾರೆ. ವರ್ತಕರು ತಮ್ಮ ಮನೆಯ ಮೂಲೆ ಮೂಲೆಗಳಲ್ಲಿ ಧನವನ್ನು ಬಚ್ಚಿಟ್ಟು ಬೇಕಾದಾಗ (ಮಾಂತ್ರಿಕನ ಬುಟ್ಟಿಯಿಂದ ಮೊಲವನ್ನು ಹಿಡಿದೆತ್ತಿದಂತೆ) ತರುತ್ತಾರೆ" ಎಂದು ಕುಕ್ ಬರೆದಿರುತ್ತಾನೆ. "೧೮೫೭ರಲ್ಲಿ ನಡೆದ ಸಿಪಾಯಿಗಳ ದಂಗೆಯನ್ನು ನಿರೀಕ್ಷಿಸಿ. ಎಂದಿಗಿಂತ ಹೆಚ್ಚಿನಂಶದಲ್ಲೇ ಹಣವು ಚಲಾವಣೆಯಿಂದ ಮಾಯವಾಗತೊಡಗಿತು" ಎಂದು ಬರೆಯಲಾಗಿದೆ.

೧೮–೧೯ನೆಯ ಶತಮಾನದ ಪರಿಸರದಲ್ಲೇ ಬ್ರಿಟಿಷರು ನಡೆಸಿದ ಪಿಥ್ (ರಾಮಾಯಣದ ಅಂಪೋಢ್ಯ) ಕೋಟೆಯು ಶತ್ರುಗಳ ದಾಳಿಗೆ ಮಣಿದಾಗ. ೫ ಲಕ್ಷ ಪವನುಗಳು ಸಿಕ್ಕವು. ಕಾಶಿಯ ರಾಜನ ಅರಮನೆಯೊಂದರಿಂದ ೨೨ ಲಕ್ಷ ಪವನುಗಳು ದೊರೆತವು. ಅಲ್ವ (ಅಲ್ವಾರು?) ಅರಸನ ಕೋಟೆಯಿಂದ ೧೫ ಲಕ್ಷ ಪವನುಗಳು ಸೂರೆಹೋದವು. ಸಿಂಧಿಯಾ ಅರಸನ ಕೋಟೆಯಿಂದ ೨೭ ಲಕ್ಷ ಪವನುಗಳು. ಭರತಪುರದಿಂದ ೧೦ ಲಕ್ಷ ಪವನುಗಳು. ಪಂಜಾಬಿನ ರಣಜಿತ್ ಸಿಂಹನ ಕೋಟೆಯಿಂದ ೧೦ ಲಕ್ಷ ಪವನುಗಳು. ಕೊಳ್ಳೆಯು ಪಾಲಾಯಿತು. ಟಿಪ್ಪುಸುಲ್ತಾನನ ಕೋಟೆಯಿಂದ ೧೦ ಲಕ್ಷ ಪವನುಗಳು ಬ್ರಿಟಿಷರ ಕೈ ಸೇರಿತು. ಬಾದಷಹ ಷಹಜಹಾನನು ಮಡಿದಾಗ. ರಾಜನ ಖಜಾನೆಯಲ್ಲಿ ೨೪೦ ಲಕ್ಷ ಪವನುಗಳು ಇದ್ದ ಪ್ರಮಾಣಿಕ ಪುರಾವೆಗಳಿವೆ ಎಂದು ಹೇಳಲಾಗುತ್ತಿದೆ.

ನಮ್ಮ ಜನಾಂಗದ ಹಾಗೂ ರಾಜ್ಯಗಳ ಜಡತೆಗೆ ವಿಶೇಷ ಧನ ವ್ಯಾಮೋಹವೇ ಕಾರಣವೆಂದರೆ ತಪ್ಪಲ್ಲ. ನಮ್ಮ ಪೂರ್ವಜರಿಗೆ ಧನ ಸಂಚಯ ತಿಳಿದಿತ್ತೇ ವಿನಾ ಅದರ ವಿನಿಯೋಗ ಜ್ಞಾನವಿರಲಿಲ್ಲ. ಜನರೇ ದೇಶದ ಸೌಭಾಗ್ಯ. ಅವರ ಏಳಿಗೆಯಿಂದಲೇ ದೇಶದ ಸಾಮಾಜಿಕ ಹಾಗೂ ಆರ್ಥಿಕ ಮುನ್ನಡೆಗೆ ಕಾರಣವೆನ್ನಬೇಕು. ನಮ್ಮ ದೇಶದ ದಾರಿದ್ರ್ಯಕ್ಕೆ ಹಣದ ಅಭಾವ ಎಂದೂ ಕಾರಣವಾಗಿರಲಿಲ್ಲ. ನಮ್ಮ ದೇಶದಲ್ಲಿ ದರಿದ್ರ ದೇವತೆ ಎಂದಿನಿಂದಲೂ ತಾಂಡವವಾಡುತ್ತಿದ್ದಳು. ಅವಳನ್ನು ಉಚ್ಚಾಟಿಸಲು ಕೇವಲ ಹಣದಿಂದ ಸಾಧ್ಯವಿಲ್ಲ. ಅದರ ವಿನಿಯೋಗದಿಂದ ದೇಶದಲ್ಲಿ ಉತ್ಪಾದನಾ ಶಕ್ತಿ ಹಾಗೂ ಜನರಲ್ಲಿ ಪರಸ್ಪರವಾಗಿ ಸಾದರಾನುರಾಗ ಪ್ರೇಮಗಳು ಬೆಳೆಯುವಂತೆ ಮಾಡಬೇಕು. ಅಂಧಶ್ರದ್ಧೆ. ಧನ ವ್ಯಾಮೋಹ ಅಳಿಯುವಂತೆ ಮಾಡಬೇಕು. ಮಾತಿನಲ್ಲಿ ವ್ಯಾಕರಣದ ಹಾಗೂ ಛಂದಸ್ಸಿನ ಕಟ್ಟು ನಿಟ್ಟಿರುವಂತೆ. ಹಣದ ವಿನಿಯೋಗದಲ್ಲಿ ಪ್ರಾಮಾಣಿಕತೆ ರೀತಿ ನೀತಿಗಳ ನಿಯಂತ್ರಣವಿರುವುದು ಅಗತ್ಯ. ಇದಕ್ಕೆ ಸರಿಯಾದ ಶಿಕ್ಷಣ ನಮ್ಮ ಕಿರಿಯರಿಗೆ ದೊರೆಯುವುದು ಅಗತ್ಯ. ನಾವು ನಮ್ಮ ವ್ಯವಹಾರಗಳಲ್ಲಿ ಶಿಸ್ತನ್ನು ಪಾಲಿಸುವುದಗತ್ಯ. ನಾವು ಪರದೇಶೀಯರಿಗೆ ವ್ಯಾಪಾರ ಮೂಲಕ ನಮ್ಮ ಉತ್ಪತ್ತಿಯನ್ನೂ ದಾಳಿಗರಿಗೆ ಕೂಡಿಟ್ಟ ಹಣವನ್ನೂ ಉಣಿಸುವ ಜೇನುದುಂಬಿಗಳಾಗಿ ದುಡಿಯುತ್ತಲಿದ್ದೆವು. ನಾವು ಶ್ರಮಿಸಿ ಗಳಿಸಿದ ಭಾಗ್ಯವನ್ನು ನಮಗೆ ಸವಿಯುವ ಯೋಗ್ಯತೆ ಇರಲಿಲ್ಲ. ನಾವು ಧನಲಕ್ಷ್ಮಿಯನ್ನು ಪೂಜೆಯಿಂದಲೇ ಒಲಿಸಲು ಪ್ರಯತ್ನಿಸಿದೆವು. ಜನಶಕ್ತಿಯೇ ದೇಶದ ಸೌಭಾಗ್ಯ. ಕಿರಿಯರ ವಿದ್ಯೆಯೇ ನಮ್ಮ ದೇಶದ ಪ್ರಗತಿಗೆ ಸಾಧನ. ಅದರ ವಿಷಯದಲ್ಲಿ ನಾವು ನಿರ್ಲಕ್ಷ ವಹಿಸಿದ್ದು ನಮ್ಮ ದೌರ್ಭಾಗ್ಯ.

ಹಣಕ್ಕೇ ಒಂದು ಸ್ವಕೀಯವಾದ ನೈಜ ಮೌಲ್ಯವಿದೆ. ಅದನ್ನು ಅಳತೆಗೋಲನ್ನಾಗಿಸಿ. ಎಲ್ಲದರ ಮೌಲ್ಯವನ್ನು ಅಳೆಯಬಹುದು ಎಂಬ ತಪ್ಪು ನಂಬಿಕೆ ನಮ್ಮಲ್ಲಿ ಬಲವಾಗಿ ಮೂಡಿರುತ್ತದೆ. ಹಣಕ್ಕೆ ಯಾವುದೇ ಒಂದು ಸ್ಥಿರ ಮೌಲ್ಯವಿಲ್ಲವೆಂದು ಆಧುನಿಕ ಅರ್ಥ ಅಧ್ಯಯನಗಳಿಂದ ಸಿದ್ಧಾಂತವಾಗಿರುತ್ತದೆ. ನಾವು ಹಣದಿಂದ ಯಾವುದರ ಮೌಲ್ಯವನ್ನೂ ಅಳೆಯುವುದಿಲ್ಲ. ಒಂದು ವಸ್ತುವಿನ ಮೇಲೆ ನಮಗೆ ಮೂಡಿರುವ ಅಗತ್ಯತೆಯನ್ನು ಹಾಗೂ ಅಭಿಲಾಷೆಯನ್ನು ತೋರಿಸುತ್ತೇವೆ. ಹಣದಿಂದ ಏನನ್ನೂ

ಸಾಧಿಸಬಲ್ಲೆ' ಎಂದು ಹೆಮ್ಮೆ ಪಡುವವರು ಹಣಕ್ಕಾಗಿ ಏನನ್ನೂ ಮಾಡಲು ಸಿದ್ಧವಿರುವರು ಎಂದು ತಿಳಿಯಬೇಕು. ಹಣದ ಇತಿಹಾಸದಲ್ಲಿ ಕಂಡು ಬರುವ ಒಂದು ವಿಶೇಷ ಸತ್ಯವೇನೆಂದರೆ 'ನೀತಿ ಕೆಟ್ಟರೆ ರೀತಿ ಕೆಟ್ಟೀತು' ಎಂಬುದು. ಹಣದ ಮೆರುಗಿನಿಂದ ಅನೀತಿಯನ್ನು ನೀತಿವತ್ತಾಗಿಸಲಾಗುವುದಿಲ್ಲ. ಸಮಾಜದಲ್ಲಿ ಹಣ ತುಂಬಿದೊಡನೆ ಸಮಾಜ ವ್ಯವಸ್ಥೆ ಸರಿಪಡುವುದಿಲ್ಲ. ಧನ ವ್ಯಾಮೋಹದಿಂದ ಹೆಚ್ಚಿನ ಅನರ್ಥಗಳೇ ಸಂಭವಿಸಿರುವುದನ್ನು ಡಾ॥ ಕೆನೆತ್ ಗ್ಯಾಲ್ಬ್ರೈತರು ಪುರಾವೆಗಳನ್ನಿತ್ತು ತಮ್ಮ ನಿರ್ವಿವಾದವಾಗಿ ಸಿದ್ಧಾಂತ ಪಡಿಸಿರುತ್ತಾರೆ. ಜಾನ್ ಮೇನಾರ್ಡ್ ಕೆಯಿನ್ಸನ ವಾದವೂ ಇದೇ.

ಶಿಸ್ತಿನ ಸಾಮಾಜಿಕ ನೀತಿ ನಿಯಮಗಳ ತಳಹದಿಯ ಮೇಲೆ ಸಮಾಜದ ಆರ್ಥಿಕ ರಥವು ಸುಗಮವಾಗಿ ಸಾಗಬಲ್ಲುದು. ಹಣವನ್ನೇ ಅನುಭೋಗಿಸಲು ಸಾಧ್ಯವಿಲ್ಲ. ಆದರಿಂದ ದೊರೆಯುವ ಸಾಮಗ್ರಿಗಳು, ಸೇವಾ ಸವಲತ್ತುಗಳ ಬಗ್ಗೆ ಲಕ್ಷ್ಯ ಹರಿಸದಿದ್ದರೆ ಸಾಮಾಜಿಕ ಪ್ರಗತಿ ಸಾಧ್ಯವಿಲ್ಲ. ಎಂಬುದು ಈ ಚಾರಿತ್ರಿಕ ಸಿಂಹಾವಲೋಕನದಿಂದ ನಮಗೆ ಸಿಕ್ಕಿದ ಜ್ಞಾನ ನವನೀತ. ನಮ್ಮ ದೇಶದ ದಾರಿದ್ರ್ಯ ನೀಗಬೇಕಾದರೆ, ಇದುವರೆಗೆ ನಿರ್ಲಕ್ಷಿಸಿರುವ ನೀತಿ ನಿಯಮ ಹಾಗೂ ಜನರ ವೈಯಕ್ತಿಕ ಹಾಗೂ ಸಾಮೂಹಿಕ ವೃತ್ತಿ ಪರಿಶ್ರಮ ಹಾಗೂ ಸಾಮಾಜಿಕ ಶಿಕ್ಷಣದ ತರಬೇತಿಯ ಕಡೆಗೆ ಗಮನ ಹರಿಸುವುದು ಅತ್ಯಗತ್ಯ. ಜನರಲ್ಲಿ ಸೌಹಾರ್ದತೆ ಹಾಗೂ ಸಹಕಾರ ಭಾವನೆ ಬೆಳೆಯಬೇಕು. ಇದರಿಂದಲೇ ನಮ್ಮ ದೇಶದ ಪ್ರಗತಿ ಸಾಧ್ಯ.

ಈ ಜ್ಞಾನ ದೃಷ್ಟಿಯಿಲ್ಲದೇ ದೇಶದ ಸೌಭಾಗ್ಯ ರಥವು ಮುಂದರಿಯಲಾರದು. ಜನರಲ್ಲಿ ಮೂಢನಂಬಿಕೆಗಳು ಜಾತ್ಯಂಧತೆಗಳು ಅಳಿದು, ವೈಜ್ಞಾನಿಕ ದೃಷ್ಟಿಯು ಬೆಳಗಬೇಕು. ಧನದ ವಿನಿಯೋಗ ಈ ಅಂಶಗಳಿಗೆ ತಿರುಗಬೇಕು. ಆಗಲೇ ನಾವು ನಮ್ಮ ದೇಶದಲ್ಲಿ ದಾರಿದ್ರ್ಯವನ್ನು ಬೇರು ಸಮೇತ ಕಿತ್ತೆಸೆಯಲು ಸಾಧ್ಯ.

ಗ್ರಂಥ ಋಣ

೧. ಲೂಯೀ ರೈಸರ ಸಂಪಾದನೆ. ಬಾಲಸುಬ್ರಹ್ಮಣ್ಯರ ಪರಿಷ್ಕರಣ, "ಅಮರಸಿಂಹನ ನಾಮಲಿಂಗಾನುಶಾಸನವೆಂಬ ಅಮರಕೋಶ" ೧೯೭೦, ಪ್ರಸಾರಾಂಗ, ಮೈಸೂರು ವಿ.ವಿ.ನಿಲಯ. ಮೈಸೂರು

2. Galbraith, J. V. "Money; Whence it came where it went" 1970. Pocket Book Edition New York.

3. Coone, C. N. 'The Rise, Progress and Present Position of Banking in Iudia'. 1863. Rare Book preserved in the National Library, Calcutta.

ಹಣವೇ ಇಲ್ಲದಿದ್ದ ಪ್ರಾಚೀನ ಅರ್ಥವ್ಯವಸ್ಥೆಯಲ್ಲಿ ಸರಕು ಮತ್ತು ಸೇವೆಗಳಿಗೆ ಪ್ರತಿಯಾಗಿ ಸರಕು ಮತ್ತು ಸೇವೆಗಳೇ ವಿನಿಮಯವಾಗುತ್ತಿದ್ದವು. ಇಂತಹ ವಿನಿಮಯ ಕ್ರಮವನ್ನು ಸಾಟಿ ಪದ್ಧತಿ ಎಂದು ಕರೆಯಲಾಗುತ್ತಿತ್ತು. ಆದರೆ ಆ ಪದ್ಧತಿ ಅನೇಕ ದೋಷಗಳಿಂದ ಕೂಡಿತ್ತು. ಮೊದಲನೆಯದಾಗಿ ಎರಡು ಸರಕುಗನ್ನು ವಿನಿಮಯ ಮಾಡಿಕೊಳ್ಳುವುದರ ನಡುವೆ ವಿನಿಮಯದ ಬಗ್ಗೆ ಏಕಕಾಲದಲ್ಲಿ ಇಚ್ಛೆ ಮೂಡಬೇಕಾಗುತ್ತಿತ್ತು. ಇಷ್ಟೇ ಅಲ್ಲದೆ ವಿನಿಮಯ ದರದ ನಿಷ್ಕರ್ಷೆಯಾಗಬೇಕಾಗಿತ್ತು. ಒಂದು ಪಕ್ಷ ವಿನಿಮಯ ನಡೆಯಬೇಕಾಗಿದ್ದ ಸರಕುಗಳೆರಡರ ಮೌಲ್ಯ ಸಮ ಎಂದು ಭಾಸವಾದರೆ ಮಾತ್ರ ವಿನಿಮಯ ಸಾಧ್ಯವಾಗುತ್ತಿತ್ತು. ಇಂತಹ ಒಂದು ವಿನಿಮಯ ಕ್ರಮದಲ್ಲಿ ವಿನಿಮಯವಾಗಬೇಕಾಗಿದ್ದ ಸರಕಿನ ವಿಭಜನೆ ಸಹ ವಿನಿಮಯಕ್ಕೆ ಅಡ್ಡಿಯನ್ನುಂಟುಮಾಡುತ್ತಿತ್ತು. ... ಇಂತಹ ಕಠಿಣತೆಗಳನ್ನು ಹೋಗಲಾಡಿಸುವ ದೃಷ್ಟಿಯಿಂದಲೇ ಹಣದ ಆವಿರ್ಭಾವವಾದುದು. ಪ್ರಾರಂಭದಲ್ಲಿ ಧಾನ್ಯ ತೊಗಲು ಮುಂತಾದುವು ಹಣವೆಂದು ಪರಿಗಣಿಸಲ್ಪಟ್ಟು ನಂತರ ಅವುಗಳ ಸ್ಥಾನವನ್ನು ಅಮೂಲ್ಯ ಲೋಹವಾದ ಚಿನ್ನ ಬೆಳ್ಳಿ ಅಲಂಕರಿಸಿದುವು. ಆಧುನಿಕ ಪ್ರಪಂಚದಲ್ಲಂತೂ ಕೇವಲ ಕಾಗದ, ನಿಕ್ಕಲ್ ಮುಂತಾದವು ಹಣವನ್ನು ಪ್ರತಿನಿಧಿಸುತ್ತಿವೆ. ಕೇವಲ ವಿನಿಮಯ ಕಾರ್ಯವನ್ನಷ್ಟೇ ಅಲ್ಲದೆ, ಇನ್ನೂ ಅನೇಕ ಪ್ರಮುಖ ಕಾರ್ಯಗಳನ್ನು, ಆಧುನಿಕ ಅರ್ಥವ್ಯವಸ್ಥೆಯಲ್ಲಿ ಹಣ ನಿರ್ವಹಿಸುತ್ತಿದೆ........................ಸಾರ್ವತ್ರಿಕವಾಗಿ ಹೇಳುವುದಾದರೆ ವಿನಿಮಯ ಸಾಧನವಾಗಿಯೂ, ದ್ರವ್ಯತೆಯನ್ನು ಸಂಚಯಿಸುವ ಸಾಧನವಾಗಿಯೂ, ಎಲ್ಲರಿಂದಲೂ ಸ್ವೀಕರಿಸಲಾಗುವ ವಸ್ತುವನ್ನೂ ಹಣವೆಂದು ಇಟ್ಟುಕೊಳ್ಳಬಹುದು. ಅರ್ಥ ವಿಜ್ಞಾನದ ದೃಷ್ಟಿಯಿಂದ ಸಾಲದ ಪಾವತಿಗಾಗಿ ಎಲ್ಲರಿಂದಲೂ ಸ್ವೀಕೃತವಾಗುವ ವಸ್ತುವನ್ನು ಹಣವೆಂದು ಪರಿಗಣಿಸಬಹುದು—

(ಸಿ. ಕೆ. ರೇಣುಕಾರ್ಯರ 'ಹಣ, ಒಂದು ಸೈದ್ಧಾಂತಿಕ ನಿರೂಪಣೆ' ಗ್ರಂಥದಿಂದ ಉದ್ಧೃತ. ಪು 1-2)

ಸಿ. ವಿ. ರಂಗಸ್ವಾಮಿ

ಶಾತವಾಹನರ ನಾಣ್ಯಗಳು

ಪ್ರಾಚೀನ ಭಾರತದ ಇತಿಹಾಸದಲ್ಲಿ ಶಾತವಾಹನರ ಇತಿಹಾಸದ ಅಧ್ಯಯನಕ್ಕೆ ನಾಣ್ಯ ಸಾಧನವು ಅತ್ಯಗತ್ಯವಾಗಿರುವಷ್ಟು ಮತ್ತಾವ ಅರಸುಮನೆತನಕ್ಕೂ ಇಲ್ಲ. ಪ್ರಾಯಶಃ ಇವರ ಅನಂತರ ಕುಶಾಣರ ಇತಿಹಾಸದ ಅಧ್ಯಯನಕ್ಕೆ ನಾಣ್ಯ ಸಂಪತ್ತೇ ಅಮೂಲ್ಯ ಆಧಾರವಾಗಿದೆ. ಪ್ರಾಚೀನ ಅರಸುಮನೆತನಗಳಲ್ಲಿ ಶಾತವಾಹನ ಅರಸರು ವಿಶಿಷ್ಟ ಹಾಗೂ ಹೇರಳವಾದ ನಾಣ್ಯ ಸಂಪತ್ತನ್ನು ಕೊಡುಗೆಯಾಗಿ ನೀಡಿದ್ದಾರೆ. ಪುರಾಣ ಮತ್ತು ಇತರ ಸಾಹಿತ್ಯ ಭಂಡಾರದಲ್ಲಿ ದೊರೆತಿರುವ ವಿವರಗಳಿಗೆ ಈ ಅರಸರ ನಾಣ್ಯಗಳು ಹೆಚ್ಚಿನ ಪುಷ್ಟೀಕರಣೆಯನ್ನು ನೀಡುತ್ತವೆ. ಕಳೆದ ಶತಮಾನದಿಂದೀಚೆಗೆ ಈ ಅರಸರ ತಾಮ್ರ, ಸೀಸ ಮತ್ತು ಬೆಳ್ಳಿಯ ನಾಣ್ಯಗಳು ದೊರತಿರುವುದರಿಂದ ಅವರ ಇತಿಹಾಸದ ಪುನರ್ರಚನೆಗೆ ಹೆಚ್ಚಿನ ಐತಿಹಾಸಿಕ ಸಾಧನ ಒದಗಿದಂತಾಗಿದೆ.

ಶಾತವಾಹನ ಅರಸರ ನಾಣ್ಯಗಳ ಸಂಶೋಧನೆಯನ್ನು ಮೊದಲು ನಡೆಸಿದವರು ಇ. ಜೆ. ರ್‍ಯಾಪ್ಸ್‌ನ್. ಅನಂತರ ಡಿ. ಕೆ. ಗೋಪಾಲಾಚಾರಿ, ಡಾ. ಅಳತೇಕರ್, ವಿ. ವಿ. ಮಿರಾಶಿ, ಗುರ್ತಿ ವೆಂಕಟ ರಾವ್. ಡಿ.ಸಿ. ಸರ್ಕಾರ್, ಎಂ. ರಾಮರಾವ್, ಎಸ್.ಬಿ. ದೇವ್, ಕೆ.ಡಿ. ಬಾಜ್‌ಪ್ಪೆ, ಪಿ.ಎಲ್. ಗುಪ್ತಾ, ಪರಬ್ರಹ್ಮಶಾಸ್ತ್ರಿ. ಬಿ. ರಾಮಚಂದ್ರಯ್ಯ, ಪಿ. ಬಿ. ದೇಸಾಯಿ ಮತ್ತು ಅಜಯಮಿತ್ರ ಶಾಸ್ತ್ರಿ. ಅಜಯಮಿತ್ರ ಶಾಸ್ತ್ರಿ ಅವರು ಜರ್ನಲ್ ಆಫ್ ದಿ ನ್ಯೂಮಿಸ್‌ಮ್ಯಾಟಿಕ್ ಸೊಸೈಟಿ ಆಫ್ ಇಂಡಿಯಾ, ಮತ್ತಿತರ ಸಂಶೋಧನಾ ಗ್ರಂಥಗಳಲ್ಲಿ ತಮ್ಮ ಲೇಖನಗಳನ್ನು ಬರೆದರು. ೧೯೫೯ರಲ್ಲಿ ಎಂ. ರಾಮರಾಯರು ಶಾತವಾಹನರ ನಾಣ್ಯಗಳ ಸುದೀರ್ಘವಾದ ಪಟ್ಟಿಯನ್ನು ಪ್ರಕಟಿಸಿದರು. ಇವರು ಮದ್ರಾಸ್ ಮತ್ತು ಹೈದರಾಬಾದ್ ವಸ್ತುಸಂಗ್ರಹಾಲಯಗಳಲ್ಲಿರುವ ನಾಣ್ಯಗಳ ವಿಷಯವಾಗಿ ಕ್ಯಾಟಲಾಗ್‌ಗಳನ್ನು ಪ್ರಕಟಿಸಿದರು ಮತ್ತು ಅವುಗಳ ಬಗೆಗೆ ಉಪನ್ಯಾಸಗಳನ್ನು ಕೊಟ್ಟರು. ೧೯೮೦ರಲ್ಲಿ ಮುದ್ರಿತವಾದ ಕಾಯಿನೇಜ್ ಆಫ್ ದಿ ಶಾತವಾಹನಾ ಎಂಪೈರ್ ಎಂಬ ಗ್ರಂಥದಲ್ಲಿ ಶ್ರೀ ಐ. ಕಾರ್ತಿಕೇಯ ಶರ್ಮಾ ಅವರು ಈವರೆಗೆ ದೊರೆತಿರುವ ಶಾತವಾಹನರ ನಾಣ್ಯಗಳನ್ನೆಲ್ಲಾ ಶಾಸ್ತ್ರೀಯವಾಗಿ ಸಂಶೋಧಿಸಿ ಮತ್ತು ಕ್ರೋಢೀಕರಿಸಿ ಅವುಗಳ ಪ್ರಾಮುಖ್ಯತೆಯನ್ನು ಬೆಳಕಿಗೆ ತಂದಿದ್ದಾರೆ. ಈ ಗ್ರಂಥದ ಉತ್ತರಾರ್ಧದಲ್ಲಿ ಕೊಡಲಾಗಿರುವ ಪಟ್ಟಿಯಲ್ಲಿ ಎಲ್ಲ ವಸ್ತು ಸಂಗ್ರಹಾಲಯಗಳಲ್ಲಿರುವ ನಾಣ್ಯಗಳನ್ನೆಲ್ಲಾ ವರ್ಣಿಸಿರುವರು.[1] ಈ ಗ್ರಂಥದಲ್ಲಿ ಕಂಡುಬರದಿರುವ ಮತ್ತು ಶಾತಕರ್ಣಿಯ ನಾಣ್ಯವೆಂದು ಹೇಳಬಹುದಾದ ತಾಮ್ರ ನಾಣ್ಯವೊಂದರ ವಿವರಗಳನ್ನು ತಿಳಿಸುವುದೇ ಈ ಲೇಖನದ ಉದ್ದೇಶವಾಗಿದೆ. ಈ ನಾಣ್ಯ ಕರ್ನಾಟಕ ವಿಶ್ವ ವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಶ್ರೀ ಬಿ. ಎಸ್. ಪಾಟೀಲರವರಲ್ಲಿದೆ.

ಶಾತವಾಹನರ ಮೂಲ ವಾಸಸ್ಥಾನ ಮತ್ತು ಅರಸರ ಆಳ್ವಿಕೆಯ ಕಾಲವನ್ನು ನಿರ್ದಿಷ್ಟಪಡಿಸುವುದು ಮುಂತಾದ ವಿಷಯಗಳಿಗೆ ಇವರ ನಾಣ್ಯಗಳು ಹೆಚ್ಚು ಸಹಾಯಕವಾಗಿವೆ. ಶಾತವಾಹನರ ಸಾಮ್ರಾಜ್ಯವು ದಕ್ಷಿಣ ಭಾರತದಲ್ಲಿ ಉಚ್ಛ್ರಾಯಸ್ಥಿತಿಯಲ್ಲಿದ್ದ ಕಾಲದಲ್ಲಿ ಸಾಮ್ರಾಜ್ಯದ ಭೌಗೋಲಿಕ ಸೀಮೆಗಳನ್ನು ಲಕ್ಷಿಸಿದರೆ ಈ ಅರಸರು ಮುದ್ರಿಸಿದ ನಾಣ್ಯಗಳು ಐದು ಪ್ರಮುಖ ಭಾಗಗಳಿಂದ ಬಂದವುಗಳೆಂದು ಹೇಳಬಹುದು.[2]

(ಅ) ಸಾಮ್ರಾಜ್ಯದ ಉದಯ ಮತ್ತು ಏಳಿಗೆಗೆ ಪ್ರಮುಖ ಭಾಗವಾಗಿದ್ದ ಮೂಲಕ. ಅಶಿಕ ಮತ್ತು ಅಸ್ಮಕ ಭಾಗ—ಈ ಭಾಗದ ರಾಜಧಾನಿ ಪ್ರತಿಷ್ಠಾನವಾಗಿತ್ತು. ಇಂದು ಇದನ್ನು ನಾಸಿಕ್—ಪುಣೆ ಜಿಲ್ಲೆಗಳೆಂದು ಹೇಳಬಹುದು. ನೆವಾಸದಲ್ಲಿ ದೊರೆತಿರುವ ಒಂದನೇ ಶಾತಕರ್ಣೀ, ಶಾತವಾಹನ. ಎರಡನೇ ಶಾತಕರ್ಣಿ. ಗೌತಮಿ ಪುತ್ರ ಶಾತಕರ್ಣಿ ಮತ್ತು ಒಂದನೆ ಪುಲಮಾವಿಯರ ನಾಣ್ಯಗಳು ಈ ಭಾಗದಿಂದ ಬಂದವುಗಳೆಂದು ಹೇಳಬಹುದು.

(ಬ) ಅಕರ. ಅವಂತಿ. ಅನೂಪ ಭಾಗ—ಇವು. ಪೂರ್ವ ಮಾಳವ (ವಿದಿಶ) ಮತ್ತು ಮಾಹಿಷ್ಮತಿ ನಗರ. ಈ ಭಾಗದಲ್ಲಿ ನಡೆದ ಬೆಸ್‌ನಗರದ ಸಂಶೋಧನೆಯಲ್ಲಿ ರಾಞೋ ಶ್ರೀ ಶಾತಕರ್ಣಿಯ ಸತಿ ಶ್ರೀ ಶಾತಕರ್ಣಿಯ ನಾಣ್ಯಗಳು ದೊರೆತವು.

(ಕ) ವಿದರ್ಭ. ದಕ್ಷಿಣಕೋಸಲ—ಕೌಂಡಿನ್ಯಪುರವೇ ವಿದರ್ಭ. ಇಲ್ಲಿ ಕ್ಷೌಣಿ ಎಂಬಲ್ಲಿ ದೊರೆತಿರುವ ನಾಣ್ಯಗಳು ಅದರಲ್ಲೂ ವಿಶೇಷವಾಗಿ ಗೌತಮೀ ಪುತ್ರ ಶಾತಕರ್ಣಿಯ ತಾಮ್ರದ ನಾಣ್ಯಗಳು ಮತ್ತು ದಕ್ಷಿಣ ಕೋಸಲದ ಬಾಲಾಪುರದಲ್ಲಿ ದೊರೆತಿರುವ ನಾಣ್ಯಗಳು ಈ ಭಾಗಕ್ಕೆ ಸೇರಿವೆ.

(ಡ) ಅನರ್ತ. ಸೌರಾಷ್ಟ್ರ ಮತ್ತು ಕಚ್ಚ—ಕಾಥೇವಾಡ್ ಮತು ಗದ್ರೆಗಳಲ್ಲಿ ಗೌತಮೀ ಪುತ್ರ ಶಾತಕರ್ಣಿಯ ನಾಣ್ಯಗಳು ಸಿಕ್ಕಿವೆ. ಇಂದು ಇವು ಮುಂಬೈನ ಪ್ರಿನ್ಸ್ ಆಫ್ ವೇಲ್ಸನ ವಸ್ತುಸಂಗ್ರಹಾಲಯಲ್ಲಿವೆ.

(ಇ) ಸಾಮ್ರಾಜ್ಯದ ಗಡಿ ಪ್ರದೇಶಗಳು—ಆಂಧ್ರ ಪ್ರದೇಶದ ಕರಾವಳಿ ಭಾಗದ ಬೌದ್ಧ ನೆಲೆಗಳಾದ ಧರಣಿಕೋಟಾ. ಕೇಸರಪಲ್ಲಿ ಮತ್ತು ನಾಗಾರ್ಜುನಿಕೊಂಡ ಎಂಬಲ್ಲಿ ಗೌತಮೀ ಪುತ್ರ ಶಾಂತಕರ್ಣಿಯ ತಾಮ್ರ ಮತ್ತು ಪೋಟಿನ್ ನಾಣ್ಯಗಳು ಸಿಕ್ಕಿವೆ. ಇಕ್ಷ್ವಾಕು ರಾಜ್ಯದ ಪ್ರಮುಖ ಪಟ್ಟಣವಾದ ವಿಜಯಪುರಿ (ನಾಗಾರ್ಜುನಿಕೊಂಡ), ಚೆಬ್ರೋಲು ಮತ್ತು ಘಂಟಸಾಲದಲ್ಲಿ ಆರು ಕಮಾನು ಗುಡ್ಡಗಳುಳ್ಳ ಪೋಟಿನ್ ನಾಣ್ಯಗಳು ಸಿಕ್ಕಿವೆ. ಕಡಪ. ಅನಂತಪುರ. ನೆಲ್ಲೂರು ನೆಲೆಗಳಲ್ಲಿ ವಾಸಿಷ್ಠೀಪುತ್ರ ಶಾತಕರ್ಣಿಯ ಅಶ್ವ ಮತ್ತು ಕಟಾಂಜನ ದಲ್ಲಿ ಮರವುಳ್ಳ ನಾಣ್ಯಗಳು ದೊರೆತಿವೆ. ಕಾಂಚೀಪುರದ ಕಾಮಕೋಟೀಪೀಠದ ಸಮೀಪ ನಡೆದ ಸಂಶೋಧನೆಯಲ್ಲೂ ಶಾತವಾಹನರ ನಾಣ್ಯಗಳು ಸಿಕ್ಕಿವೆ.

(ಎಫ್) ಕರ್ನಾಟಕ—ಕರ್ನಾಟಕದಲ್ಲಿ ಅನೇಕ ಸಂಶೋಧನೆಗಳು ನಡೆದಿದ್ದು ಸಾಂಸ್ಕೃತಿಕ ಕುರುಹುಗಳು ಮತ್ತು ಪ್ರತಿಮೆಗಳು ಸಿಕ್ಕಿವೆಯಾದರೂ ನಾಣ್ಯ ಸಂಪತ್ತು ಅಲ್ಪ ಪ್ರಮಾಣದಲ್ಲಿ ದೊರೆತಿವೆಯೆಂದು ಶರ್ಮಾ ಅವರು ಹೇಳಿದ್ದಾರೆ.[3] ಸನ್ನತಿ. ಗೊನೆಹಳ್ಳಿ ಮತ್ತು ಅಂಬಿಯಲ್ಲಿ ಅಮೂಲ್ಯ ಕಲಾವಸ್ತುಗಳು ಸಿಕ್ಕಿವೆ. ಮತ್ತು ವಾಸಿಷ್ಠೀಪುತ್ರ ಶಾತಕರ್ಣಿಯ ಮತ್ತು ಸಿರಿಸಾತ (ಕಾಣೆ)ಯ ಶಾಸನಗಳು ದೊರೆತಿವೆ. ಗೊನೆಹಳ್ಳಿಯಲ್ಲಿ ನಾಣ್ಯಗಳು ಸಿಕ್ಕಿವೆ. ಆದರೆ ಡಾ॥ ಎಂ.ಎಸ್. ನಾಗರಾಜರಾವ್‌ರವರು[4] ಅಧಿಕ ಸಂಖ್ಯೆಯಲ್ಲಿ ವಾಸಿಷ್ಠಿ ಪುತ್ರ ಶಾತಕರ್ಣಿ. ವಾಸಿಷ್ಠಿಪುತ್ರ ಪುಲಮಾವಿ ಮತ್ತು ಗೌತಮಿಪುತ್ರ ಯಜ್ಞ ಶಾತಕರ್ಣಿಯ ನಾಣ್ಯಗಳನ್ನು ಸಂಶೋಧಿಸಿದ್ದಾರೆ. ಇವು ಧಾರವಾಡದಿಂದ ಬಂದವುಗಳಾಗಿವೆ. ಇದೇ ರೀತಿ ಕರ್ನಾಟಕ ವಿಶ್ವವಿದ್ಯಾಲಯದ ಡಾ॥ ಅ. ಸುಂದರ[5] ಅವರು ಬೆಳಗಾವಿ ಜಿಲ್ಲೆಯ ವಡಗಾಂ—ಮಾಧವಪುರ ಸಂಶೋಧನೆಯಲ್ಲಿ ಶಾತವಾಹನರ ನಾಣ್ಯಗಳನ್ನು ಇತ್ತೀಚಿಗೆ ಸಂಶೋಧಿಸಿದ್ದಾರೆ. ಡಾ॥ ಎಸ್. ಆರ್. ರಾವ್[6] ಅವರು ಐಹೊಳೆಯಲ್ಲಿ ವಾಸಿಷ್ಠಿಪುತ್ರ ಶಾತಕರ್ಣಿ ಮತ್ತು ಗೌತಮಿಪುತ್ರ ಯಜ್ಞ ಶಾತಕರ್ಣಿಯ ನಾಣ್ಯಗಳನ್ನು ಬೆಳಕಿಗೆ ತಂದಿರುವರು. ಬನವಾಸಿ ಸಂಶೋಧನೆಯಲ್ಲಿ ಡಾ॥ ಎಂ. ಶೇಷಾದ್ರಿ[7] ಅವರು ಆನೆಯ ಚಿಹ್ನೆಯುಳ್ಳ ಗೌತಮಿಪುತ್ರ ಯಜ್ಞ ಶಾತಕರ್ಣಿಯ ನಾಣ್ಯಗಳನ್ನು ಪ್ರಕಾಶಕ್ಕೆ ತಂದರು. ಈ ಸಂಶೋಧನೆಯು ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ[8] ಸಂಶೋಧನೆಯಲ್ಲಿ ದೊರೆತಿರುವ ನಾಣ್ಯಗಳಿಂದ ಹೆಚ್ಚಿನ ಪುಷ್ಟೀಕರಣೆಯನ್ನು ಪಡೆದಿದೆ.

ಗೌತಮಿಪುತ್ರ ಶಾತಕರ್ಣಿಯು ನಾಸಿಕ್ ಶಾಸನದಿಂದ ಬನವಾಸಿ ಮತ್ತು ರಾಜ್ಯದ ಹೊರನಾಡಿನ ಗಡಿ ಭಾಗಗಳು ಶಾತವಾಹನರು ಪ್ರಾಬಲ್ಯ ಸ್ಥಿತಿಗೇರಿದ ಕಾಲದಲ್ಲಿ ಅವರ ರಾಜ್ಯದ ಭಾಗಗಳಾಗಿದ್ದ ವೆಂದು ತಿಳಿದುಬರುತ್ತದೆ.

ಶಾತವಾಹನರ ನಾಣ್ಯಗಳು ಸೀಸ, ತಾಮ್ರ, ಪೋಟಿನ್ ಮತ್ತು ಬೆಳ್ಳಿ ಧಾತುಗಳಿಂದ ತಯಾರಿಸಲ್ಪಟ್ಟಿವೆ. ಆದರೆ ಬೆಳ್ಳಿ ನಾಣ್ಯಗಳು ಗೌತಮಿಪುತ್ರ ಶಾತಕರ್ಣಿಯ ಕಾಲದಿಂದ ಬಳಕೆಗೆ ಬಂದವು. ನಾಣ್ಯಗಳ ಮೌಲ್ಯವನ್ನು ಕಾರ್ಷಪಣ ಆಧಾರವನ್ನನುಸರಿಸಿ ಲೆಕ್ಕಿಸುತ್ತಿದ್ದರು. ಬೆಳ್ಳಿಯ ನಾಣ್ಯಗಳು ೩೨ ರತ್ತಿ ಅಥವಾ ೩.೮೮೩ ಗ್ರೇನುಗಳು, ತಾಮ್ರದ ನಾಣ್ಯಗಳು ೮೦ ರತ್ತಿ ಅಥವಾ ೯.೪೬೦ ಗ್ರೇನುಗಳು, ಸೀಸ ಮತ್ತು ಉತ್ತರಾರ್ಧಕಾಲದ ತಾಮ್ರದ ನಾಣ್ಯಗಳು ೮೦ ರತ್ತಿ ಅಥವಾ ೯.೪೬೦ ಗ್ರೇನ್ ತೂಕವಿವೆ.[9] ನಾಣ್ಯಗಳ ಮೇಲಿನ ಶಾಸನಗಳನ್ನು ಎರಡನೆಯ ಶಾತಕರ್ಣಿಯ, ಗೌತಮಿ ಪುತ್ರ ಶಾತಕರ್ಣಿಯ ಕಾಲ ಮತ್ತು ಆತನ ಆಳ್ವಿಕೆಯ ಅನಂತರದ ಕಾಲದವುಗಳೆಂದು ಮೂರು ಭಾಗ ಗಳಾಗಿ ವಿಂಗಡಿಸಬಹುದು. ಅಜಯಮಿತ್ರ ಶಾಸ್ತ್ರಿ ಅವರ ಪ್ರಕಾರ ಕೆಲವು ನಾಣ್ಯಗಳ ಮೇಲಿನ ಶಾಸನವು ಇಂಡೋಗ್ರೀಕ್ ಅರಸರ ಮಾದರಿಯಂತೆ ಇರುವುದರಿಂದ ಅವುಗಳನ್ನು ಮೊದಲ ಗುಂಪಿಗೆ ಕೂಡಿಸಿ ಅದನ್ನು ಕ್ರಿ. ಪೂ. ಒಂದನೆಯ ಶತಮಾನದ ಕಾಲದವುಗಳೆಂದು ಹೇಳಬಹುದಾಗಿದೆ. ಉಳಿದ ಶಾಸನಗಳ ವಿವರಗಳು ಒಂದನೇ ಶತಮಾನದ ನಂತರದವುಗಳು.[10]

ಶಾತವಾಹನರ ನಾಣ್ಯಗಳು ಕಲಾತ್ಮಕ ದೃಷ್ಟಿಯಿಂದ ಸುಂದರವಾಗಿಲ್ಲವೆಂದೂ ಆದರೆ ಅರಸರ ಇತಿಹಾಸವನ್ನು ತಿಳಿಸುತ್ತವೆಂದೂ ವಿ. ಎ. ಸ್ಮಿತ್[11] ಅವರು ಹೇಳಿದ್ದಾರೆ. ಆದರೆ ಅಳತೇಕರ್ ರವರು[12] ಈ ನಾಣ್ಯಗಳು ಕಲಾತ್ಮಕ ದೃಷ್ಟಿಯಿಂದ ಪ್ರಮುಖವಾಗಿಲ್ಲದಿದ್ದರೂ ಅವುಗಳಲ್ಲಿ ವಿದೇಶೀಯ ಪ್ರಭಾವವನ್ನು ಕಾಣಲಾಗದೆಂದು ಅಭಿಪ್ರಾಯ ಪಟ್ಟಿದ್ದಾರೆ. ನಾಣ್ಯಗಳ ಮೇಲಿನ ಚಿಹ್ನೆಗಳ ದೃಷ್ಟಿ ಯಿಂದ ಅವುಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು.

(ಅ) ಪ್ರಾದೇಶಿಕ ಚಿಹ್ನೆಗಳು—ಆನೆ, ನಂದಿ, ಸಿಂಹ, ಕಟಾಂಜನದಲ್ಲಿರುವ ಮರ, ಈ ಚಿಹ್ನೆಗಳನ್ನು ಒಂದು ಮತ್ತು ಎರಡನೇ ಶಾತಕರ್ಣಿಯ, ಸತಿಶ್ರೀ, ಗೌತಮಿಪುತ್ರ ಶಾತಕರ್ಣಿ, ವಾಸಿಷ್ಠಿ ಪುತ್ರ ಶಾತಕರ್ಣಿ ಮತ್ತು ಗೌತಮಿಪುತ್ರ ಯಜ್ಞ ಶಾತಕರ್ಣಿ ಇವರ ನಾಣ್ಯಗಳಲ್ಲಿ ಕಾಣಬಹುದು.

(ಬ) ರಾಜಕೀಯ ಚಿಹ್ನೆಗಳು—ಅರಸನ ಚಿತ್ರ, ಕಮಾನುಳ್ಳಗುಡ್ಡ.

(ಕ) ವಾಣಿಜ್ಯ ಚಿಹ್ನೆಗಳು—ಹಡಗು. ವಾಸಿಷ್ಠಿಪುತ್ರ ಪುಲಮಾವಿ ಮತ್ತು ಗೌತಮಿಪುತ್ರ ಯಜ್ಞ ಶಾತಕರ್ಣಿಯರ ನಾಣ್ಯಗಳಲ್ಲಿ ಕಾಣಬಹುದು.

(ಡ) ಧಾರ್ಮಿಕ ಇಲ್ಲವೇ ಸ್ಮಾರಕ ಚಿಹ್ನೆಗಳು—ಅಶ್ವ, ಚಕ್ರ, ಶ್ರೀವತ್ಸ, ಲಕ್ಷ್ಮಿ, ನದಿ ಮತ್ತು ಮೀನು, ಸ್ವಸ್ತಿಕ ಮತ್ತು ತ್ರಿಕೋನಾಕಾರದ ಧ್ವಜ. ಎರಡನೇ ಶಾತಕರ್ಣಿ ಮತ್ತು ಗೌತಮಿಪುತ್ರ ಯಜ್ಞ ಶಾತಕರ್ಣಿ ಮತ್ತು ಚಂಡ ಶಾತಕರ್ಣಿ ಇವರ ನಾಣ್ಯಗಳಲ್ಲಿ ನೋಡಬಹುದು.

ಶಾತವಾಹನ ಅರಸರ ನಾಣ್ಯಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ವರ್ಣಿಸಬಹುದು. ಸೀಸ ಮತ್ತು ತಾಮ್ರದ ನಾಣ್ಯಗಳನ್ನು ಮುದ್ರಿಸಿರುವವರಲ್ಲಿ ಒಂದನೇ ಶಾತಕರ್ಣಿಯೇ ಪ್ರಥಮನು. ಇವು ವೃತ್ತಾ ಕಾರದವುಗಳಾಗಿದ್ದು ಸೈದಾಪ, ಹೈದರಾಬಾದ್ ಮತ್ತು ಕೊಂಡಾಪುರಗಳಲ್ಲಿ ದೊರೆತಿವೆ. ಶಾತವಾಹನನ ಪೋಟಿನ್ ನಾಣ್ಯಗಳು ನೆವಾಸದಲ್ಲಿ ಸಿಕ್ಕಿವೆ. ಈ ಅರಸನ ಇತರ ನಾಣ್ಯಗಳು ಕೊಂಡಾಪುರ, ಔರಂಗಾ ಬಾದ್‌ಗಳಲ್ಲಿ ಸಿಕ್ಕಿವೆ. ಸತಿಶ್ರೀಯ ನಾಣ್ಯಗಳು ಪಶ್ಚಿಮ ಮಾಳವ, ಉಜ್ಜಯಿನಿ, ಪೂರ್ವಮಾಳವ, ವಿದಿಶಾ, ತ್ರಿಪುರಿ (ಸೀಸ ಮತ್ತು ಕಂಚಿನ ನಾಣ್ಯಗಳು) ಮತ್ತು ಹೋಷಂಗಾಬಾದ್ (ತಾಮ್ರ ನಾಣ್ಯಗಳು) ಗಳಲ್ಲಿ ಸಿಕ್ಕಿವೆ. ಹೈದರಾಬಾದ್‌ನಲ್ಲಿ ಕೌಶಿಕಪುತ್ರನ ನಾಣ್ಯಗಳು ಸಿಕ್ಕಿವೆ. ಈತನು ಒಬ್ಬ ಸಾಧನಿಕ ಪ್ರಮುಖನಿರಬಹುದು ಎಂದು ಮಿರಾಶಿಯವರು ಹೇಳಿದ್ದಾರೆ.

ಶಾತವಾಹನರ ನಾಣ್ಯಗಳ[13] ಅಧ್ಯಯನ ಮಾಡಿದ ನಂತರ ಶ್ರೀ ಶಾತಕರ್ಣಿ ಎಂಬ ಅರಸನ ತಾಮ್ರದ ನಾಣ್ಯವು ಈ ವರೆಗೆ ದೊರೆತಿಲ್ಲವೆಂಬ ಅಂಶವು ಗೋಚರವಾಯಿತು. ಶಾತವಾಹನರ ಸೀಸದ ನಾಣ್ಯವೊಂದನ್ನು ಡಾ. ಎಮ್. ಎಚ್. ಕೃಷ್ಣ[14] ಅವರು ತಮ್ಮ ವರದಿಯಲ್ಲಿ ಗುರುತಿಸಿದ್ದಾರೆ. ಈ ನಾಣ್ಯದ ಹೊರಮುಖದಲ್ಲಿ ಒಂದು ಅಶ್ವದ ಚಿತ್ರವೂ, ಕಟಾಂಜನದ ಒಳಗಿರುವ ನಾಗ ಮತ್ತು ವೃಕ್ಷದ ಚಿತ್ರವೂ ಕಂಡುಬರುವುದು. ನಾಣ್ಯದ ಒಳಮುಖದಲ್ಲಿ ಸತ(ಕ) ಎಂಬ ಅಕ್ಷರಗಳಿವೆ. ಆದ್ದರಿಂದ ಈ ನಾಣ್ಯವು ಪ್ರಾಯಶಃ ಶ್ರೀ ಶಾತಕರ್ಣಿಯದೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಪ್ರಸ್ತುತ ದೊರೆತಿರುವ ನಾಣ್ಯವು ತಾಮ್ರದ್ದಾಗಿರುವುದು. ಇದರ ಸುತ್ತಳತೆ ೦.೬ ಅಂಗುಲ; ತೂಕ—೩ ಗ್ರಾಮ್‌ಗಳು.

ಹೊರಮುಖ: ವೃಕ್ಷ ಮತ್ತು ನಾಗ—ಕಟಾಂಜನದ ಒಳಗಿರುವ ಚಿತ್ರ ಹಾಗೂ ಒಂದು ಅಶ್ವದ ಚಿತ್ರ. ಅಶ್ವವು ಓಡುತ್ತಿರುವಂತೆ ಕಾಣುತ್ತದೆ.

ಒಳಮುಖ: ಎರಡು ಗೆರೆಗಳು ಮತ್ತು ನಾಗರಲಿಪಿಯಲ್ಲಿ ಸತಕ ಎಂಬ ಅಕ್ಷರಗಳಿವೆ.

ಮೇಲ್ಮುಖದಲ್ಲಿ ಅಶ್ವ, ವೃಕ್ಷ, ನಾಗ ಕಟಾಂಜನದ ಚಿತ್ರ ಹಾಗೂ ಒಳಮುಖದಲ್ಲಿರುವ ಸತ(ಕ) ಎಂಬ ಅಕ್ಷರಗಳ ಆಧಾರವನ್ನವಲಂಬಿಸಿ ಈ ನಾಣ್ಯವು ಶ್ರೀ ಸಾತಕರ್ಣಿಯದೇ ಎಂದು ಹೇಳಬಹುದು. ಈವರೆಗೆ ದೊರೆತಿರುವ ನಾಣ್ಯಗಳಲ್ಲಿ ಇದು ಸಿಕ್ಕಿಲ್ಲದಿರುವ ನಾಣ್ಯವಾದ ಕಾರಣ ಇದು ಪ್ರಾಮುಖ್ಯತೆ ಪಡೆಯಲು ಯೋಗ್ಯವಾಗಿದೆ.[15]

ಎರಡನೇ ಶಾತಕರ್ಣಿಯ ಸಿಂಹ ಚಿಹ್ನೆಯುಳ್ಳ ನಾಣ್ಯಗಳು ಗುಜರಾತ್, ಸೌರಾಷ್ಟ್ರ, ಅವಂತಿ ಮತ್ತು ಅನೂಪ, ಮಾಳವ ಮತ್ತು ಹೈದರಾಬಾದಿನಲ್ಲಿ ದೊರೆತಿವೆ. ಈತನ ನಾಣ್ಯಗಳು ಮಹಾರಾಷ್ಟ್ರದಲ್ಲಿ ಸಿಕ್ಕಿರುವುದು ಕಡಿಮೆ. ಬ್ರಹ್ಮಪುರಿ, ಕೌಂಡಿನ್ಯಪುರ ವಿದರ್ಭದ ಪೌನಿ ಎಂಬಲ್ಲಿ ಸಿಕ್ಕಿರುವ ನಾಣ್ಯಗಳು ಪ್ರಮುಖವಾಗಿವೆ. ಬಿಲಾಸ್‌ಪುರ ಮತ್ತು ದಕ್ಷಿಣ ಕೋಸಲದಲ್ಲಿ ಸಹೀಲಕನ ನಾಣ್ಯಗಳು ಸಿಕ್ಕಿವೆ. ಚಿಮುಕನ ಕೋಟಲಿಂಗ ನಾಣ್ಯಗಳು ಹೈದರಾಬಾದ್‌ನಲ್ಲಿಯೂ ಹಾಗೂ ಒಂದನೇ ಪುಲಮಾವಿಯ ನಾಣ್ಯಗಳು ಹೈದರಾಬಾದ್ ಮತ್ತು ನೆವಾಸಗಳಲ್ಲಿಯೂ ದೊರೆತಿವೆ.

ಗೌತಮಿಪುತ್ರ ಶಾತಕರ್ಣಿಯ ಬೆಳ್ಳಿಯ ನಾಣ್ಯಗಳು ಮುಖ್ಯವಾಗಿವೆ. ಕ್ಷಹರಾಟರನ್ನು ಈತನು ನಾಶಗೊಳಿಸಿದ ನಂತರ ನಹಪಾನನ ಬೆಳ್ಳಿಯ ನಾಶಗೊಳಿಸಿದ ನಾಣ್ಯಗಳನ್ನು ಈತನು ಪುನರ್ ಮುದ್ರಿಸಿದನು. ಇವುಗಳ ಮೇಲೆ ಮೂರು ಮತ್ತು ಆರು ಕಮಾನಿನ ಗುಡ್ಡಗಳಿವೆ. ಸೂರ್ಯಚಿಹ್ನೆಯುಳ್ಳ (ಪ್ರಾಬಲ್ಯ ಸೂಚಕ) ನಾಣ್ಯಗಳು ನೆವಾಸದಲ್ಲಿ ದೊರೆತಿವೆ. ಸೀಸ, ತಾಮ್ರ ಮತ್ತು ಪೋಟಿನ್ ನಾಣ್ಯಗಳು ಕರ್ನಾಟಕ ಗಡಿಸೀಮೆ ಯನ್ನುಳಿದು ಇತರ ಭಾಗಗಳಲ್ಲಿ ದೊರೆತಿವೆ. ಈತನ ಅಶ್ವಮೇಧ ನಾಣ್ಯಗಳು ಅಮರಾವತಿಯಲ್ಲಿ ಸಿಕ್ಕಿವೆ. ಪುನರ್ ಮುದ್ರಿತವಾದ ಬೆಳ್ಳಿಯ ನಾಣ್ಯಗಳಲ್ಲಿ ವಿಜಯಗಳಿಸಿದ ಗೌತಮಿಪುತ್ರ ಶಾತಕರ್ಣಿಯ ಚಿತ್ರವಿದೆ. ನಾಸಿಕ್ ಜಿಲ್ಲೆಯ ಜೋಗಲ್‌ತಂಬಿಯಲ್ಲಿ ಸುಮಾರು ೯.೨೭೦ ರಷ್ಟು ಇಂಥ ನಾಣ್ಯಗಳು ದೊರೆತಿವೆ. ಇವುಗಳ ಮೇಲೆ ಬ್ರಾಹ್ಮೀಲಿಪಿಯಲ್ಲಿ ಅರಸನ ಹೆಸರಿದೆ. ಕಮಾನಿನ ಗುಡ್ಡ, ಸಾಲುಗೆರೆ ಇವುಗಳ ಮೇಲಿನ ಚಿಹ್ನೆಗಳಾಗಿವೆ. ಬೆಳ್ಳಿಯ ನಾಣ್ಯಗಳು ಗೌತಮಿಪುತ್ರನ ನಂತರವೂ ಮುಂದುವರೆದವು.

ಗೌತಮಿಪುತ್ರ ಶಾತಕರ್ಣಿಯ ಕಾಲಾನಂತರವೂ ಆಳಿದ ವಾಸಿಷ್ಠಪುತ್ರ ಪುಲಮಾವಿಯು ವಾಣಿಜ್ಯ ಚಿಹ್ನೆಗಳನ್ನು ಹೊಂದಿದ ತಾಮ್ರ ಮತ್ತು ಪೋಟಿನ್ ನಾಣ್ಯಗಳನ್ನು ಮುದ್ರಿಸಿದನು. ಇವನ ನಾಣ್ಯಗಳು ಪುಣೆ, ಬ್ರಹ್ಮಪುರಿ, ಚಂದ್ರವಳ್ಳಿ, ಕೊಂಡಾಪುರ, ತರ್ಹಾಲಾ ಮತ್ತು ಚಾಂದಾನೆಲೆಗಳಲ್ಲಿ ಸಿಕ್ಕಿವೆ. ಅಶ್ವ ಚಿಹ್ನೆಯನ್ನುಳ್ಳ ನಾಣ್ಯಗಳು ಆಂಧ್ರಪ್ರದೇಶ ಮತ್ತು ಬ್ರಹ್ಮಪುರಿಯಲ್ಲಿಯೂ, ಗುಡ್ಡದ ಚಿಹ್ನವಿರುವ ನಾಣ್ಯಗಳು ಆಂಧ್ರಪ್ರದೇಶದಲ್ಲಿಯ ಸಿಂಹ ಲಾಂಛನವುಳ್ಳ ನಾಣ್ಯಗಳು ಅಮರಾವತಿ ಕೃಷ್ಣ—ಗೋದಾವರಿ ಜಿಲ್ಲೆ ಮತ್ತು ಗುಡಿವಾಡಗಳಲ್ಲಿಯೂ ದೊರೆತಿವೆ. ವೃತ್ತಾಕಾರದ ಹಡಗು ಚಿಹ್ನೆಯುಳ್ಳ ನಾಣ್ಯಗಳು ಅಮರಾವತಿ, ಚೋಳಮಂಡಲ ಮತ್ತು ಗುಂಟೂರು ಜಿಲ್ಲೆಯಲ್ಲಿ ಸಿಕ್ಕಿವೆ. ಈತನ ಚಿತ್ರವಿರುವ ಬೆಳ್ಳಿಯ ನಾಣ್ಯಗಳು ಬಿಲ್ಸಾ, ಹೈದರಾಬಾದ್, ನಾಸಿಕ, ಪೈಠಣ ಮತ್ತು ಧಾನ್ಯ

ಕಟಕಗಳಲ್ಲಿ ಸಿಕ್ಕಿವೆ. ಇದೇ ರೀತಿ ವಾಸಿಷ್ಠಪುತ್ರ ಶಾತಕರ್ಣಿ ಮತ್ತಿತರರ ನಾಣ್ಯಗಳು ನಾಸಿಕ್, ತರ್ಹಾಲಾ, ಬ್ರಹ್ಮಪುರಿ ಮತ್ತು ಕೃಷ್ಣಾಜಿಲ್ಲೆಯಲ್ಲಿ ಸಿಕ್ಕಿವೆ. ವಾಸಿಷ್ಠಿ ಯಜ್ಞ ಶಾತಕರ್ಣಿ, ನಾಲ್ಕನೇ ಪುಲಮಾವಿ ಮತ್ತು ಪುರಾಣಗಳಲ್ಲಿ ಉಲ್ಲೇಖಿಸಲ್ಪಡದಿರುವ ರುದ್ರ ಶಾತಕರ್ಣಿ, ಶತಶಾತಕರ್ಣಿ, ಕರ್ಣಶಾತಕರ್ಣಿ ಮತ್ತು ಕುಂಭಶಾತಕರ್ಣಿಯರ ನಾಣ್ಯಗಳು ಸಿಕ್ಕಿವೆ.

ಶಾತವಾಹನರ ನಾಣ್ಯಗಳು ಅವರ ಇತಿಹಾಸಕ್ಕೆ ಸಂಬಂಧಪಟ್ಟಿರುವ ವಿಶೇಷ ಸಂಗತಿಗಳನ್ನು ತಿಳಿಸುವುದರಲ್ಲಿ ಅತ್ಯಂತ ಉಪಯುಕ್ತವಾಗಿವೆ. ಈ ಅರಸು ಮನೆತನದ ಪ್ರಾರಂಭಿಕ ಅರಸರು ದಖ್ಖನಿನ ಉತ್ತರ ಮತ್ತು ಪಶ್ಚಿಮ ಭಾಗದಲ್ಲಿ ರಾಜ್ಯಕಟ್ಟಿದ್ದರು. ಪ್ರತಿಷ್ಠಾನ—ಆಂಧ್ರ–ಕರ್ನಾಟಕ ಭಾಗಗಳು ಗೌತಮೀಪುತ್ರನ ಕಾಲದ ಮತ್ತು ಅನಂತರದ ಶಾತವಾಹನರ ಆಳ್ವಿಕೆಗೆ ಒಳಪಟ್ಟವು. ಅಶೋಕನ ತರುವಾಯ ಇವರು ಆಳ್ವಿಕೆ ಪ್ರಾರಂಭಿಸಿದರು. ಆದರೆ ಮೊದಲು ಸಣ್ಣ ಪುಟ್ಟ ಅರಸರಾಗಿದ್ದು, ಅಶೋಕನ ಅಧೀನದಲ್ಲಿದ್ದರು. ಅವರಲ್ಲಿ ಇತರ ಪ್ರದೇಶಗಳ ಜೊತೆಗೆ ಕರ್ನಾಟಕದ ಚಂದ್ರವಳ್ಳಿಯನ್ನು ಇಲ್ಲಿ ಹೆಸರಿಸಬಹುದು. ಈ ರಾಯ ಸಿಮುಖ ಶಾತವಾಹನನೇ ವಂಶದ ಮೂಲಪುರುಷ. ಇವನು ಕ್ರಿ.ಪೂ. ೨೩೦ರಲ್ಲಿ ತನ್ನ ಆಳ್ವಿಕೆಯನ್ನು ಆರಂಭಿಸಿರಬಹುದು. ನಾಸಿಕ್, ಪೈಠಣ, ಕೌಂಡಿನ್ಯಪುರ, ತ್ರಿಪುರಿ ಮತ್ತು ಪುಣೆಗಳಲ್ಲಿ ಸಿಕ್ಕಿರುವ ನಾಣ್ಯಗಳು ಈ ಅಂಶವನ್ನು ಪುಷ್ಟೀಕರಿಸುತ್ತವೆ. ಇವುಗಳಲ್ಲಿ ಸಿಮುಖನ ನಾಣ್ಯಗಳು ದೊರೆತಿಲ್ಲವಾದರೂ ಅವನೇ ಮೊದಲ ಅರಸ ಎಂಬುವುದರಲ್ಲಿ ಸಂಶಯವಿಲ್ಲ. ಈತನ ಆಳ್ವಿಕೆಯ ಕಾಲ ೨೩ ವರ್ಷಗಳು. ಈತನ ತರುವಾಯ ಪುರಾಣೋಕ್ತಿಯಂತೆ ಈತನ ತಮ್ಮನಾದ ಕೃಷ್ಣನು (ಕ್ರಿ.ಪೂ. ೨೦೭–೧೮೯) ೧೮ ವರ್ಷ ಆಳಿದನು. ಅನಂತರ ಕ್ರಿ ಪೂ. ೧೮೯ ರಿಂದ ಕ್ರಿ.ಪೂ. ೧೭೯ರ ವರೆಗೆ ಆಳಿದ ೧ನೇ ಶಾತಕರ್ಣಿಯೇ ಪ್ರಬಲನಾದ ಅರಸನೆನಿಸಿದನು. ನೆವಾಸಾ ಮತ್ತು ನಾಸಿಕ್ ಭಾಗದಲ್ಲಿ ಸಿಕ್ಕಿರುವ ಈತನ ನಾಣ್ಯಗಳಿಂದ ರಾಜಧಾನಿಯು ಪ್ರತಿಷ್ಠಾನವಾಗಿತ್ತೆಂದು ತಿಳಿದುಬರುವದು. ರಾಜ್ಯವಿಸ್ತರಣಾ ಕಾರ್ಯದಲ್ಲಿ ಈತನಿಗೆ ಕಳಿಂಗ ಅರಸನಾಗಿದ್ದ ಖಾರವೇಲನಿಂದ ಅಡ್ಡಿಯುಂಟಾಯಿತು. ಆದರೆ ಈತನ ನಂತರ ರಾಣಿ ನಾಗಮಣಿಕಳು ರಾಜಮಾತೆಯಾಗಿ ಆಳ್ವಿಕೆ ನಡೆಸಿದಳು. ಆಕೆಯ ಹಿರಿಯ ಮಗನಾದ ವೇದಶ್ರೀಯು ಅನೇಕ ಮಹಾರಥಿಗಳ ನೆರವನ್ನು ಪಡೆದು ಪುನಃ ಪ್ರಾಬಲ್ಯಕ್ಕೆ ಬಂದನು. ಈ ಅಂಶವು ಚಿತ್ರದುರ್ಗ ಮತ್ತು ಕರ್ನೂಲಿನ ವೀರಾಪುರದಲ್ಲಿ ಸಿಕ್ಕಿರುವ ಮಹಾರಥಿ ಸೀಸದ ನಾಣ್ಯಗಳಿಂದ ತಿಳಿದುಬರುತ್ತದೆ. ನಾಗಮಣಿಕಳ ನಾಲ್ವರು ಮಕ್ಕಳಲ್ಲಿ ಹಿರಿಯ ಮಗನಾದ ವೇದಶ್ರೀಯೇ ಪಟ್ಟಕ್ಕೆ ಬಂದನು. ಅನಂತರ ಎರಡನೇ ಶಾತಕರ್ಣಿ (ಕ್ರಿ.ಪೂ. ೧೬೧–೧೦೫) ೫೬ ವರ್ಷ ಆಳಿದನೆಂಬುದು ಭಿಲ್ಸಾದಲ್ಲಿ ದೊರೆತಿರುವ ನಾಣ್ಯಗಳಿಂದ ತಿಳಿದುಬರುತ್ತದೆ. ಈತನ ತರುವಾಯ ಆಳಿದ ಅರಸರ ನಾಣ್ಯಗಳು ವಿಶೇಷವಾಗಿ ದೊರೆತಿಲ್ಲವಾದರೂ ಚಿಮುಕ ಶಾತವಾಹನ(ಕ್ರಿ.ಪೂ. ೪೦) ಮತ್ತು ಒಂದನೇ ಪುಲಮಾವಿ (ಕ್ರಿ.ಪೂ. ೪೦–೧೬) ಅರಸನಾಗಿದ್ದಿರಬಹುದು.

ಗೌತಮಿಪುತ್ರ ಶಾತಕರ್ಣಿಯೇ (ಕ್ರಿ.ಶ. ೫೪–೮೮) ಈ ವಂಶದ ಅರಸರಲ್ಲೆಲ್ಲಾ ಅತ್ಯಂತ ಪ್ರಸಿದ್ಧ ಅರಸನೆಂಬುದು ನಿರ್ವಿವಾದ ಅಂಶವಾಗಿದೆ. ಈತನು ವಿದೇಶಿಯ ಅರಸನಾಗಿದ್ದ ನಹಪಾನನನ್ನು ಸೋಲಿಸಿದುದಲ್ಲದೆ ಗುಜರಾತ್ ಮತ್ತು ಕಾಥೇವಾಡದಲ್ಲಿ ಆಳಿದುಳಿದಿದ್ದ ತನ್ನ ರಾಜ್ಯವನ್ನು ಪಶ್ಚಿಮ ಕರಾವಳಿ ಪ್ರಾಂತ ಮತ್ತು ಅಪರಾಂತ ಮತ್ತು ಮುಲಕದ ಕೆಲವು ಭಾಗ ಮತ್ತು ವೈಜಯಂತಿಯವರೆಗೂ ವಿಸ್ತರಿಸಿದನೆಂಬುದು ನಾಸಿಕ ಶಾಸನದಿಂದ ತಿಳಿದುಬರುತ್ತದೆ. ಇಷ್ಟೇ ಅಲ್ಲದೆ ರಾಜಧಾನಿಯಾಗಿದ್ದ ಪ್ರತಿಷ್ಠಾನವನ್ನೂ ವಶಪಡಿಸಿಕೊಂಡನು. ಈತನಿಗೆ ತನ್ನ ಪ್ರಾಬಲ್ಯವನ್ನು ಪುನಃ ಸ್ಥಾಪಿಸಿಕೊಳ್ಳಲು ೧೭ ವರ್ಷಗಳು ಹಿಡಿದವು. ಅನಂತರ ದಿಗ್ವಿಜಯ ಯಾತ್ರೆಯನ್ನು ತನ್ನ ಆಳ್ವಿಕೆಯ ೧೮ನೇ ವರ್ಷದಲ್ಲಿ ಆರಂಭಿಸಿದನು. ಮತ್ತು ನಾಸಿಕದ ಬಹುಭಾಗ, ಅಪರಾಂತ ಮತ್ತು ಕುಂತಳವನ್ನು ಗೆದ್ದುದಲ್ಲದೆ ವೈಜಯಂತಿಗೆ ನೌಕೆಯನ್ನು ಕಳುಹಿಸಿದನು. ಕ್ಷಹರಾಟ ಅರಸು ನಹಪಾನನ ಬೆಳ್ಳಿಯ ನಾಣ್ಯಗಳನ್ನು ಪುನಃ ಮುದ್ರಿಸಿದವನು ಈತನೇ. ಈತನು ಹೊರಡಿಸಿದ ತಾಮ್ರ ಮತ್ತು ಬೆಳ್ಳಿಯ ನಾಣ್ಯಗಳು ಆಕರ ಮತ್ತು ದಕ್ಷಿಣ ಕೋಸಲದಲ್ಲಿ ಸಿಕ್ಕಿವೆ. ಇವುಗಳ ಮೇಲೆ ಅರಸನ ಚಿತ್ರವಿರುವುದಿಲ್ಲ (non-portrait coins). ಕಚ್ಛ, ಸೌರಾಷ್ಟ್ರ, ಲಾಟ ಮತ್ತು ಪಶ್ಚಿಮ

ಭಾರತದಲ್ಲಿ ಸಿಕ್ಕಿರುವ ನಾಣ್ಯಗಳಿಂದ ಈತನು ಉತ್ತರದಲ್ಲಿ ಆಳುತ್ತಿದ್ದ ಶಕ-ಪಹ್ಲವ—ಯವನರನ್ನು ಸೋಲಿಸಿದನೆಂದು ತಿಳಿದುಬರುತ್ತದೆ. ಈತನ ಕಾಲದಲ್ಲಿ ಚುಟು, ಕುರಾ ಭಾಗಗಳು ಮಹಾರಥಿಗಳ ಆಳ್ವಿಕೆಗೆ ಒಳಪಟ್ಟಿತ್ತು. ಉದಾಹರಣೆಗೆ ವೀರಾಪುರಂ ಸಂಶೋಧನೆಯಿಂದ ಮಹಾರಥಿ ಶಿವಖಿಡನು ಈ ಭಾಗದಲ್ಲಿ ಆಳುತ್ತಿದ್ದನೆಂದು ತಿಳಿದು ಬರುವುದು. ಇಲ್ಲಿ ಈತನ ೧೩ ಸೀಸದ ನಾಣ್ಯಗಳು ಸಿಕ್ಕಿರುವುದಲ್ಲದೆ ಶತನಿಕೋಟದಲ್ಲಿ ದೊರೆತಿರುವ ನಾಣ್ಯಗಳಿಂದಲೂ ಇದು ಸ್ಪಷ್ಟವಾಗುತ್ತದೆ. ಗೌತಮಿಪುತ್ರ ಶಾತಕರ್ಣಿಯು ತನ್ನ ಆಳ್ವಿಕೆಯ ೨೪ನೇ ವರ್ಷದ ವೇಳೆಗೆ ರಾಜ್ಯದ ಗಡಿಭಾಗಗಳನ್ನೆಲ್ಲಾ ಬಲಪಡಿಸಿ ಅಶ್ವಮೇಧಯಜ್ಞವನ್ನು ನೆರವೇರಿಸಿ ಅದರ ಸ್ಮರಣೆಗಾಗಿ ಅಶ್ವಚಿಹ್ನೆಯುಳ್ಳ ನಾಣ್ಯಗಳನ್ನು ಹೊರಡಿಸಿದನು. ಇವು ಆಂಧ್ರದ ಕರಾವಳಿ ಭಾಗದಲ್ಲಿ ದೊರೆತಿವೆ. ಈತನ ದಿಗ್ವಿಜಯದ ನೆನಪನ್ನು ಈತನು ಹೊರಡಿಸಿದ ಕಮಾನುಗುಡ್ಡವುಳ್ಳ ಹತ್ತು ನಾಣ್ಯಗಳು ತಿಳಿಸಿಕೊಡುತ್ತವೆ. ಶಾತವಾಹನರು ಪೂರ್ವ ಮತ್ತು ಪಶ್ಚಿಮ ಕರಾವಳಿ ಪ್ರದೇಶದಲ್ಲಿ ತಮ್ಮ ಆಳ್ವಿಕೆಯನ್ನು ಮೊಟ್ಟಮೊದಲು ವಿಸ್ತರಿಸಿದುದು ಈ ಕಾಲದಲ್ಲಿಯೇ. ಆದ್ದರಿಂದ ಶಾತವಾಹನರು ತ್ರಿಸಮುದ್ರಾಧಿಪತಿಗಳಲ್ಲದಿದ್ದರೂ ದಕ್ಷಿಣ ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿ ಪ್ರದೇಶದ ಅಧಿಪತಿಗಳಾಗಿದ್ದರೆಂಬುದು ಸಿದ್ಧವಾದವಾಗಿದೆ.

ಕ್ರಿ.ಶ. ೭೮ ರಿಂದ ೮೮ರ ವರೆಗೆ ಶಾತವಾಹನ ಸಾಮ್ರಾಜ್ಯಕ್ಕೆ ಶಕರ ದಾಳಿಯ ಭೀತಿಯೊದಗಿತು. ಈ ಅವಧಿಯಲ್ಲಿ ಎರಡನೇ ಪುಲಮಾವಿ (ಕ್ರಿ.ಶ. ೮೮–೧೧೬)ಯು ಆಳಿದನು. ಈತನು ಗೌತಮಿಪುತ್ರನ ಹಿರಿಯ ಮಗ. ಈ ಕಾಲಕ್ಕೆ ಸಾಮ್ರಾಜ್ಯವು ಆಂಧ್ರದ ಕರಾವಳಿಯ ಪ್ರದೇಶದವರೆಗೂ ಹಬ್ಬಿದ್ದ ಅಂಶವನ್ನು ಅಸ್ಮಕ, ಮೂಲಕ ಮತ್ತು ವಿದರ್ಭದಲ್ಲಿ ದೊರೆತಿರುವ ನಾಣ್ಯಗಳು ತಿಳಿಸುತ್ತವೆ. ಆದ್ದರಿಂದ ಶಾತವಾಹನರು ಈ ಕಾಲದಿಂದೀಚೆಗೆ ಉತ್ತರ ಭಾಗಗಳ ಆಡಳಿತಕ್ಕೆ ಅಷ್ಟಾಗಿ ಲಕ್ಷ್ಯಕೊಡಲಿಲ್ಲ. ಪುಲಮಾವಿಯ ನಂತರ ವಾಸಿಷ್ಠಿಪುತ್ರ ಶಾತಕರ್ಣಿಯು (ಕ್ರಿ.ಶ. ೧೧೬–೧೪೫) ೨೯ ವರ್ಷಗಳ ಆಳ್ವಿಕೆ ನಡೆಸಿದನು. ಈತನ ನಾಣ್ಯಗಳು ನೆಲ್ಲೂರು, ಅನಂತಪುರ, ಕರ್ನಾಟಕದ ಚಂದ್ರವಳ್ಳಿ ಮತ್ತು ಬ್ರಹ್ಮಪುರಿ ಮತ್ತು ಮಹಾರಾಷ್ಟ್ರದ ತೇರ್ ಎಂಬಲ್ಲಿ ದೊರೆತಿವೆ.

ಶಾತವಾಹನ ಅರಸು ಮನೆತನದವರಲ್ಲಿ ಕಡೆಯ ಅರಸರು ಶಿವಶ್ರೀ ಪುಲಮಾವಿ (ಕ್ರಿ.ಶ. ೧೪೫–೧೫೨), ಶಿವಸ್ಕಂದ ಶಾತಕರ್ಣಿ (ಕ್ರಿ.ಶ. ೧೫೨–೧೬೫). ಗೌತಮಿಪುತ್ರ ಯಜ್ಞಶ್ರೀ ಶಾತಕರ್ಣಿ (ಕ್ರಿ.ಶ. ೧೬೫–೧೯೪), ವಿಜಯ ಶಾತಕರ್ಣಿ (೧೯೪–೨೦೦) ಚಂಡಶಾತಕರ್ಣಿ (೨೦೦–೨೦೩) ಮತ್ತು ನಾಲ್ಕನೇ ಪುಲಮಾವಿ (೨೦೩–೨೧೦). ಇತರ ಅರಸರು ಕ್ರಿ.ಶ. ೨೧೦ ರಿಂದ ಕ್ರಿ.ಶ. ೨೨೦ರ ವರೆಗೆ ಆಳಿದರು.

ಅಡಿಟಿಪ್ಪಣಿ

1. Sarma, I. K. *The Coinage of the Satavahana Empire*, 146–286.
2. ಅದೇ, 30.
3. ಅದೇ, 45–46.
4. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಪೀಠದ ವಸ್ತುಸಂಗ್ರಹಾಲಯದಲ್ಲಿದೆ.
5. *I. A. R.* 1971–72, 38.
6. ಲಲಿತಕಲಾ, ಸಂಚಿಕೆ, ೧೫, ೧೮.
7. *T. A. R.* 1906–61, 92.
8. *S. E,* I, 1974, 34-35.
9. Sarma, I. K., *The Coinage of the Satavahana Empire*: 60.
10. *J N S I*, XII, 29.

11. *C C I M*, 209
12. *E H D*. II, 788.
13. *Ancient India*, 291.
14. *M A R*, 1945 79; Narasimha Murthy, A. V. : *Coins of Karnataka*, 41.
15. ಮಂಪತ್ತ್ವಪಳ್ಳಿ ಹಲವಾರು ನಾಣ್ಯಗಳನ್ನು ಕುರಿತು ೧೯೬೦ರಲ್ಲಿ ಮುದ್ರಿತವಾದ ಪ್ರೊ. ಎ. ಎಸ್. ಅಳ್ತೇಕರರ ಸ್ಮಾರಕ ಗ್ರಂಥದ *Journal of the Numismatic Society of India Vol. XXII.* ಲೇಖನದಲ್ಲಿ ಈ ತಾಮ್ರದ ನಾಣ್ಯದ ಉಲ್ಲೇಖವಿಲ್ಲ. 138–45, 146–49, 151–59.

"ಬನವಾಸಿಯ ಉತ್ಖನನದಲ್ಲಿ ಗೌತಮೀ ಪುತ್ರ ಸಾತಕರ್ಣಿಯ ಅನೇಕ ನಾಣ್ಯಗಳೂ ಯಜ್ಞಶ್ರೀ ಸಾತಕರ್ಣಿಯ ಒಂದೆರಡು ನಾಣ್ಯಗಳೂ ದೊರೆತಿವೆ. ಬನವಾಸಿಯಲ್ಲಿ ದೊರೆತ ನಾಣ್ಯಗಳು ಸೀಸದಿಂದ ಮಾಡಲ್ಪಟ್ಟಿದ್ದು ಇವುಗಳ ವ್ಯಾಸ ಸಾಮಾನ್ಯವಾಗಿ 0.6″ ಇವುಗಳ ಮುಮ್ಮುಖ ಸವೆದಿದ್ದರೂ ಹಿಮ್ಮುಖದಲ್ಲಿ ಉಜ್ಜಯಿನಿ ಚಿಹ್ನೆ ಇದೆ. ಚಂದ್ರವಳ್ಳಿಯಲ್ಲಿ ವಾಶಿಷ್ಠೀಪುತ್ರ ಪುಳುಮಾವಿ ಮತ್ತು ಯಜ್ಞಶ್ರೀ ಸಾತಕರ್ಣಿಯರ ನಾಣ್ಯಗಳು ದೊರೆತಿವೆ. ಪುಳುಮಾವಿಯ ನಾಣ್ಯದ ಒಂದು ಮುಖದಲ್ಲಿ ಸೊಂಡಿಲು ಮೇಲಕ್ಕೆತ್ತಿದ ಆನೆಯ ಚಿತ್ರ ಮತ್ತು ಬ್ರಾಹ್ಮೀ ಲಿಪಿಯಲ್ಲಿ ಪುಳುಮಾವಿ ಎಂಬ ಆಲೇಖ್ಯ ವಿದೆ. ಹಿಮ್ಮುಖದಲ್ಲಿ ಉಜ್ಜಯಿನಿ ಚಿಹ್ನೆಯಿದ್ದು ಅದರ ಒಂದೊಂದು ವೃತ್ತದಲ್ಲಿ ಒಂದೊಂದು ಗೂಡು ಇದೆ. ಯಜ್ಞಶ್ರೀ ಸಾತಕರ್ಣಿಯ ನಾಣ್ಯಗಳೂ ಹೀಗೆ ಇವೆ. ಒಂದು ನಾಣ್ಯದಲ್ಲಿ 'ಆಸಿರಿಯನ ಸತಾ' ಎಂಬ ಆಲೇಖ್ಯವೂ ಇನ್ನೊಂದರಲ್ಲಿ 'ಸಸತಕ...'ಎಂಬ ಆಲೇಖ್ಯವೂ ಇದೆ. ಪೊಟಿನ್ ನಾಣ್ಯವೊಂದರಲ್ಲಿ "ಹಕುಶ್ರೀ" ಎಂಬ ಆಲೇಖ್ಯವಿರುವುದನ್ನೂ ಇನ್ನೊಂದು ಸೀಸದ ನಾಣ್ಯದಲ್ಲಿ 'ಶ್ರೀ ಸದಕ' ಎಂಬ ಆಲೇಖ್ಯವಿರುವುದನ್ನೂ ಎಂ. ಎಚ್. ಕೃಷ್ಣ ಅವರು ಗುರುತಿಸಿದ್ದರಾದರೂ ಈ ರಾಜರು ಯಾರು ಎಂಬುದನ್ನು ಗುರುತಿಸಲಾಗಿಲ್ಲ."

('ಕರ್ನಾಟಕ' ವಿಷಯ ವಿಶ್ವಕೋಶದಲ್ಲಿ ಬಿ. ಆರ್. ಗೋಪಾಲ್‌ರವರ ಲೇಖನದಿಂದ ಉದ್ಧೃತ, ಪು ೧೪೯೦.)

ಕೆ. ಜಿ. ವಸಂತಮಾಧವ

ಕಡತ-ಪೋರ್ತುಗೀಜದಾಖಲೆ-ಶಾಸನಗಳ ತೌಲನಿಕ ಅಧ್ಯಯನ

ಪೀಠಿಕೆ

ಕಡತ, ಪೋರ್ತುಗೀಜ ದಾಖಲೆ ಮತ್ತು ಇನ್ನಿತರ ವಿದೇಶಿಯ ಪತ್ರಗಳು ಶಾಸನಗಳಂತೇ ಐತಿಹಾಸಿಕ ಆಕರಗಳಾಗಿವೆ. ಕಡತ ಮತ್ತು ಪೋರ್ತುಗೀಜ ದಾಖಲೆಗಳು ಮಧ್ಯಕಾಲೀನ ಇತಿಹಾಸ ರಚನೆಗೆ ಬಹಳ ಸಹಾಯ ಮಾಡುತ್ತವೆ. ಈ ದಾಖಲೆಗಳು ಕನ್ನಡನಾಡಿನ ಮುಖ್ಯವಾಗಿ ಕರಾವಳಿ ಪ್ರದೇಶದ ಇತಿಹಾಸ ರಚನೆಗೆ ಹೇಗೆ ಸಹಾಯ ಮಾಡುತ್ತವೆ ಮತ್ತು ಇವುಗಳಲ್ಲಿ ತಿಳಿಸಿದ ಕೆಲವು ವಿಷಯಗಳನ್ನು ಆಗಿನ ಕಾಲದ ಶಾಸನಗಳು ಹೇಗೆ ದೃಢೀಕರಿಸುತ್ತವೆ ಎಂಬುದನ್ನು ಈ ಲೇಖನದಲ್ಲಿ ತಿಳಿಸಲಾಗುವುದು.

ಕಡತ

ಇವರ ಬಳಕೆ ಹೆಚ್ಚಾಗಿ ಹದಿನಾರನೇ ಶತಮಾನದಲ್ಲಿ ಬಂದಿರಬೇಕು. ಇದು ಒಂದು ಅಡಿ ಅಗಲದ ಇಪ್ಪತ್ತುಮೂರು ಅಡಿ ಉದ್ದವುಳ್ಳ ದಪ್ಪನೆಯ ಕರಿಯ ಬಟ್ಟೆ. ಸ್ವಲ್ಪಮಟ್ಟಿಗೆ ಮಂದವಾಗಿರುವ ಬಟ್ಟೆಗೆ ಹುಣಸೇಬೀಜದ ಚರಿಯನ್ನು ಸಮತಲವಾಗಿ ಮೆತ್ತಿ ನಯವಾದ ಗಾರೆಕಲ್ಲಿನಿಂದ ಉಜ್ಜಿ ಹದವಾಗಿ ಒಣಗಿಸಿ ಅದಕ್ಕೆ ಇದ್ದಲಿನ ಪುಡಿಯನ್ನೋ ದೀಪದ ಕಾಡಿಗೆಯನ್ನೋ ಬಳಿದು ಸಿದ್ಧಪಡಿಸುತ್ತಿದ್ದರು. ಇವನ್ನು ಮೇಣಗಪ್ಪಡ ಎಂದು ಕರೆಯುತ್ತಾರೆ. ಇವರ ಮೇಲೆ ಸೀಸದಿಂದ ಬರೆಯುತ್ತಾರೆ. ಇದನ್ನು ಬೀಸಣಿಗೆಯಂತೆ ಎಡಕ್ಕೊಮ್ಮೆ ಬಲಕ್ಕೊಮ್ಮೆ ಮಡಚಿ ಪುಸ್ತಕದಂತೆ ಇಡಬಹುದು. ರಕ್ಷಣೆಗಾಗಿ ಇವಕ್ಕೂ ಮರದ ತೆಳ್ಳನೆಯ ಪಟ್ಟಿಗಳಿರುತ್ತಿದ್ದವು. ಇಂತಹ ಬರಹ ದಾಖಲೆಗಳು ಹಳೆಯ ದೇವಾಲಯಗಳಲ್ಲೂ ಹಳೆಯ ಕಾಲದ ಸಾಡಿಗರ ಸುಂಕದ ಅಧಿಕಾರಿಗಳ ಮನೆಯಲ್ಲೂ ಇವೆ. ಬೆಂಗಳೂರಿನ ಪತ್ರಾಗಾರ ಮತ್ತು ಮದ್ರಾಸಿನ ಪ್ರಾಚ್ಯ ಪುಸ್ತಕ ಭಂಡಾರದಲ್ಲೂ ಇಂತಹ ಬರಹಗಳಿವೆ. ಕೇರಳದ ಮಂಜೇಶ್ವರ ದೇವಸ್ಥಾನದಲ್ಲೂ ಇಂತಹ ಕೆಲವು ದಾಖಲೆಗಳು ಪತ್ತೆಯಾಗಿವೆ. ದ.ಕ. ಜಿಲ್ಲೆಯ ಕುಂದಾಪುರ ತಾಲೋಕಿನ ಕೋಟೇಶ್ವರ. ಕೊಲ್ಲೂರು ಮತ್ತು ಕಮಲಶಿಲೆ ದೇವಾಲಯಗಳಲ್ಲೂ ಹಲಸನಾಡಿನ ವಿಶ್ವೇಶ್ವರಯ್ಯನವರ ಮನೆಯಲ್ಲೂ ಇಂತಹ ಹಲವಾರು ಬರಹಗಳಿವೆ. ಕೆಲವು ದಾಖಲೆಗಳ ಸಂಶೋಧನೆ ಮತ್ತು ಅಧ್ಯಯನವನ್ನು ಶಿರಸಿ ಕಾಲೇಜಿನ ಇತಿಹಾಸ ಅಧ್ಯಾಪಕರಾದ ಡಾ॥ ಎ. ಕೆ. ಶಾಸ್ತ್ರಿಯವರು ನಡೆಸುತ್ತಿದ್ದಾರೆ. ಈ ಲೇಖನದ ಬರಹಗಾರರು ದ. ಕ. ಜಿಲ್ಲೆಯ ಕೆಲವು ಕಡತವನ್ನು ಸಂಶೋಧಿಸಿ ಅವುಗಳ ವಿಚಾರ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ.[1]

ಕಡತಗಳ ಬಳಕೆಯು ವಿಶೇಷವಾಗಿ ಲೆಕ್ಕಪತ್ರಗಳನ್ನು ಇಡುವುದಕ್ಕೆ. ಇದರಲ್ಲಿ ಹೆಚ್ಚಾಗಿ ದೇವಸ್ಥಾನದ ಲೆಕ್ಕ ಪತ್ರಗಳೇ ಇರುತ್ತವೆ. ಆದರೆ ಇಂತಹ ದಾಖಲೆಗಳಲ್ಲಿ ಕೆಲವು ಶಾಸನದ ಪ್ರತಿಗಳೂ,

ಅರಸರ ನಿರೂಪ, ಜಿನ್ನವತ್ತಳೆ, ಮತ್ತು ಪ್ರಾರ್ಥನಾ ಶ್ಲೋಕಗಳು ಸೇರಿವೆ. ಬಖೈರುಗಳನ್ನೂ ಮತ್ತು ಕೈಫಿಯತ್ತುಗಳನ್ನು ಒಳಗೊಂಡಿರುವ ಕೆಲವು ಕಡತಗಳು ಮದ್ರಾಸು ಪ್ರಾಚ್ಯ ಪುಸ್ತಕ ಭಂಡಾರಗಳಲ್ಲಿವೆ. ಈ ಕಡತಗಳ ಅಧ್ಯಯನ ಆಗಿನ ಕಾಲದ ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಇತಿಹಾಸಗಳ ವಿಷಯಗಳ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತವೆ.

ಕಡತ-ಶಾಸನ

ಕಡತ-ಶಾಸನಗಳು ಒಂದಕ್ಕೊಂದು ಪೂರಕವಾಗಿವೆ. ಕೆಲವು ಶಾಸನಗಳು ಕಡತಗಳ ಇರುವಿಕೆಯನ್ನು ಉಲ್ಲೇಖಿಸಿವೆ. ಉದಾ: ಹೊಯ್ಸಳ ನರಸಿಂಹನ ವಿಜಿತ ಪ್ರದೇಶಗಳು ಅವನ ಕಡತದಲ್ಲಿ ಬರೆದಿದೆಯೆಂದು ಮೈಸೂರು ತಾಲೋಕಿನ ಧರ್ಮಪುರದ ಶಾಸನ ತಿಳಿಸಿದೆ.[2] ಹದಿನಾರನೇ ಶತಮಾನದ ಕಾಯಿಕಿಣಿ (ಉ.ಕ.) ಬಸದಿಯಲ್ಲಿ ಸಿಕ್ಕಿದ ಒಂದು ಶಾಸನ ಸೇನಬೋವನ ವಹಿ ಪ್ರಮಾಣ ವೆಂದು ಕಡತವನ್ನು ಸಂಬೋಧಿಸಿದೆ.[3] ದಕ್ಷಿಣ ಕನ್ನಡಕ್ಕೆ ಸಂಬಂಧಿಸಿದ ಕೆಲವು ಶಾಸನಗಳೂ ಮತ್ತು ಶೃಂಗೇರಿಯ ಶಾಸನಗಳನ್ನು ಕಡತದಲ್ಲಿ ಉಲ್ಲೇಖಿಸಲಾಗಿದೆ. ಕೆಳದಿ ನಾಯಕರ ಕಾಲದ ಕೆಲವು ಶಾಸನಗಳಲ್ಲಿ ಸೇನ ಬೋವನ ಕಡಿತಕ್ಕೆ ಬರಸಿ[4] ಎಂದು ಉಲ್ಲೇಖಿಸಿದೆ. ಉದಾ: ಕ್ರಿ. ಶ. ೧೬೬೮ರ ಶಾಸನದಲ್ಲಿ ಕೆಳದಿ ಸೋಮಶೇಖರನು ಕೂಡ್ಲಿ ಶೃಂಗೇರಿ ಸ್ವಾಮಿಗಳಿಗೆ ಮಾಚೇಹಳ್ಳಿ ಗ್ರಾಮದ ಅರವತ್ತು ವರಹ ಭೂಮಿಯನ್ನು ಸ್ವಾಸ್ತಿ ಬಿಡುವಾಗ 'ಸೇನಬೋವನ ಕಡತಕ್ಕೆ' ಬರಸಿ ಎಂದು ಉಲ್ಲೇಖಿಸಿದೆ.[5] ಬಗ್ಗುಂಜೆ ಸೀಮೆ ಸೀತಾನದಿಯ ದಡದಲ್ಲಿ ಕೆಂಚನು ಕ್ರಿ. ಶ. ೧೭೬೯ರಲ್ಲಿ ಕಟ್ಟಿಸಿದ ಮಠಕ್ಕೆ ಬಿಟ್ಟ ದಾನ ಶಾಸನದಲ್ಲಿ ಸೇನಬೋವನ ಕಡತದ ಉಲ್ಲೇಖ ಮಾಡಿದೆ.[6]

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಳಿದ ಕೆಲವು ಸಾಮಂತ ಅರಸುಮನೆತನದವರು ಕಡತಗಳನ್ನು ಇಟ್ಟುಕೊಂಡಿದ್ದರು. ಅವರ ಮನೆಯಲ್ಲಿ ಕಡತದ ಚಾವಡಿ ಇದೆ. ಇದು ಪತ್ರಾಗಾರವಾಗಿರಬೇಕು. ಈ ವಿಚಾರ ಬಂಟವಾಳದಲ್ಲಿ ಸಿಕ್ಕಿದ ಬಂಗರಸರ ಒಂದು ಅಪ್ರಕಟಿತ ಶಾಸನ (೧೫೮೬ ಕ್ರಿ. ಶ.)ದ ಅಧ್ಯಯನದಿಂದ ತಿಳಿಯುತ್ತದೆ. ಶಾಸನವು "ಅರಮನೆಯಲ್ಲಿ ಹೊಸವರ್ಗಕ್ಕೆ ಬರೆಸಿಕೊಂಡು" ಎಂದು ಹೇಳಿದ ವಾಕ್ಯ ಪತ್ರಾಗಾರವಿದ್ದಿತೆಂಬುದನ್ನು ದೃಢೀಕರಿಸುತ್ತದೆ.[7]

ಕಡತ ಮತ್ತು ಶಾಸನಗಳಲ್ಲಿ ತಿಳಿಸಿದ ವಿಚಾರಗಳು ಒಂದಕ್ಕೊಂದು ಪೂರಕವಾಗಿವೆ. ಈ ಎರಡು ಆಕರಗಳ ತೌಲನಿಕ ಅಧ್ಯಯನದ ಅವಶ್ಯಕತೆ ಇದೆ. ಶೃಂಗೇರಿ ಮಠ ಮತ್ತು ಕನ್ನಡ ಕರಾವಳಿಯ ದೇವಾಲಯಗಳ ಸಂಬಂಧವನ್ನು ಕೆಲವು ಶಾಸನಗಳು[8] ತಿಳಿಸಿದ್ದನ್ನು ಶೃಂಗೇರಿಯ ಕಡತಗಳು ಪುಷ್ಟೀಕರಿಸುತ್ತವೆ. ಶಾಸನಗಳಲ್ಲಿ ತಿಳಿಸಿದ ವಿಚಾರವಲ್ಲದೆ, ಕಡತಗಳು ಶೃಂಗೇರಿ ಮಠ ಮತ್ತು ಕನ್ನಡ ಕರಾವಳಿಯ ದೇವಾಲಯಗಳ ಸಂಬಂಧದ ವಿಚಾರ ಹೆಚ್ಚಿನ ವಿವರಗಳನ್ನು ತಿಳಿಸುತ್ತವೆ. ದೇವಸ್ಥಾನಗಳ ಅಧಿಕಾರ ವರ್ಗಗಳಾದ ಪಾರುಪತ್ಯಗಾರ, ಸರ್ವಾಧಿಕಾರಿ, ರಹದಾರಿ, ರಾಯಸ ಇತ್ಯಾದಿಗಳನ್ನು ಶಾಸನಗಳು ಉಲ್ಲೇಖಿಸಿದರೂ ಇವುಗಳ ಸಂಪೂರ್ಣ ಪರಿಚಯವಾಗುವುದು ಶೃಂಗೇರಿ ಕಡತದ ಅಭ್ಯಾಸದಿಂದ.[9] ಹಲಸನಾಡಿನಲ್ಲಿ ಸಿಕ್ಕಿದ ಕಡತದಲ್ಲಿ ಆ ಊರಿನ ಪಕ್ಕದಲ್ಲಿರುವ ದೇವಾಲಯಗಳು, ಅಲ್ಲಿ ನಡೆಯುವ ಉತ್ಸವಗಳು, ಮತ್ತು ಅವುಗಳ ಖರ್ಚಿನ ವಿವರ ಇವೆ. ಈ ಕಡತದಲ್ಲಿ ಹೇಳಿದ ಉತ್ಸವ ಮತ್ತು ಸೇವಾವರ್ಗಗಳನ್ನು ಆ ಪ್ರದೇಶಗಳಲ್ಲಿ ಸಿಕ್ಕಿದ ಶಾಸನಗಳು ಉಲ್ಲೇಖಿಸುತ್ತವೆ.[10] ಮಂಜೇಶ್ವರ ದೇವಾಲಯದಲ್ಲಿ ಸಿಕ್ಕಿದ ಕೆಲವು ಕಡತಗಳು ಕನ್ನಡ ಕರಾವಳಿಯಲ್ಲಿ ಬೆಳೆಯುವ ಬೆಳೆಗಳಾದ ಅಕ್ಕಿ, ಮೆಣಸು, ಕೊಬರಿ, ಕಾಡುಕತ್ತ, ಕಬ್ಬಿನ ಬೆಲ್ಲ, ಗಂಧ, ಉತ್ತುತ್ತಿ, ದ್ರಾಕ್ಷೆ, ಯಿಂಗು, ಜೋಳ, ಮಂಜಿಷ್ಟ ಇತ್ಯಾದಿಗಳನ್ನು ತಿಳಿಸಿ ಇವುಗಳ ವ್ಯಾಪಾರ ದ.ಕ. ಜಿಲ್ಲೆಯ ಬಂದರುಗಳಲ್ಲಿ ನಡೆಯುತ್ತಿತ್ತೆಂದು ತಿಳಿಸಿವೆ.[11] ಇಲ್ಲಿ ಹೇಳಿದ ಕೆಲವು ಬೆಳೆಗಳನ್ನು ಆಗಿನ ಕಾಲದ ಶಾಸನಗಳು ಉಲ್ಲೇಖಿಸುತ್ತವೆ ಎಂಬುದನ್ನು ನಾವು ತಿಳಿಯಬೇಕು.[12] ಹಲಸನಾಡಿನ ಇನ್ನು ಕೆಲವು ಕಡತಗಳು ಆಗಿನ ಕಾಲದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ತೆರಿಗೆ ಆಡಳಿತದ ವಿಚಾರ ತಿಳಿಸುತ್ತವೆ. ಆಕಸ್ಮಿಕ ದುರಂತಗಳಾದ ಗುಡ್ಡೆ ಜರಿತ, ಉಪ್ಪುನೀರು ಹಾರಿದ್ದು, ಬರೆಗುಂದಿದ್ದು; ಗುಡ್ಡೆ ಜರಿದದ್ದು; ಹೊಗೆ ಹಾದಗಳ

ಸಂದರ್ಭದಲ್ಲಿ ಸರಕಾರ ತೆರಿಗೆ ವಿನಾಯತಿ ಮಾಡಿದೆಯೆಂದು ಹಲಸನಾಡಿನ ಕಡತ ತಿಳಿಸಿದ ವಿಚಾರವನ್ನು ಗಂಗೊಳ್ಳಿ, ಹೊನ್ನಾವರ, ತೀರ್ಥಹಳ್ಳಿಯ ಕೆಲವು ಶಾಸನಗಳು ದೃಢೀಕರಿಸುತ್ತವೆ.[13] ಇವುಗಳನ್ನು ಗಮನಿಸಿದಾಗ ಕಡತ ಅಧ್ಯಯನವು ಮಧ್ಯಕಾಲೀನ ಶಾಸನಗಳ ಅಧ್ಯಯನಕ್ಕೆ ಪೂರಕವಾಗಿವೆ ಎಂದು ಅಭಿಪ್ರಾಯ ಪಟ್ಟರೆ ತಪ್ಪಾಗಲಿಕ್ಕಿಲ್ಲ. ಮಂಜೇಶ್ವರದ ಕೆಲವು ಕಡತಗಳು ಬಂಗ, ಕುಂಬಳೆ ಮತ್ತು ವಿಠಲ ಅರಸುಮನೆತನಗಳ ವಂಶಾವಳಿಯನ್ನು ತಿಳಿಸುತ್ತವೆ. ಆದರೆ ಕೆಲವೇ ಶಾಸನಗಳು ಬಂಗ, ಮತ್ತು ವಿಠಲ ಅರಸರ ವಂಶಾವಳಿಯಲ್ಲಿರುವ ಕೆಲವು ಹೆಸರನ್ನು ತಿಳಿಸುತ್ತವೆ. ಈ ಎರಡು ಆಕರಗಳ ಸಮಗ್ರ ಅಧ್ಯಯನದಿಂದ ಆಗಿನ ಕಾಲದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಅರಸು ಮನೆತನಗಳ ವಂಶಾವಳಿ, ಆ ಅರಸು ಮನೆತನಗಳ ಪ್ರಾಬಲ್ಯ ಮತ್ತು ಕರಾವಳಿಯ ಆರ್ಥಿಕ ಸಂಪತ್ತು ಮತ್ತು ಧಾರ್ಮಿಕ ಪರಂಪರೆಗಳ ಸಮಗ್ರ ಚರಿತ್ರೆ ಸಿಗುತ್ತವೆ.

•

ಪೋರ್ತುಗೀಜ ದಾಖಲೆಗಳು

ಹದಿನಾರನೇ ಶತಮಾನದಿಂದ ಕನ್ನಡ ಕರಾವಳಿಯಲ್ಲಿ ಯುರೋಪಿನ ವರ್ತಕರು ವ್ಯಾಪಾರದೊಂದಿಗೆ ಇನ್ನಿತರ ಚಟುವಟಿಕೆಗಳನ್ನು ಕೈಗೊಂಡರು. ಅಂತಹವರಲ್ಲಿ ಪೋರ್ತುಗೀಜರು ಪ್ರಮುಖರು. ಇವರು ಹದಿನಾರನೇ ಶತಮಾನದಿಂದ ಹದಿನೆಂಟನೇ ಶತಮಾನದವರೆಗೆ ಕನ್ನಡ ಕರಾವಳಿಯ ಆಗಿನ ಆಗುಹೋಗುಗಳ ವಿಚಾರ ಗಮನವಿಟ್ಟಿದ್ದರು. ಆಗಿನ ಘಟನೆಗಳಿಗೆ ಪೋರ್ತುಗೀಜರು ತೋರಿದ ಪ್ರತಿಕ್ರಿಯೆಗಳು ಅವರ ಬರಹಗಳಿಂದ ತಿಳಿದುಬರುತ್ತವೆ. ಈ ಬರಹಗಳು ಕನ್ನಡ ನಾಡಿನ ಇತಿಹಾಸವನ್ನು ಪರಿಪೂರ್ಣಗೊಳಿಸಲು ಸಹಾಯಕವಾಗುತ್ತವೆ. ಈ ಶತಮಾನದಲ್ಲಿ ಇವರ ದಾಖಲೆಗಳ ವಿವರ ಹೆಚ್ಚಿಗೆ ತಿಳಿದು ಬಂದಿದೆ. ಇವುಗಳನ್ನು ಬೆಳಕಿಗೆ ತಂದವರು ರಾಬರ್ಟ್ ಸಿವೆಲ್, ಪಾದ್ರಿ ಹೆನ್ರಿ ಹೆರಾಸ, ಡಾ॥ ಮೊರೇಸ್ ಪಾದ್ರಿ ಅಂತೋನಿ ಡಿ. ಕೊಷ್ಟಾ, ಡಾ. ಬಿ. ಎಸ್. ಶಾಸ್ತ್ರಿ ಮತ್ತು ಪಾದ್ರಿ ಆಲ್‌ಫನ್‌ಸೋ ಕೊರಿಯಾ. ಪ್ರಕೃತ ಲೇಖನದಲ್ಲಿ ಕೆಲವು ಪೋರ್ತುಗೀಜ ದಾಖಲೆಗಳ ಪರಿಚಯ ನೀಡಿ ಅವುಗಳಲ್ಲಿ ತಿಳಿಸಿದ ವಿಷಯಗಳನ್ನು ಕಡತ ಮತ್ತು ಶಾಸನಗಳು ಹೇಗೆ ದೃಢಪಡಿಸುತ್ತವೆಯೆಂದು ತಿಳಿಸಲಾಗುವುದು. ಇಲ್ಲಿ ಹೇಳಿದ ದಾಖಲೆಗಳು ಪಾದ್ರಿ ಹೆರಾಸ್ ಮತ್ತು ಡಾ॥ ಬಿ. ಎಸ್. ಶಾಸ್ತ್ರಿಗಳ ಗ್ರಂಥ ಮತ್ತು ಲೇಖನಗಳಿಂದ ಸ್ವೀಕರಿಸಿದವು.[14] ಪೋರ್ತುಗೀಜ ಆಕರಗಳು ಹೆಚ್ಚಾಗಿ ಪತ್ರವ್ಯವಹಾರ, ಕೋಟೆಗಳ ಆಯವ್ಯಯ ಒಪ್ಪಂದಗಳ ಕರಾರು ಮತ್ತು ಐತಿಹಾಸಿಕ ಬರಹಗಳು ಆಗಿವೆ. ಪೋರ್ತುಗೀಜ ದಾಖಲೆಗಳು ಹೆಚ್ಚಾಗಿ ಗೋವಾ ಪತ್ರಾಗಾರದಲ್ಲೂ ಮತ್ತು ಲಿಸ್ಬನ್ ಪತ್ರಾಗಾರದಲ್ಲೂ ಇವೆ. ಕನ್ನಡ ಕರಾವಳಿಯಲ್ಲಿ ಪೋರ್ತುಗೀಜರು ನಡೆಸಿದ ಚಟುವಟಿಕೆಗಳನ್ನು ಪೋರ್ತುಗೀಜ ಇತಿಹಾಸಕಾರರಾದ ಗೆಸಪರ್ ಕೊರಿಯ, ಅಂತೋನಿ ಪಿಂಟೋ, ಕುಟೊ ಮತ್ತು ಸೋಜಾ ಪೆರಿಯಾರವರು ತಮ್ಮ ಗ್ರಂಥಗಳಲ್ಲಿ ವಿವರಿಸಿದ್ದಾರೆ.

ಪೋರ್ತುಗೀಜ ದಾಖಲೆಗಳು ಹೆಚ್ಚಾಗಿ ಅಪ್ರಕಟಿತವಾಗಿವೆ. ಅವುಗಳಲ್ಲಿ "ಮೊನಕೊಯಸ್ ಡು ರಿಯನೊ" (Moncols do Reino) ಪ್ರಮುಖ ದಾಖಲೆ. ಈ ದಾಖಲೆ ಪೋರ್ತುಗೀಜ ಅರಸರು ಮತ್ತು ಗೋವೆಯ ರಾಜ ಪ್ರತಿನಿಧಿಗಳು ನಡೆಸಿದ ಪತ್ರವ್ಯವಹಾರ, ಗೋವೆಯ ರಾಜ ಪ್ರತಿನಿಧಿ ತನ್ನ ಕೆಳಗಿನ ಅಧಿಕಾರಿಗಳಿಗೆ ನೀಡಿದ ಸಂದೇಶಗಳನ್ನು ಒಳಗೊಂಡಿವೆ. ಈ ದಾಖಲೆಗಳ ಕೆಲವು ಅಂಶಗಳನ್ನು ಪಾದ್ರಿ ಹೆರಾಸ್, ಪಾದ್ರಿ ಅಂತೋನಿ ಡಿ. ಕೊಷ್ಟಾ, ಡಾ. ಮೊರೇಸ್, ಡಾ॥ ಬಿ.ಎಸ್. ಶಾಸ್ತ್ರಿ ತಮ್ಮ ಬರಹಗಳಲ್ಲಿ[15] ಉಪಯೋಗಿಸಿಕೊಂಡಿದ್ದಾರೆ. ಈ ದಾಖಲೆಗಳು ಆಗಿನ ಕಾಲದ ಕನ್ನಡ ಕರಾವಳಿಯ ರಾಜಕೀಯ ಸ್ಥಿತಿ ಮುಖ್ಯವಾಗಿ ಇಲ್ಲಿ ಆಳಿಕೊಂಡಿದ್ದ ಗೇರಸೊಪ್ಪೆ, ಬಂಗ, ಚೌಟ ಅರಸುಮನೆತನಗಳ ಪಾತ್ರ, ಈ ಅರಸುಮನೆತನಗಳಿಗೂ ಮತ್ತು ಪೋರ್ತುಗೀಜರಿಗೂ ಇದ್ದ ವ್ಯವಹಾರ, ಇಲ್ಲಿನ ವ್ಯಾಪಾರದ ಅಭಿವೃದ್ಧಿಗಳನ್ನು ತಿಳಿಸುತ್ತವೆ. ಇನ್ನು ಈ ದಾಖಲೆಯ ಬರಹಗಳು ಇಲ್ಲಿಯ ಅರಸುಮನೆತನದವರನ್ನು ಕೆಳದಿ ವೆಂಕಟಪ್ಪನಾಯಕನು ಬಗ್ಗು ಬಡೆದು, ಪೋತುಗೀಜರನ್ನು ಹೇಗೆ ತನ್ನ ಅಂಕಿತದಲ್ಲಿಟ್ಟುಕೊಂಡನೆಂದು ತಿಳಿಸುತ್ತವೆ. ಕನ್ನಡ ಕರಾವಳಿಯಲ್ಲಿ ಡಚ್ಚರ ವ್ಯಾಪಾರ, ಪೋರ್ತುಗೀಜ

ರಿಗೂ ಮತ್ತು ಅವರಿಗೂ ನಡೆದ ವ್ಯಾಪಾರದ ಪೈಪೋಟಿ ಮತ್ತು ಅವರನ್ನು ಕೆಳದಿ ಶಿವಪ್ಪನಾಯಕನು ಉಪಯೋಗಿಸಿಕೊಂಡು ಪೋರ್ತುಗೀಜರನ್ನು ಹೇಗೆ ಬಗ್ಗುಬಡೆದನೆಂಬುದನ್ನು ಈ ದಾಖಲೆಯ ಕೆಲವು ಬರಹಗಳು ತಿಳಿಸುತ್ತವೆ.

ಲಿವರೋ ಡಿ ಕರೆ ಸ್ಪಾನ್‌ಡೆನ್ಸಿಯಾ ಡಾ ಕೆನರಾ (Livro de correspondeneia da Canara) ಎಂಬ ಇನ್ನೊಂದು ಅಪ್ರಕಟಿತ ದಾಖಲೆ ಹದಿನೆಂಟನೇ ಶತಮಾನದ ಕನ್ನಡ ಕರಾವಳಿಯ ಚರಿತ್ರೆಯನ್ನು ತಿಳಿಯಲು ಬಹಳ ಉಪಯುಕ್ತವಾಗಿದೆ. ಇಲ್ಲಿ ಆಳಿದ ಕೆಳದಿ ನಾಯಕರು ಮತ್ತು ಅವರನಂತರ ಬಂದ ಹೈದರಅಲಿ ಮತ್ತು ಪೋರ್ತುಗೀಜ ರಾಜ ಪ್ರತಿನಿಧಿಗಳೊಳಗೆ ನಡೆದ ಪತ್ರವ್ಯವಹಾರವೇ ಈ ದಾಖಲೆಯಾಗಿದೆ. ಈ ದಾಖಲೆ ಗೋವೆಯ ಪತ್ರಾಗಾರದಲ್ಲಿದೆ. ಈ ದಾಖಲೆಗಳ ಅಧ್ಯಯನದಿಂದ ಕೆಳದಿ ನಾಯಕರು ಮತ್ತು ಪೋರ್ತುಗೀಜರ ರಾಜಕೀಯ ಸಂಬಂಧ. ಹೈದರಅಲಿ ಮತ್ತು ಪೋರ್ತುಗೀಜರ ವ್ಯವಹಾರ. ಕನ್ನಡ ಕರಾವಳಿಯಲ್ಲಿ ಮರಾಠರ ದಾಳಿ. ಪೋರ್ತುಗೀಜ ಕೋಟೆಗಳ ಸ್ಥಿತಿ. ಕ್ರೈಸ್ತರ ಇಗರ್ಜಿ ಮತ್ತು ಕನ್ನಡ ಕರಾವಳಿಯ ವ್ಯಾಪಾರದ ಸ್ಥಿತಿಗಳ ವಿಚಾರ ತಿಳಿಯಬಹುದು. ಈ ದಾಖಲೆ ೧೭೪೭ ರಿಂದ ೧೭೬೯ರ ವರೆಗಿನ ಕನ್ನಡ ಕರಾವಳಿಯ ಘಟನೆಗಳನ್ನು ಒಳಗೊಂಡಿದೆ. ಈ ದಾಖಲೆಯಲ್ಲಿ ಪೋರ್ತುಗೀಜ ರಾಜ ಪ್ರತಿನಿಧಿ ಮಂಗಳೂರಿನ ಕಾರಖಾನೆಯ ಅಧಿಕಾರಿಗಳಿಗೆ ಬರೆದ ಪತ್ರಗಳೂ ಇವೆ.[16]

ಪ್ರಕಟಿತ ದಾಖಲೆಗಳಲ್ಲಿ ಡೊಕ್ಯುಮೆಂಟೊ ರೆಮಿಟಿಡಸ್ ಡ ಇಂಡಿಯ (Documentos Reometidos da India). ಕನ್ನಡ ನಾಡಿನ ಹದಿನೇಳನೇ ಶತಮಾನದ ಚರಿತ್ರೆಯನ್ನು ತಿಳಿಯಲು ಸಹಾಯಕವಾಗಿದೆ. ಈ ದಾಖಲೆಯು ಹೆಚ್ಚಾಗಿ ಪೋರ್ಚುಗಲ್ ಸ್ಪೈನ್ ದೊರೆಗಳು ಗೋವೆಯ ತಮ್ಮ ಪ್ರತಿನಿಧಿಗಳಿಗೆ ಬರೆದ ಪತ್ರ ಮತ್ತು ರಾಜರ ಸನದುಗಳಾಗಿವೆ. ಈ ದಾಖಲೆಗಳು ಕೆಳದಿ ವೆಂಕಟಪ್ಪ ನಾಯಕನು ಗೇರಸೊಪ್ಪೆ ಚೆನ್ನ ಭೈರಾದೇವಿಯ ರಾಜ್ಯವನ್ನು ಗೆದ್ದುಕೊಂಡದ್ದು ಅದಕ್ಕೆ ಆದಿಲ್ ಶಾಹಿ ಮತ್ತು ಪೋರ್ತುಗೀಜರು ತೋರಿಸಿದ ಪ್ರತಿಕ್ರಿಯೆ. ದಕ್ಷಿಣ ಕನ್ನಡದಲ್ಲಿ ಕೆಳದಿಯ ರಾಜ್ಯ ವಿಸ್ತಾರ ಅದಕ್ಕೆ ಇಲ್ಲಿನ ಅರಸು ಮನೆತನಗಳ ಪ್ರತಿಕ್ರಿಯೆಗಳನ್ನು ತಿಳಿಸುತ್ತವೆ. ಪೋರ್ತುಗೀಜರ ಕುಟಿಲ ನೀತಿ ಈ ದಾಖಲೆಗಳ ಅಧ್ಯಯನದಿಂದ ತಿಳಿಯುತ್ತದೆ.[17] ಆರ್ಕಿವೊ ಪೋರ್ತುಗೀಜ್ ಒರಿಯಂಟಲ್. ಎಂಬುದು ಕುನ್ಹಾ ರಿವಾರೊ (Archivo Portugeus Oriental Ed. Cunha Rivaro) ಸಂಪಾದಿಸಿದ ದಾಖಲೆ ಇದು ಪೋರ್ತುಗೀಜ ಮತ್ತು ಉಳ್ಳಾಲದ ರಾಣಿಯ ರಾಜಕೀಯ ಸಂಬಂಧ, ಕೆಳದಿ ವೆಂಕಟಪ್ಪ ನಾಯಕನ ಪ್ರಾಬಲ್ಯ ಅದರಿಂದ ಪೋರ್ತುಗೀಜರಿಗಾದ ಕಳವಳ ಮತ್ತು ಕನ್ನಡ ಕರಾವಳಿಯ ಬಂದರುಗಳಲ್ಲಿ ಸಮೃದ್ಧ ವ್ಯಾಪಾರಗಳ ವಿಚಾರಗಳನ್ನು ತಿಳಿಸುತ್ತದೆ.[18] ವಿರೊಡಿಯಾಗೊ ಸಂಪಾದಿಸಿದ ದಾಖಲೆ ಒರಕಾಮೆಂಟೊ (Orcamento) ಕ್ರಿ. ಶ. ೧೫೭೪ರಲ್ಲಿ ಪೋರ್ತುಗೀಜರ ಕೋಟೆ. ಅವರ ರಾಜ್ಯದ ಹಣಕಾಸಿನ ವಿವರಗಳನ್ನು ತಿಳಿಸುತ್ತದೆ. ಈ ದಾಖಲೆಯಿಂದ ಗೇರಸೊಪ್ಪೆ ಭೈರಾದೇವಿ. ಬಸ್ರೂರು ಮತ್ತು ಮಂಗಳೂರು ವರ್ತಕರು ಮತ್ತು ಪೋರ್ತುಗೀಜರ ವ್ಯಾಪಾರ ಸಂಬಂಧ ತಿಳಿದು ಬರುತ್ತದೆ.[19] ಡಾ॥ ಪಿಸುರ್ಲೆಂಕರ್ ಸಂಪಾದಿಸಿದ ಅಸೆಂಟೊ ಕೊನಸಲೊ ಡಾ ಇಸ್ಟಾಡೊ (Assentos Conselho do Estado) ಎಂಬ ದಾಖಲೆ ಹದಿನೇಳನೇ ಶತಮಾನದ ಕರ್ನಾಟಕದ ಸಮಗ್ರ ಇತಿಹಾಸ ತಿಳಿಯಲು ಸಹಾಯಕವಾಗಿದೆ.

ಕಡತ-ಪೋರ್ತುಗೀಜ ದಾಖಲೆ

ಕಡತದಲ್ಲಿ ತಿಳಿಸಿದ ಕೆಲವು ಐತಿಹಾಸಿಕ ಘಟನೆಗಳ ವಿಚಾರದ ಹೆಚ್ಚಿನ ವಿವರಗಳನ್ನು ಪೋರ್ತುಗೀಜ ದಾಖಲೆಗಳು ನೀಡುತ್ತವೆ. ಇವುಗಳಿಗೆ ಆಧಾರವಾಗಿ ಈ ಉದಾಹರಣೆಗಳನ್ನು ಇಲ್ಲಿ ಕೊಡಲಾಗಿದೆ. ಕೆಳದಿಯ ವೆಂಕಟಪ್ಪ ಮತ್ತು ಬಂಗರಸರ ಜಗಳದಲ್ಲಿ ಮಲಬಾರಿನ ಕೆಲವು ಅರಸು ಮನೆತನದವರು ಬಂಗರಸರಿಗೆ ಸಹಾಯ ಮಾಡಿದ್ದರೆಂದು. ಅವರನ್ನು ಕೂಡಿಕೊಂಡು ಕೆಳದಿ ನಾಯಕರಿಗೆ ಉಪದ್ರವ ನೀಡಿದ್ದರೆಂದು ಬಂಗವಾಡಿಯಲ್ಲಿ ಸಿಕ್ಕಿದ ಒಂದು ಕಡತದಲ್ಲಿ ತಿಳಿಸಿದೆ. ಬಂಗಅರಸ ಮತ್ತು ವೀರಭದ್ರನಾಯಕ

ರೊಳಗಾದ ಕರಾರಿನಲ್ಲಿ "ಮಲೆಯಾಳದವರಿಂದ ಏನಾದರೂ ಕುರುಹುಗಳು ಬಂದರೂ ನಮ್ಮ ಅರಮನೆ ಮುದ್ರೆ ಒಳಗಾಗಿ ಇದ್ದು...ಅವರಿಗೆ ತಕ್ಕ ಬುದ್ಧಿ ಹೇಳಿ"[20] ಎಂದಿದೆ. ಇಲ್ಲಿ ತಿಳಿಸಿದ ವಿಚಾರವನ್ನು ಪೋರ್ತುಗೀಜ ದಾಖಲೆಗಳು ಪುಷ್ಟೀಕರಿಸುತ್ತವೆ. ಈ ದಾಖಲೆಗಳಂತೆ ಕೆಳದಿ ವೆಂಕಟಪ್ಪನಾಯಕನಿಂದ ಸೋತ ಬಂಗರಾಜನು ಕಣ್ಣಾನೂರಿನ ರಾಜನ ಮತ್ತು ಇತರರ ಸಹಾಯ ಪಡೆಯಲು ಕಾಸರಗೋಡಿಗೆ ಹೋದನೆಂದು ತಿಳಿಸಿವೆ. ಇಷ್ಟಲ್ಲದೆ ಕಣ್ಣಾನೂರಿನ ರಾಜನ ಸಹಾಯ ತೆಗೆದುಕೊಂಡು ಬಂಗರಾಜನು ತನ್ನ ರಾಜ್ಯವನ್ನು ಗೆಲ್ಲಲು ಹವಣಿಸಿ ಪೋರ್ತುಗೀಜರ ಸಹಾಯ ಕೇಳಿದ್ದನೆಂದು ದಾಖಲೆಗಳು ತಿಳಿಸುತ್ತವೆ.[21]

ಹದಿನೇಳನೆ ಶತಮಾನದ ಅಂತ್ಯದಲ್ಲಿ ಕೆಳದಿನಾಯಕರು ಉತ್ತರ ಮಲಬಾರಿನಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸಿದರು. ಈ ಸಮಯದಲ್ಲಿಯೇ ಕೆಳದಿ ಅರಸರು ಹಲವಾರು ನಷ್ಟ ಕಷ್ಟ ಕೆಲವು ಸಲ ಸೋಲನ್ನು ಅನುಭವಿಸಬೇಕಾಯಿತು. ಕೆಳದಿ ಅರಸರ ಸೈನಿಕ ಪಡೆಯ ನಾಯಕ ಪೊರಚುಬ್ಯಾರಿ ಮಲಬಾರಿನವರೊಡನೆ ನಡೆದ ಯುದ್ಧದಲ್ಲಿ ಕಷ್ಟಪಟ್ಟಿದ್ದಾನೆಂದು ಮಂಜೇಶ್ವರದ ಕ್ರಿ. ಶ. ೧೭೦೬ರ ಒಂದು ಕಡತದಲ್ಲಿ[22] ತಿಳಿಸಿದೆ. ಈ ಮಲಬಾರಿನೊಡನೆ ನಡೆದ ಯುದ್ಧದ ಕಾರಣ, ಅದರಿಂದಾಗಿ ಕೆಳದಿ ನಾಯಕರಿಗಾದ ನಷ್ಟ ಅದರಲ್ಲಿ ಪೋರ್ತುಗೀಜರ ಪಾತ್ರ ಇತ್ಯಾದಿಗಳ ವಿವರ ಸಿಗುವುದು. ಪೋರ್ತುಗೀಜ ದಾಖಲೆ ಬ್ರಗಾಂಜ ಪಿರೇರಾ ಸಂಪಾದಿಸಿದ ಆರ್ಕಿವ್ಹೊ ಪೋರ್ತುಗೀಜ್ ಓರಿಯಂಟಲ್ (Archivo Portugues Oriental) ನಲ್ಲಿ ಮತ್ತು ಇಂಗ್ಲಿಷ ದಾಖಲೆಗಳು[23] ಮಂಜೇಶ್ವರ, ಹಲಸನಾಡು, ಚಿತ್ರಾಪುರ ಮಠದಲ್ಲಿ ಸಿಕ್ಕಿದ ಕಡತಗಳಲ್ಲಿ ತಿಳಿಸಿದ ಕನ್ನಡ ಕರಾವಳಿಯ ವ್ಯಾಪಾರ ಸಮೃದ್ಧಿಯನ್ನು ಸಮರ್ಥಿಸುತ್ತವೆ.

ಶಾಸನ-ದಾಖಲೆಗಳು (ಪೋರ್ತುಗೀಜ)

ಶಾಸನಗಳಲ್ಲಿ ತಿಳಿಸಿರುವ ಕೆಲವು ಐತಿಹಾಸಿಕ ಘಟನೆಗಳನ್ನು ಪೋರ್ತುಗೀಜ ದಾಖಲೆಗಳು ಸಮರ್ಥಿಸುವುದಲ್ಲದೆ, ಆ ಘಟನೆಗಳ ಹಿನ್ನೆಲೆಯನ್ನು ತಿಳಿಸುತ್ತವೆ. ಅದೇ ರೀತಿಯಲ್ಲಿ ಪೋರ್ತುಗೀಜ ದಾಖಲೆಗಳಲ್ಲಿ ಅಪೂರ್ಣವಾಗಿರುವವುಗಳ ಪೂರ್ತಿ ವಿವರಗಳನ್ನು ಶಾಸನಗಳು ತಿಳಿಸುತ್ತವೆ. ಉದಾಹರಣೆಯಾಗಿ ಈ ಕೆಳಗಿನ ವಿಷಯ ಇಲ್ಲಿ ತಿಳಿಸಲಾಗಿದೆ. ಹದಿನಾರನೇ ಶತಮಾನದ ಪೂರ್ವಾರ್ಧದಲ್ಲಿ ಪೋರ್ತುಗೀಜರು ಭಟ್ಕಳ, ಹೊನ್ನಾವರ ಮಂಕಿ ಪ್ರದೇಶಗಳ ಮೇಲೆ ದಾಳಿ ಮಾಡಿದ ಘಟನೆಯನ್ನು ಶಾಸನಗಳು ಉಲ್ಲೇಖಿಸುತ್ತವೆ.[24] ಆದರೆ ಇವುಗಳ ಹೆಚ್ಚಿನ ವಿವರ ಮತ್ತು ಅದರ ಪರಿಣಾಮ ತಿಳಿಯುವುದು ಪೋರ್ತುಗೀಜ ದಾಖಲೆ ಮತ್ತು ಗೆಸ್ಪರ ಕೊರಿಯ ಬರೆದ ಲೆಂಪಾಸ್ ಡಾ ಇಂಡಿಯಾ ಎಂಬ ಗ್ರಂಥದಲ್ಲಿ.[25]

ಹದಿನಾರನೇ ಶತಮಾನದ ಮಧ್ಯದಲ್ಲಿ ದ.ಕ. ಜಿಲ್ಲೆಯಲ್ಲಿ ಆಳಿಕೊಂಡಿದ್ದ ಚೌಟಮನೆತನ ಎರಡು ಭಾಗಗಳಾಗಿ. ಒಂದು ಉಳ್ಳಾಳದಲ್ಲೂ ಇನ್ನೊಂದು ಪುತ್ತಿಗೆಯಲ್ಲೂ ಆಳಿದ್ದವೆಂದೂ ಮೂಡಬಿದ್ರೆಯಲ್ಲಿನ ಕ್ರಿ.ಶ. ೧೫೭೧ರ ಶಾಸನ ತಿಳಿಸುತ್ತದೆ.[26] ಆದರೆ ಉಳ್ಳಾಳ-ಚೌಟರ ಹೆಚ್ಚಿನ ವಿವರ, ಮುಖ್ಯವಾಗಿ ಅವರಿಗೂ ಪೋರ್ತುಗೀಜರಿಗೂ ಆದ ಕದನ, ಮತ್ತು ಅವರ ರಾಜ್ಯದಲ್ಲಿ ನಡೆಯುತ್ತಿರುವ ವ್ಯಾಪಾರಗಳ ವಿವರ ಸಿಗುವುದು ಪೋರ್ತುಗೀಜ ದಾಖಲೆಗಳಲ್ಲಿ[27] ಕ್ರಿ. ಶ. ೧೫೪೯ ರಿಂದ ೧೫೬೪ರವರೆಗೆ ಬಂಗರಾಜನು ಮತ್ತು ಚೌಟರಾಜರೊಳಗಾದ ಕದನ. ಅದರಲ್ಲಿ ಪೋರ್ತುಗೀಜರ ಪಾತ್ರವನ್ನು ಪೋರ್ತುಗೀಜ ದಾಖಲೆ ಕುನ್ಹಾರಿವಾರ ಸಂಪಾದಿಸಿದ ಆರ್ಕಿವ್ಹೊ ಓರಿಯಂಟಲ್[28] (Archivo oriental) ತಿಳಿಸುತ್ತದೆ. ಆದರೆ ಈ ಬಂಗ ರಾಜನಾರು? ಮತ್ತು ಅವನ ರಾಜ್ಯದ ವಿಸ್ತಾರ. ಆ ರಾಜ್ಯದ ನಾಣ್ಯ ವ್ಯವಹಾರ ಇತ್ಯಾದಿಗಳನ್ನು ತಿಳಿಸುವುದು ಬಂಟವಾಳದಲ್ಲಿ ಸಿಕ್ಕಿದ ಕ್ರಿ.ಶ. ೧೫೮೭ರ ತಾಮ್ರಶಾಸನ.[29] ಆ ಬಂಗ ಅರಸನು ವೀರನರಸಿಂಹ ಶಂಕರದೇವ ಯಾನೆ ಬಂಗರಾಜ ಒಡೆಯ. ಕೆಳದಿ ವೆಂಕಟಪ್ಪ ನಾಯಕನು ತುಳು ಅರಸರ ರಾಜ್ಯವನ್ನು ಶಕ್ತಿಯಿಂದ ಕಸಿದುಕೊಂಡನೆಂದು ಮೂಡಬಿದ್ರೆ ಮತ್ತು ಶಿವಮೊಗ್ಗದಲ್ಲಿ ಸಿಕ್ಕಿದ ಶಾಸನಗಳು ತಿಳಿಸಿವೆ. ಇದನ್ನು ಪೋರ್ತುಗೀಜ ದಾಖಲೆ ದೃಢೀಕರಿಸುವುದಲ್ಲದೆ ಕೆಳದಿ ರಾಜ್ಯದ ವಿಸ್ತಾರ, ಅದರಿಂದಾಗಿ ಪೋರ್ತುಗೀಜರಿಗಾದ ಕಳವಳ ಮತ್ತು ಆದಿಲಶಾಹಿ ಅರಸರ ಪ್ರತಿಕ್ರಿಯೆ

ಗಳನ್ನು ತಿಳಿಸಿ ಈ ವಿಚಾರದ ಹೆಚ್ಚಿನ ವಿವರಗಳನ್ನು ಕೊಡುತ್ತವೆ.[30] ಕ್ರಿ. ಶ. ೧೬೪೦ರಲ್ಲಿ ಆದಿಲ್‌ಶಾಹನ ಬಾಧೆಯಿಂದ ಪಾರಾಗಲು ಕೆಳದಿ ವೀರಭದ್ರನು ಮೊಘಲ ಬಾದಶಾಹನನ್ನು ಆಶ್ರಯಿಸಿ ಅವನಿಗೆ ಕಪ್ಪಕೊಡಲು ಒಪ್ಪಿಕೊಂಡನೆಂದು ಪೋರ್ಚುಗಲ್ ದೊರೆಯ ಪತ್ರದಿಂದ ತಿಳಿಯುತ್ತದೆ.[31] ಕಾಶಿಯ ಕಪಿಲತೀರ್ಥದಲ್ಲಿ ಸಿಕ್ಕಿದ ತಾಮ್ರ ಶಾಸನಗಳು ಕೆಳದಿ ನಾಯಕ ಶಿವಪ್ಪ ಮತ್ತು ಇಮ್ಮಡಿ ವೆಂಕಟಪ್ಪರನ್ನು ಮೊಘಲ ಚಕ್ರವರ್ತಿಯ ಸಾಮಂತನೆಂದು ಸಂಬೋಧಿಸಿದ್ದು ಈ ಪೋರ್ತುಗೀಜ ದಾಖಲೆಯಲ್ಲಿ ತಿಳಿಸಿದ್ದನ್ನು ದೃಢೀಕರಿಸುತ್ತದೆ ಎಂಬುದನ್ನು ನಾವು ಇಲ್ಲಿ ತಿಳಿಯಬೇಕು.[32]

ಕನ್ನಡ ಕರಾವಳಿಯಲ್ಲಿ ಹದಿನಾರನೇ ಶತಮಾನದಿಂದ ಕ್ರೈಸ್ತ ಮಿಶನರಿಗಳ ಚಟುವಟಿಕೆ ಮತ್ತು ಆ ಮತದವರು ಇಲ್ಲಿ ನೆಲೆಸಿದ್ದರೆಂದು ಪೋರ್ತುಗೀಜ ದಾಖಲೆ ಅರ್ಕಿವೊ ಪೋರ್ತುಗೀಜ ಓರಿಯಂಟಲ್ ತಿಳಿಸಿದ ವಿಚಾರಗಳನ್ನು ನಗರ ಮತ್ತು ಬಂಟವಾಳದಲ್ಲಿ ಸಿಕ್ಕಿದ ಶಾಸನಗಳು[33] ಸಮರ್ಥಿಸುತ್ತವೆ ಯೆಂಬುದು ಕುತೂಹಲದ ಸಂಗತಿ. ಶಾಸನಗಳಲ್ಲಿ ತಿಳಿಸಿದ ಕೆಳದಿ ರಾಜ್ಯದ ಸುಂಕದಾಣೆ.[34] ಇಲ್ಲಿನ ಬೆಳೆ ಮತ್ತು ವ್ಯಾಪಾರ ಸಮೃದ್ಧಿಯ ವಿವರಗಳನ್ನು ಪೋರ್ತುಗೀಜ ದಾಖಲೆಗಳು[35] ಹೆಚ್ಚಿನ ವಿವರ ಕೊಟ್ಟು ಶಾಸನಗಳಲ್ಲಿ ತಿಳಿಸಿದ್ದನ್ನು ಸಮರ್ಥಿಸುತ್ತವೆ.

ಉಪಸಂಹಾರ

ಒಟ್ಟಿನಲ್ಲಿ ಹದಿನಾರನೇ ಶತಮಾನದಿಂದ ಹದಿನೆಂಟನೇ ಶತಮಾನಗಳವರೆಗಿನ ಕನ್ನಡ ನಾಡಿನ ಇತಿಹಾಸ ಅಧ್ಯಯನಕ್ಕೆ ಶಾಸನಗಳಂತೆ ಕಡತ ಮತ್ತು ಪೋರ್ತುಗೀಜ ದಾಖಲೆಗಳು ಬಹಳ ಸಹಾಯಕವಾಗುತ್ತವೆ. ಈ ಶಾಸನ. ಕಡತ ಮತ್ತು ಪೋರ್ತುಗೀಜ ದಾಖಲೆಗಳು ಒಂದಕ್ಕೊಂದು ಪೂರಕವಾಗಿವೆ. ಇವುಗಳ ತೌಲನಿಕ ಅಧ್ಯಯನದಿಂದ ಕನ್ನಡನಾಡಿನ ಸಮಗ್ರ ಇತಿಹಾಸದ ವಿವರ ತಿಳಿಯುತ್ತದೆ. ಈ ಮಾರ್ಗದಲ್ಲಿ ಕನ್ನಡ ನಾಡಿನ ಇತಿಹಾಸಕಾರರು ಮುನ್ನಡೆದು ಕರ್ನಾಟಕ ಇತಿಹಾಸವನ್ನು ಶ್ರೀಮಂತಗೊಳಿಸಬೇಕು.

ಅಡಿ ಟಿಪ್ಪಣಿಗಳು

1. A. K. Shastry, ' '*History of Sringeri Matha.*' (unpublished); K. G. Vasanta Madhava : 'Archives in Kanara ' 1565-1763-*Indian Archives* (New Delhi 1976.) No. 2, p. 45-52.

2. *Epigraphia Carnatica* IV (Revised, ed : B. R. Gopal) Hs 24. p. 497.

3. *Karnatak Inscriptions*, (ed : R. S. Panchamukhi) III, No. 11.

4. *Mysore Archaeological Department* 1928. Shiv 28; EC VI, (Rice's edition) No. 5, 11, 1 3; *MAR*, p. 16.

5. ಶ್ರೀ ಮಜ್ಜಗದ್ಗುರು ಶ್ರೀ ಕೂಡ್ಲೀ-ಶೃಂಗೇರಿ ಸಂಸ್ಥಾನದ ಪ್ರಾಚೀನಶಾಸನ ಲೇಖನ ಸಂಗ್ರಹ (1965) p. 63. No. 76.

6. EC., VI Kp. No. 46.

7. *ARIE*, 1268 App A. No. 8. ಈ ಶಾಸನದ ಪಾಠ ಶ್ರೀ ವೆಂಕಟ್ರಾಯಾಚಾರ್ಯ ಸೂರತ್ಕಲ ದ. ಕ. ಮುಖಾಂತರ ಸಿಕ್ಕಿದೆ.

8. SII IX, pt. II No. 430. *MAR.*, 1934, No. 28, 29, 30 ph. 121-28.

9. A. K. Shastry : op. cit.

10. *ARSIE.*, 1929-30. No 564, 558, 559.

11. ಅಯಿಗಳ ಎಂ. ಜೆ. ಮಂಜೇಶ್ವರ App. No. 7, 14, 15 ಈ ಕಡತ ಹದಿನೇಳು ಮತ್ತು ಹದಿನೆಂಟನೆಯ ಶತಮಾನದವುಗಳು.

12. EC., VIII Tl 83, 89, 94; Tl 46, 91, 72; V. Rangacharya: *Topographical Lists of Inscriptions of Madras Presidency* II p. 851.

13. *ARSIE.*, 1938 No. App A I; EC., VIII (Rice's ; edition) Tl No., 185, 48, 78, 174,71.

14. Heras : *Aravidu dynasty* I (Madras 1927) " Expansion of wars of Venkatappa Nayaka of Ikkeri "; *Indian Historical Record Commission* XI (1928) " The Jesuit influence in the Court of Vijayanagar"; *Quartery Journal of Mythic Society* No. 14 (1923-24); Shastry. B. S. : ಕೆಳದಿಯ ಅರಸರು ಹಾಗು ಪೋರ್ತುಗೀಜರು (ಧಾರವಾಡ1972); "Some important Published Primary Sources in Portugues " Sources of Indian History I.

15. ಅರವೀಡು ವಂಶ I "Indo-Lusitana" *Indica* (organ of the Heras Institute of Indian History and culture. Bombay (1973-75) *Mangalore* A Historical Sketches (1927) *Portuguese in Kanara* (ಅಪ್ರಕಟಿತ ಪ್ರಬಂಧ ಬೊಂಬಾಯಿ ವಿಶ್ವವಿದ್ಯಾಲಯ 1969) ಕೆಳದಿ ಅರಸರು ಹಾಗೂ ಪೋರ್ತುಗೀಜರು (ಧಾರವಾಡ) 1972).

16. ಹೆಚ್ಚಿನ ವಿವರಗಳಿಗೆ ನೋಡಿ. ಡಾ. ಬಿ. ಎಸ್. ಶಾಸ್ತ್ರಿ " The Book of Correspondence Concerning Kanara " A Note. *Indica* Vol. 15. No. 2 pp. 121-126. ಇದೇ ಲೇಖಕರ ಇನ್ನೊಂದು ಲೇಖನ " Portuguese Relations with Hyder Ali " *Qurarterly Review of Historical studies* (Calcutta Vol. XIV 1974-75. No 2) 75-81.

17. ಬಿ. ಎಸ್. ಶಾಸ್ತ್ರಿ, ಕೆಳದಿಯ ಅರಸರು ಹಾಗೂ ಪೋರ್ತುಗೀಜರು p. 12-17.

18. ಹೆರಾಸ್—*Aravidu Dynasty* p. 425. 427; ಶಾಸ್ತ್ರಿ ಬಿ. ಎಸ್.-ಅದೇ ಗ್ರಂಥ p. 8-9.

19. Shastry B S. : " Some important published Primary Sources in Portuguese " Dr. S. P. Sen. (Ed) *Sources of History India* Vol. I p. 548; Shastry B.S. : *The Portuguese in Kanara* pp. 297-302.

20. ಐಗಳ ಎಂ. ಜಿ.: ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ P. 435-438.

21. Pissurlencar. *Assentos* I p. 30-31; Ibid III p. 639; ಶಾಸ್ತ್ರಿ ಬಿ. ಎಸ್. : ಕೆಳದಿ ಅರಸರು ಹಾಗೂ ಪೋರ್ತುಗೀಜರು p. 19,23,37, 40.

22. ಅಐಗಳ ಎಂ. ಜಿ. ; ಮಂಜೇಶ್ವರ app. No. 30.

23. ಶಾಸ್ತ್ರಿ ಬಿ. ಎಸ್. : ಕೆಳದಿಯ ಅರಸರು ಹಾಗೂ ಪೋರ್ತುಗೀಜರು p. 141. Foster *English Factories in India* 1661-64. p. 346. ಇವುಗಳ ಹೆಚ್ಚಿನ ವಿವರ– ಕೆ. ಜಿ. ವಸಂತಮಾಧವ " Keladi Nayakas and Malbar chiefs as revealed in Kannada Kadatas dated 1641-1706; *First World Conference in Malayalam* III p. 83-84.

24. K 1 I 68-60 of 1939-40 K. 1 III No. 12-13.

25. Heras-*Aravidu dynasty* I p. 185-188. ಇವುಗಳ ಹೆಚ್ಚಿನ ವಿವರ ಕೆ. ಜಿ. ವಸಂತಮಾಧವ " Kannada Sources of the Portuguese activities in Kanara " *Indica* (Bombay 1980 Vol. 17. No. 2) p 105-108.

26. *ARSIE* 1940-41 No. 3 App. A.

27. Heras ಅದೇ ಗ್ರಂಥ p. 189-190. 240 424-427.

28. ಶಾಸ್ತ್ರಿ ಬಿ. ಎಸ್ : *The Portuguese in Kanara* p. 134.

29. *ARIE* 1968 App A No. 8.

30. Heras, " The Expansion of Wars of Venkatappa Nayaka of Ikkeri " *Indian Historical Record Commission* XI P. 108-112 ; Danvers: *The Portugeuse in India* II p. 199. ಶಾಸ್ತ್ರಿ ಬಿ. ಎಸ್. : ಕೆಳದಿ ಅರಸರು ಹಾಗೂ ಪೋರ್ತುಗೀಜರು p. 9-41.

31. Pissurlencar : *Assentos* II 561-2 ; ಶಾಸ್ತ್ರಿ ಬಿ. ಎಸ್. : ಕೆಳದಿಯ ಅರಸರು ಹಾಗೂ ಪೋರ್ತುಗೀಜರು p. 76.

32. *ARIE* 1963-64, No. 484-486 ಹೆಚ್ಚಿನ ವಿವರ-ಕೆ. ಜಿ. ವಸಂತ ಮಾಧವ. " The Mughals and the Keladi Nayakas " *Indian History Congress* (Calicut 1976) p. 269-251.

33. Ec.; VIII Nr. 46. *ARIE* 1968 App A No. 8.

34. Ec.; VIII Tl. 72, 92, 89.

35. Danvers: ಅದೇ ಗ್ರಂಥ p. 423.

ಎಸ್. ಎಸ್. ರಾಘವಾಚಾರ್

ಮನುಧರ್ಮಶಾಸ್ತ್ರ

ಮನು

ಭಾರತೀಯ ಸಂಸ್ಕೃತಿಯ ಧಾರ್ಮಿಕ ಇತಿಹಾಸದಲ್ಲಿ ಮನುವಿಗೆ ಪ್ರಥಮ ಸ್ಥಾನವಿದೆ. ಇವನನ್ನು ಮನುಷ್ಯ ಕುಲಕ್ಕೆ ಮೂಲ ಪುರುಷ ಎಂದು ಸಂಪ್ರದಾಯವು ಪರಿಗಣಿಸಿದೆ. ಈತನು ಮೂಲವಾದುದರಿಂದಲೇ 'ಮನುಷ್ಯ' ಅಥವಾ 'ಮಾನವ'ನೆಂದು ಇಡೀ ಮಾನವ ಕುಲಕ್ಕೆ ನಾಮ ನಿರ್ದೇಶ ಬಂದಿದೆಯಂತೆ. 'ಮನು' ಶಬ್ದವು ವ್ಯಾಕರಣದ ಪ್ರಕಾರ ಮನನ ಪ್ರವೃತ್ತಿಯನ್ನು ಸೂಚಿಸುತ್ತದೆ. ಮನುಷ್ಯನಿಗೆ ಮನನ ಅಥವಾ ವಿಚಾರಶಕ್ತಿಯು ಅಸಾಧಾರಣ ಲಕ್ಷಣವೆಂದು ಗುರುತಿಸಲಾಗಿದೆ. ಮನುವು ಕೇವಲ ಆದಿಪುರುಷನಲ್ಲ. ವಿಚಾರ ಶಕ್ತಿಯು ಪೂರ್ಣವಾಗಿ ಬೆಳೆದು ಈತನಲ್ಲಿ ಆದರ್ಶಜ್ಞಾನವನ್ನು ಉಂಟುಮಾಡಿ, ಇವನನ್ನು ಶ್ರೇಷ್ಠ ಜ್ಞಾನಿಯನ್ನಾಗಿಯೂ ಆಚಾರ್ಯನನ್ನಾಗಿಯೂ ಮಾಡಿತು ಎಂಬ ನಂಬಿಕೆಯಿದೆ. ಮನುವಿನ ಗೌರವಸ್ಥಾನವನ್ನು ವೇದ, ಉಪನಿಷತ್ತುಗಳು ಹಾಗೆಯೇ ಭಗವದ್ಗೀತೆಯೂ ಅಂಗೀಕರಿಸುತ್ತವೆ.

ಮನುವಿನ ಕೃತಿ

ಹೀಗೆ ಮನುವು ಸಾಂಸ್ಕೃತಿಕ ಖ್ಯಾತಿಯನ್ನು ಪಡೆದಿದ್ದು ಅವನ ಮೂಲಭೂತವಾದ 'ಧರ್ಮಶಾಸ್ತ್ರ' ಅಥವಾ 'ಸ್ಮೃತಿ'ಯು ವೈದಿಕ ಆರ್ಷ ಸಂಪ್ರದಾಯದಲ್ಲಿ ಮುಖ್ಯ ಪ್ರಮಾಣಗ್ರಂಥವಾಗಿ ಖ್ಯಾತಿ ಹೊಂದಿದೆ. ಎಲ್ಲ ಆಚಾರ್ಯರೂ ಇದಕ್ಕೆ ಪೂಜ್ಯತೆಯನ್ನು ಸಲ್ಲಿಸುತ್ತಾರೆ. ಮುಂದೆ ಬಂದ ಅನೇಕ ಧರ್ಮಶಾಸ್ತ್ರಗಳು ಈ ಗ್ರಂಥಕ್ಕೆ ಪ್ರಥಮ ಸ್ಥಾನವನ್ನು ಕೊಟ್ಟು ಬಹು ಗೌರವದಿಂದ ಪರಿಗ್ರಹಪೂರ್ವಕವಾಗಿ ಇದನ್ನು ಉಲ್ಲೇಖಿಸುತ್ತವೆ. ವೇದ ಸಾಹಿತ್ಯದಲ್ಲಿಯೇ ಇದರ ಪ್ರಾಮಾಣ್ಯವನ್ನು 'ಯತ್ ಮನುರವದತ್ ತತ್ ಭೇಷಜಂ' ಎಂದು ಕೀರ್ತಿಸಲಾಗಿದೆ.

ಮನುಸ್ಮೃತಿಯು ಒಂದು ಬೃಹತ್ ಗ್ರಂಥ. ಇದರಲ್ಲಿ ೨೬೯೪ ಶ್ಲೋಕಗಳನ್ನುಳ್ಳ ಹನ್ನೆರಡು ಅಧ್ಯಾಯಗಳಿವೆ. ಇದು ಶುಷ್ಕ ಶಾಸ್ತ್ರಗ್ರಂಥವಲ್ಲ. ಇಲ್ಲಿ ಆಳವಾದ ಹೃದಯಸ್ಪರ್ಶಿ ಜೀವನ ವಿಮರ್ಶೆ, ಮನೋಹರಶೈಲಿ, ನಿಷ್ಕೃಷ್ಟ ತತ್ತ್ವ ಪ್ರತಿಪಾದನೆ ಇವುಗಳನ್ನು ಕಾಣುತ್ತೇವೆ. ಸುಬದ್ಧವಾದ ಪದ್ಯಗಳ ಮೂಲಕ ಪ್ರವಹಿಸುವ ಕಾವ್ಯಾತ್ಮಕವಾದ ಶಾಸ್ತ್ರ ಈ ಕೃತಿ. ಇದನ್ನು ಭಗವದ್ಗೀತೆಗೆ ಹೋಲಿಸಬಹುದಾದರೂ, ಗೀತೆಯಂತೆ ಮೂಲತತ್ತ್ವ ನಿರೂಪಣೆಯಲ್ಲಿ ಸಮಾಪ್ತವಾಗದೆ, ಧರ್ಮಾನುಷ್ಠಾನಕ್ಕೆ ಬೇಕಾದ ವ್ಯಾವಹಾರಿಕ ವಿವರಗಳನ್ನು ಇದು ಹೇರಳವಾಗಿ ಒದಗಿಸುತ್ತದೆ. ಶ್ರಮವಿಲ್ಲದೆ ಉಲ್ಲಾಸದಿಂದ ಅಧ್ಯಯನ ಮಾಡಬಹುದಾದ, ಮಹಾವಾಕ್ಯಗಳನ್ನು ಕಂಠಪಾಠ ಮಾಡಬೇಕೆಂಬ ಇಚ್ಛೆಯನ್ನು ಹುಟ್ಟಿಸುವ ಗ್ರಂಥ ಮನುಧರ್ಮಶಾಸ್ತ್ರ.

ವಸ್ತು

ಮನುಧರ್ಮಶಾಸ್ತ್ರದ ವಿಷಯ ವ್ಯಾಪ್ತಿ ಅಥವಾ ವಸ್ತುವನ್ನು ನಿರ್ದೇಶಿಸಬೇಕು. ಇದು ಕೇವಲ ಕಾನೂನಿನ ಪಟ್ಟಿಯಲ್ಲ. ಹಾಗೆಯೇ ಸಾಮಾಜಿಕ ಮತ್ತು ರಾಜಕೀಯ ನ್ಯಾಯಕ್ಕೆ ಸೀಮಿತವಾಗಿಲ್ಲ.

ವ್ಯಕ್ತಿಯ ಧಾರ್ಮಿಕ ಜೀವನದ ಧ್ಯೇಯ ಚಿತ್ರೀಕರಣವೂ ಇದರ ಸಮಗ್ರ ತಾತ್ಪರ್ಯವಲ್ಲ. ಇದರಲ್ಲಿ ಮಾನವ ಜೀವನಕ್ಕೆ ಮಾರ್ಗ ತೋರಿಸುವ ಸಮ್ಯಕ್ ದರ್ಶನವಿದೆ. ಇಲ್ಲಿ ವೇದಾಂತದಲ್ಲಿ ನಿರೂಪಿಸಿರುವ ಬ್ರಹ್ಮತತ್ವದ ಸಮೀಕ್ಷೆಯಿದೆ. ಅದರ ಆಧಾರದ ಮೇಲೆ ರೂಪಿಸಿಕೊಳ್ಳಬೇಕಾದ ಮನುಷ್ಯನ ಸಾರ್ಥಕ ಜೀವನದ ನಿರ್ದೇಶವಿದೆ. ಇದರಲ್ಲಿ ಅಂತರ್ಗತವಾದ ಧಾರ್ಮಿಕ ನಡೆನುಡಿಗಳು ಮತ್ತು ಅವುಗಳ ಸಾಧನೆಗೆ ರಕ್ಷಕವಾಗುವ ಬಾಹ್ಯ ಶಾಸನಗಳು ಇವುಗಳೆಲ್ಲಾ ವಿಸ್ತೃತವಾಗಿವೆ. ವ್ಯಕ್ತಿಗೆ ಬೇಕಾದ ನೀತಿ ನಿಯಮಗಳು ಸಮಾಜವು ಅನುಸರಿಸಬೇಕಾದ ವ್ಯವಸ್ಥೆಗಳು ಮತ್ತು ಇವುಗಳು ತಪ್ಪಿದರೆ ಸಮಾಜಕ್ಕೆ ಒದಗಬಹುದಾದ ಅಪಾಯಗಳು ಅವುಗಳನ್ನು ತಿದ್ದಲು ಬೇಕಾದ ಪ್ರಾಯಶ್ಚಿತ್ತ ಮತ್ತು ದಂಡ ಸಂಗತವಾಗಿ ಪ್ರತಿಪಾದಿಸಲ್ಪಟ್ಟಿವೆ. ಮನುವು ಪೂರ್ಣ, ಆದರ್ಶ ಧರ್ಮಶಾಸ್ತ್ರಕಾರ.

ನಿರೂಪಣೆ

ಕ್ರಮಬದ್ಧವಾದ ಧರ್ಮನಿರೂಪಣೆಯನ್ನು ಇಲ್ಲಿ ಕಾಣಬಹುದು. ಧರ್ಮವನ್ನು ಯಾವ ಪ್ರಮಾಣದ ಆಧಾರದಮೇಲೆ ತಿಳಿಯಬೇಕು ಎಂಬುದು ಪ್ರಥಮ ಪ್ರಶ್ನೆ. ಇದಕ್ಕೆ ಮನುವು ಸಮಂಜಸವಾದ ಉತ್ತರ ಒದಗಿಸುತ್ತಾನೆ. ಶ್ರುತಿ, ಅದನ್ನು ಸರಿಯಾಗಿ ತಿಳಿದವರು ಬಿಟ್ಟುಹೋಗಿರುವ ಸ್ಮೃತಿಗಳು ಅವರ ಶೀಲ ಪರಿಶೀಲನೆ. ಹಾಗೆಯೇ ಸತ್ಪುರುಷರ ಆಚರಣೆ ಮತ್ತು ವ್ಯಕ್ತಿಯ "ಆತ್ಮತುಷ್ಟಿ" ಇವುಗಳನ್ನು ಪ್ರಮಾಣತ್ವೇನ ಹೇಳಲಾಗಿದೆ. ಈ ಆತ್ಮತುಷ್ಟಿಗೆ ಆಧುನಿಕ ಪಾಶ್ಚಾತ್ಯ ಪರಿಭಾಷೆಯಲ್ಲಿ "conscience" ಅಥವಾ moral intuition ಎನ್ನುತ್ತಾರೆ. ಇದನ್ನೇ ಮಹಾತ್ಮ ಗಾಂಧಿಯವರು "inner voice" ಎಂದು ಹೇಳುತ್ತಿದ್ದರು. ಮನುಷ್ಯನ ತರ್ಕಬದ್ಧವಾದ ವಿವೇಚನೆಯ ಸ್ಥಾನವನ್ನು ಮನುವು ಆದರಿಸುತ್ತಾನೆ.

ಆರ್ಷಂ ಧರ್ಮೋಪದೇಶಂ ಚ ವೇದ ಶಾಸ್ತ್ರಾऽವಿರೋಧಿನಾ।
ಯಸ್ತರ್ಕೇಣಾನುಸಂಧತ್ತೇ ಸಧರ್ಮಂ ವೇದನೇತರಃ ॥

ಎಂಬುದು ಅವನ ದೃಷ್ಟಿ. ಎಂದರೆ, ವೈದಿಕ ಸಂಪ್ರದಾಯ, ಆತ್ಮಪ್ರತ್ಯಯ ಮತ್ತು ಯುಕ್ತಾಯುಕ್ತತೆ ಇವೆಲ್ಲಾ ಸೇರಿ ಧರ್ಮನಿರ್ಣಯವಾಗಬೇಕು. ಇಲ್ಲಿ ಪ್ರಮಾಣಗಳ ಸಮನ್ವಯವನ್ನು ಕಾಣುತ್ತೇವೆ.

ಹೀಗೆ ಪ್ರಮಾಣ ನಿರ್ದೇಶವಾದ ಮೇಲೆ ಮನುವು ತತ್ವ ಎಂದರೆ, ಜಗತ್ತಿನ ಮೂಲವಾದ ಪರತತ್ವವನ್ನು ವೇದಾಂತಶೈಲಿಯಲ್ಲಿ ಪ್ರತಿಪಾದಿಸುತ್ತಾನೆ. ಈ ತತ್ವ ಪರಬ್ರಹ್ಮ. ಇದರಿಂದ ಜಗತ್ತಿನ ಪ್ರಾದುರ್ಭಾವ. ಇದರಲ್ಲಿಯೇ ಅದು ನೆಲೆಸಿರುವುದು. ಈ ತತ್ವ ಅಂತರ್ಯಾಮಿಯಾಗಿ ಸರ್ವನಿರ್ವಾಹಕವಾಗಿದೆ. ಇದಕ್ಕೆ "ನಾರಾಯಣ" ಎಂಬ ನಾಮವನ್ನು ಆ ನಾಮದ ದಾರ್ಶನಿಕ ನಿರ್ವಚನೆಯ ಮೂಲಕ ಮನುವು ಒಪ್ಪಿಕೊಳ್ಳುತ್ತಾನೆ. ಇವನ ಕೆಲವು ವೇದಾಂತ ವಾಕ್ಯಗಳನ್ನು ಕೆಳಕಂಡಂತೆ ನಿದರ್ಶಿಸಬಹುದು,

ಪ್ರಶಾಸಿತಾರಂ ಸರ್ವೇಷಾಂ ಅಣೀಯಾಂಸ ಮಣೋರಪಿ।
ರುಕ್ಮಾಭಂ ಸ್ವಪ್ನಧೀಗಮ್ಯಂ ವಿದ್ಯಾತ್ತು ಪುರುಷಂ ಪರಂ॥

ಈ ತತ್ವವನ್ನು ಶಾಸ್ತ್ರದಿಂದ ತಿಳಿಯಬೇಕು. ತಿಳಿದಿದ್ದರ ಧಾರಣೆಯಾಗಬೇಕು. ತನ್ಮೂಲಕ ಜ್ಞಾನವನ್ನು ಗಳಿಸಬೇಕು. ಆ ಜ್ಞಾನವನ್ನು ಜೀವನದಲ್ಲಿ ಕಾರ್ಯಕಾರಿಯನ್ನಾಗಿ ಮಾಡಿಕೊಳ್ಳಬೇಕು. ಇದು ಮನು ಕೊಟ್ಟಿರುವ ಜ್ಞಾನ ಸೋಪಾನಗಳು.

ಅಜ್ಞೇಭ್ಯೋ ಗ್ರಂಥಿನಃ ಶ್ರೇಷ್ಠಾ ಗ್ರಂಥಿಭ್ಯೋ ಧಾರಿಣೋವರಾಃ ।
ಧಾರಿಭ್ಯೋ ಜ್ಞಾನಿನಃ ಶ್ರೇಷ್ಠಾ ಜ್ಞಾನಿಭ್ಯೋ ವ್ಯವಸಾಯಿನಃ ॥

ತತ್ವಾಧಿಗಮದಿಂದ ವ್ಯವಸಾಯ ಎಂದರೆ ಅನುಷ್ಠಾನ ಉಂಟಾಗಬೇಕು. ಈ ವ್ಯವಸಾಯ ಜೀವನ ಪುರುಷಾರ್ಥ ಸಿದ್ಧಿಯಲ್ಲಿ ಪರ್ಯವಸಾನವಾಗಬೇಕು. ಮನುವು ಧರ್ಮ, ಅರ್ಥ, ಕಾಮ, ಮೋಕ್ಷವೆಂಬ

ನಾಲ್ಕು ಪುರುಷಾರ್ಥಗಳನ್ನು ನಿರ್ದೇಶಿಸಿ ಅವುಗಳ ಮೀಮಾಂಸೆಯನ್ನು ಮಾಡುತ್ತಾನೆ. ಅವನ ಪ್ರಕಾರ ಅರ್ಥ ಕಾಮಗಳು ಕೇವಲ ಸಾಧನವಾದ ಪುರುಷಾರ್ಥಗಳು. ಅಂದರೆ, ಅವು ಧರ್ಮ ಮೋಕ್ಷಗಳಿಗೆ ಮಾರ್ಗವಾದರೆ ಮಾತ್ರ ಉಪಾದೇಯಗಳು. ಧರ್ಮ ಮೋಕ್ಷಗಳು ಪ್ರಧಾನವಾದ ಪುರುಷಾರ್ಥಗಳು. ಅವುಗಳಲ್ಲಿಯೂ ಧರ್ಮವು ಮೋಕ್ಷಕ್ಕೆ ಸಾಧನ. ಮನುವು ಮೋಕ್ಷವನ್ನು ಸಂಕ್ಷೇಪವಾಗಿ. ಆದರೂ ನಿಷ್ಕೃಷ್ಟವಾಗಿ. ನಿರೂಪಿಸಿ ಧರ್ಮವನ್ನು ತನ್ನ ವಿಶೇಷ ವಸ್ತುವನ್ನಾಗಿ ಮಾಡಿಕೊಂಡು ಅದರ ವಿಸ್ತೃತ ಪ್ರತಿಪಾದನೆಯನ್ನು ಮಾಡುತ್ತಾನೆ.

ಧರ್ಮ

ಧರ್ಮಗಳಲ್ಲಿ ಸಾಧಾರಣ ಧರ್ಮ ಮತ್ತು ವಿಶೇಷ ಧರ್ಮವೆಂದು ವಿಭಾಗ. ಸಾಧಾರಣ ಧರ್ಮಗಳು ಮಾನವ ಸಾಮಾನ್ಯರಿಗೆಲ್ಲ ಅತ್ಯಂತ ಉಪಾದೇಯಗಳು. ಅವುಗಳಿಗೆ ಪ್ರಥಮಸ್ಥಾನ. ಅವುಗಳಿಂದಲೇ ಪರಗತಿಯ ಪ್ರಾಪ್ತಿ. ಹತ್ತು ಸಾಧಾರಣ ಧರ್ಮಗಳನ್ನು ಮನುವು ಮುಂದಿಡುತ್ತಾನೆ. ಇವುಗಳಿಗೆ ದಶಲಕ್ಷಣ ಧರ್ಮವೆಂದು ಹೆಸರಿಡುತ್ತಾನೆ.

ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮ ಲಕ್ಷಣಮ್ ॥
ದಶಲಕ್ಷಣಾನಿ ಧರ್ಮಸ್ಯ ಯೇ ಜನಾಃ ಸಮಧೀಯತೇ ।
ಅಧೀತ್ಯ ಚಾನುವರ್ತಂತೇ ತೇ ಯಾಂತಿ ಪರಮಾಂ ಗತಿಮ್ ॥

ಈ ಸಾಮಾನ್ಯ ಧರ್ಮಗಳನ್ನು ಮೋಕ್ಷ ಸಾಧನವೆಂದು ಹೇಳಿ ಇವುಗಳ ಉಚ್ಚಸ್ಥಾನಗಳನ್ನು ತೋರಿಸಲಾಗಿದೆ. ಗೀತೆಯಲ್ಲಿ ಪದೇ ಪದೇ ಬರುವ ಆತ್ಮಗುಣಗಳಿಗೆ ಈ ಧರ್ಮಗಳು ಅತ್ಯಂತ ಸಂವಾದಿಗಳಾಗಿವೆ. ಮನುವಿನ ಇನ್ನೊಂದು ವಾಕ್ಯವನ್ನು ಇಲ್ಲಿ ಸ್ಮರಿಸಬಹುದು. ಇದು ಶಂಕರರಾದಿಯಾಗಿ ಎಲ್ಲ ಆಚಾರ್ಯರ ಮೆಚ್ಚಿಗೆಯನ್ನು ಪಡೆದಿದೆ.

"ಕುರ್ಯಾದನ್ಯನ್ನವಾಕುರ್ಯಾತ್ ಮೈತ್ರೋ ಬ್ರಾಹ್ಮಣ ಉಚ್ಯತೇ"

ಸರ್ವಭೂತ ಮೈತ್ರಿಯೊಂದೇ ಧಾರ್ಮಿಕತೆಯ ಸಾರವೆಂದು ಇದರ ತಾತ್ಪರ್ಯ.

ಆಶ್ರಮಧರ್ಮ

ವಿಶೇಷ ಧರ್ಮವೆಂದರೆ ವರ್ಣಾಶ್ರಮ ಧರ್ಮಗಳು. ಆಶ್ರಮಗಳು ವ್ಯಕ್ತಿವಿಕಾಸ ಸಾಧನಗಳು. ಆಶ್ರಮವೆಂದರೆ ಉನ್ನತಿಗಾಗಿ ಶ್ರಮವನ್ನು ವಹಿಸಿ ಸಾಧಿಸುವ ಅವಸ್ಥಾ ವಿಶೇಷ. ಬ್ರಹ್ಮಚರ್ಯಾಶ್ರಮದಲ್ಲಿ ನಿಯಮಬದ್ಧನಾಗಿ ವ್ಯಕ್ತಿ ತಪೋರೂಪವಾದ ಜ್ಞಾನಾರ್ಜನೆಯನ್ನು ಮಾಡಬೇಕು. ಇದು ಜೀವನದ ಸಾರ್ಥಕತೆಗೆ ಉಪೋದ್ಘಾತ. ಎರಡನೆಯದು ಗೃಹಸ್ಥಾಶ್ರಮ. ಇದರಲ್ಲಿ ಮನುವಿಗೆ ವಿಶೇಷ ಅಭಿಮಾನ. ಕಾರಣವೇನೆಂದರೆ ಗೃಹಸ್ಥನು ಬೇರೆ ಆಶ್ರಮಿಗಳಿಗೆ ಅವಲಂಬನ. ಅವರ ಸೇವೆ ಮತ್ತು ಪೋಷಣೆಯು ಅವನ ಜವಾಬ್ದಾರಿ. ಗೃಹಸ್ಥಾಶ್ರಮ ಇಂದ್ರಿಯ ಲೋಲುಪತೆಯ ವಿಹಾರ ಜೀವನವಲ್ಲ. ಪಂಚ ಮಹಾ ಯಜ್ಞಗಳಿಂದ ಧನ್ಯತೆ ಪಡೆಯಬೇಕಾದ ಪರ್ವ. ಇಲ್ಲಿ 'ಯಜ್ಞ' ಶಬ್ದವು ಗೀತೆಯಲ್ಲಿ ವ್ಯಾಖ್ಯಾನಿತವಾಗಿರುವಂತೆ ವಿಸ್ತಾರವಾದ ಅರ್ಥವನ್ನು ಹೊಂದಿದೆ. ಇದರಲ್ಲಿ ಭೂತದಯೆ, ಮಾನವಸೇವೆ, ದೇವಪಿತೃ ಉಪಾಸನೆ, ವೇದವಿದ್ಯಾನಿಷ್ಠೆ ಇವೆಲ್ಲಾ ಸೇರಿಕೊಂಡಿವೆ. ಸೇವೆಗೆ ಬೇಕಾದ ಸಂಪತ್ತನ್ನು ನ್ಯಾಯವಾದ ವೃತ್ತಿಯಿಂದ ಗಳಿಸಿ ಸರ್ವವಿಧ ಸೇವೆಯಲ್ಲಿಯೂ ಗೃಹಸ್ಥನು ನಿರತನಾಗಬೇಕು. ಕಷ್ಟದ ಆಶ್ರಮ ಇದು. ಆದ್ದರಿಂದಲೇ ಮನುವಿಗೆ ಇದರ ವಿಷಯದಲ್ಲಿ ವಿಶೇಷ ಅನುಕಂಪೆ ಮತ್ತು ಶ್ಲಾಘನೆ. ವಾನಪ್ರಸ್ಥಾಶ್ರಮ ಕೇವಲ ತಪಸ್ಸಿನ ಆಶ್ರಮ. ಆಧ್ಯಾತ್ಮಿಕ ಪ್ರಗತಿಗೆ ಇದು ವ್ಯಾಯಾಮದೆಶೆ. ನಾಲ್ಕನೆಯ ಸನ್ಯಾಸಾಶ್ರಮದಲ್ಲಿ ಪರಮಾತ್ಮಾನುಸಂಧಾನ ಮತ್ತು ತತ್ಸಹಾಯಕ ದಮ

ದಯಾದಿ ಚರ್ಯೆ ಇವು ಮುಖ್ಯ. ಇದು ಪ್ರಾಪ್ತಿಯ ಅವಸ್ಥೆ. ಈ ಆಶ್ರಮ ಶ್ರೇಣಿ ಹೆಚ್ಚು ಪಾಲು ವ್ಯಕ್ತಿಯ ವಿಕಾಸದ ದೃಷ್ಟಿಯಿಂದ ಕಲ್ಪಿತವಾಗಿದೆ.

ಗೃಹಸ್ಥಾಶ್ರಮದ ಸಂಬಂಧದಲ್ಲಿ ಮನುವು ವಿವಾಹ ಪದ್ಧತಿಗಳನ್ನು ವಿವರಿಸಿ ಅವುಗಳ ಉತ್ತಮ ಸಂಪ್ರದಾಯಗಳನ್ನು ವಿಭಜಿಸುತ್ತಾನೆ. ಸ್ತ್ರೀ ವಿಷಯದಲ್ಲಿ ಮಾಡಬೇಕಾದ ನಿಯಮಗಳೆಲ್ಲಾ ಈ ಸಂದರ್ಭದಲ್ಲಿ ಬರುತ್ತವೆ. ಆ ಕಾಲದ ಸಮಾಜದ ಸ್ಥಿತಿಯ ನಿಮಿತ್ತದಿಂದ ಸ್ತ್ರೀಯರ ಹಕ್ಕು ಬಾಧ್ಯತೆ ಗಳ ವಿಷಯದಲ್ಲಿ ಅವನ ನಿಲುವು ಕಟುವಾಗಿ ಕಾಣುತ್ತದೆ. ಆದರೆ ಅವನೇ ಸ್ತ್ರೀಯರ ಪೂಜೆಯನ್ನು ವಿಧಿಸುತ್ತಾನೆ. ಅವರಲ್ಲೇ ಸಹಸ್ರಾರು ಮಂದಿ ಬ್ರಹ್ಮವಾದಿನಿಗಳಾಗಿ ಪರಮಪದವನ್ನು ಗಳಿಸಿದರೆಂದು ಹೇಳುತ್ತಾನೆ. ಎಲ್ಲಿ ಸ್ತ್ರೀಯರು ಗೌರವವನ್ನು, ಪೂಜೆಯನ್ನು ಹೊಂದುತ್ತಾರೋ ಅಲ್ಲಿ ದೇವತೆಗಳು ಆನಂದಿಸುತ್ತಾರೆಂದು ಹೇಳುತ್ತಾನೆ. "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ ॥" ಇದು ಮನುವಿನ ಸ್ವಂತ ಮತ. ಸಾಮಾಜಿಕವಾಗಿ ತಾತ್ಕಾಲಿಕ ಪರಿಸ್ಥಿತಿಯ ನಿರ್ಬಂಧದಿಂದ ಔದಾರ್ಯ ವಿಲ್ಲದ ನಿಯಮಗಳನ್ನು ಅದನು ಮಾಡಿರುವಂತೆ ಕಾಣುತ್ತದೆ. ಪ್ರಸಿದ್ಧವಾದ ಒಂದು ವಾಕ್ಯವಿದೆ. "ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಪೂರ್ತಿ ಶ್ಲೋಕ ಹೀಗಿದೆ.

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ।
ರಕ್ಷಂತಿ ಸ್ಥವಿರೇ ಪುತ್ರಾಃ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ॥

ಅವರು ರಕ್ಷಣಾರಹಿತರಾಗಿ, ಅನಾಥರಾಗಿ ನಿರ್ಗತಿಕರಾಗಿರಬಾರದೆಂಬುದು ಇಲ್ಲಿನ ಭಾವ. ಅವರು ಇತರರ ಅಧೀನರಾಗಿರಬೇಕೆಂಬುದಕ್ಕಿಂತ ಅವರು ಅರಕ್ಷಿತರಾಗಿರಬಾರದೆಂದು ಈ ಶ್ಲೋಕದಿಂದ ಭಾಸ ವಾಗುತ್ತದೆ.

ವರ್ಣಧರ್ಮ

ಮನುವು ಸಮಾಜ ವ್ಯವಸ್ಥೆಗೆ ವಿಸ್ತಾರವಾದ ಗಮನವನ್ನು ಕೊಡುತ್ತಾನೆ. ಸಮಾಜವು ಅವಿಭಾಜ್ಯ ವಾದ ಒಂದು ಅಖಂಡ ಸನ್ನಿವೇಶ. ಇವರಲ್ಲಿ ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ಥಾನಕ್ಕೆ, ಯೋಗ್ಯತೆಗೆ ಹೊಂದಿಕೊಂಡು ಅದರ ಸುಸ್ಥಿತಿಗೆ ಮತ್ತು ತನ್ನ ಆತ್ಮ ವಿಕಾಸಕ್ಕೆ ದುಡಿಯಬೇಕು. ಈ ನಡತೆಗೆ ಸ್ವಧರ್ಮವೆಂದು ಪರಿಭಾಷೆ. ಸಮಾಜದ ಸದಸ್ಯರನ್ನು ಪರಂಪರಾಗತವಾದ ರೀತಿಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರನೆಂದು ಅವರ ಜನ್ಮ, ಗುಣ ಮತ್ತು ಕರ್ಮಗಳ ಆಧಾರದ ಮೇಲೆ ವಿಂಗಡಿಸಿ ಅವರವರ ಧರ್ಮ ಮತ್ತು ವೃತ್ತಿಗಳನ್ನು ವಿಭಾಗ ಮಾಡಲಾಗಿದೆ. ಬ್ರಾಹ್ಮಣನು ಜ್ಞಾನೋ ಪಾಸಕನಾಗಿ ತನ್ನ ವಿದ್ಯೆಯಿಂದ ಸಮಾಜಸೇವೆ ಮಾಡಬೇಕು. ಕ್ಷತ್ರಿಯನು ಶೌರ್ಯ ಧೈರ್ಯ ಪರಾಕ್ರಮ ಗಳನ್ನು ಗಳಿಸಿಕೊಂಡು ಸಮಾಜ ರಕ್ಷಣೆ ಮತ್ತು ಪಾಲನೆಗಳನ್ನು ಮಾಡಬೇಕು. ವೈಶ್ಯನು ಸಮಾಜಕ್ಕೆಲ್ಲಾ ಬೇಕಾದ ಆರ್ಥಿಕ ಸಂಪತ್ತನ್ನು ಗಳಿಸಿ ಸಮಾಜದ ಪೋಷಣೆಗೆ ನೆರವಾಗಬೇಕು. ಶೂದ್ರನು ಈ ಮೂರು ವರ್ಣಗಳವರಿಗೆ ನೆರವಾಗಿ ಅವರ ಕರ್ತವ್ಯಪಾಲನೆಗೆ ಅವಶ್ಯವಾದ ಸೇವೆಗಳನ್ನು ಮಾಡಬೇಕು. ಇಲ್ಲಿ ಸ್ವಾರ್ಥದೃಷ್ಟಿ ಇಲ್ಲದ ಸ್ವಕರ್ಮ ನಿಷ್ಠೆ ಉದ್ದೇಶ. ಇಲ್ಲಿ ವಂಚನೆಯಾಗಲಿ ಪರಸ್ಪರ ಶೋಷಣೆಯಾಗಲಿ ಸಂಭವಿಸಬಾರದು.

ಕ್ಷತ್ರಿಯನದು ವಿಶೇಷ ಹೊಣೆಗಾರಿಕೆ. ಅವನು ನ್ಯಾಯವನ್ನು ಪಾಲಿಸಬೇಕು ಮತ್ತು ಜನತೆಯನ್ನು ಬಲಪ್ರಯೋಗದಿಂದಲಾದರೂ ಸಂರಕ್ಷಿಸಬೇಕು. ಈ ಕ್ಷತ್ರಧರ್ಮ ನಿರೂಪಣೆಯಲ್ಲಿ ಮನು ರಾಜ ಧರ್ಮವನ್ನು ಪ್ರತಿಪಾದಿಸುತ್ತಾನೆ. ರಾಜಕೀಯ ಮತ್ತು ಸಾಮಾಜಿಕ ಕಾನೂನುಗಳನ್ನು ಇಲ್ಲಿ ಕೂಲಂಕಷ ವಾಗಿ ವಿವರಿಸುತ್ತಾನೆ.

ಈ ವರ್ಣ ವ್ಯವಸ್ಥೆಗೆ ಸಂಬಂಧಪಟ್ಟಂತೆ ಎರಡು ಪ್ರಶ್ನೆಗಳು ಸ್ವಾಭಾವಿಕವಾಗಿ ಏಳುತ್ತವೆ.

(ಅ) ವರ್ಣಗಳ ನಿರೂಪಣೆಯಲ್ಲಿ ಅವುಗಳ ಶ್ರೇಷ್ಠತೆಯ ವಿಷಯದಲ್ಲಿ ಮತ್ತು ಹಕ್ಕು ಬಾಧ್ಯತೆಯಲ್ಲಿ ತಾರತಮ್ಯಕ್ಕೆ ಪುರಸ್ಕಾರ ಕೊಟ್ಟಿದೆ. ಇದು ನ್ಯಾಯವೇ? ತಾತ್ಕಾಲಿಕ ಸಮಾಜ ಪರಿಸ್ಥಿತಿಗೆ ಒಳಪಟ್ಟು ಈ ನಿಯಮಗಳು ಬಂದಂತಿವೆ. ಈ ತಾರತಮ್ಯ ನಿತ್ಯ ಸತ್ಯವಲ್ಲ. ಧರ್ಮಶಾಸ್ತ್ರಗಳಲ್ಲಿ ಯುಗಾನುಸಾರವಾಗಿ ಕಾಲಾನುಸಾರವಾಗಿ ಸಮಾಜದ ಐತಿಹಾಸಿಕ ಪರಿಸ್ಥಿತಿಯ ನಿರ್ಬಂಧದಿಂದ ಕೆಲವು ನಿಯಮಗಳು ಬಂದಿವೆ. ಆದರೆ ಸರ್ವಕಾಲಕ್ಕೂ ಸರ್ವಪ್ರಜೆಗಳಿಗೂ ಅನ್ವಯಿಸುವ ದಶಲಕ್ಷಣ ಧರ್ಮಗಳೂ ನಿರೂಪಿತವಾಗಿವೆ. ಈ ಮೊದಲ ಅಂತಸ್ತಿನ ಧರ್ಮಕ್ಕೆ ಅನುಗುಣವಾಗಿ ಎರಡನೆ ಅಂತಸ್ತಿನ ತಾತ್ಕಾಲಿಕ ನಿಯಮಗಳನ್ನು ತಿದ್ದುವುದು ಮನುವಿನ ಧ್ಯೇಯಕ್ಕೆ ಸಂಗತವಾಗುತ್ತದೆ. ಅವನೇ ಈ ಪ್ರಥಮತತ್ತ್ವವನ್ನು ಪ್ರಶಂಸಿಸಿ ಉದ್ಘೋಷಿಸುತ್ತಾನೆ:

ಸರ್ವಭೂತೇಷು ಚಾತ್ಮಾನಂ ಸರ್ವ ಭೂತಾನಿ ಚಾತ್ಮನಿ।
ಸಮಂ ಪಶ್ಯನ್ನಾತ್ಮಯಾಜಿ ಸ್ವಾರಾಜ್ಯಮಧಿಗಚ್ಛತಿ॥


ಇದು ಸರ್ವತೋಭವ್ಯ ಭಾವನೆ. ಮನುಷ್ಯನು ಆತ್ಮಯಾಜಿ ಎಂದರೆ ಸ್ವಾರ್ಥತ್ಯಾಗಿಯಾಗಬೇಕು. ತನ್ನ ಆತ್ಮನನ್ನು ಇತರ ಭೂತಗಳಲ್ಲಿ ಆ ಭೂತಗಳ ಆತ್ಮನನ್ನು ತನ್ನಲ್ಲಿ ನೋಡಬೇಕು. ಇದು ಸಮತ್ವ. ಈ ತ್ಯಾಗ ಮತ್ತು ಸಮತ್ವದಿಂದ ಸ್ವಾರಾಜ್ಯನಿರ್ಮಾಣವೆನ್ನುತ್ತಾನೆ. ಈ ಉತ್ತಮತತ್ತ್ವವನ್ನು ಪರೀಕ್ಷಾಯಂತ್ರವಾಗಿಟ್ಟುಕೊಂಡು ಸಮಾಜ ವಿಮರ್ಶೆಯನ್ನು ಮಾಡಿ ವಿಶೇಷಧರ್ಮಗಳ ಲೋಪದೋಷಗಳನ್ನು ತೊಡೆದುಹಾಕುವುದು ಮನುವಿನ ಪರಮಧ್ಯೇಯಕ್ಕೆ ಒಪ್ಪುತ್ತದೆ.

(ಆ) ಮನುವಿನ ರಾಜಧರ್ಮದಲ್ಲಿ ಆಡಳಿತ ನಿರಂಕುಶಪ್ರಭುತ್ವ ಎಂದು ಆಕ್ಷೇಪಿಸಬಹುದು. ಆದರೆ ರಾಜನು ನ್ಯಾಯ ನಿರ್ಮಾಪಕನಲ್ಲ. ಧರ್ಮಶಾಸ್ತ್ರಗಳಲ್ಲಿರುವ ನಿಯಮಗಳನ್ನು ಪಾಲಿಸುವುದು ಅವನ ಕರ್ತವ್ಯ. ಧರ್ಮಶಾಸ್ತ್ರಗಳ ವಿವರವಾದ ನಿಬಂಧನೆಗಳಿಗೆ ಅವನೂ ಅಧೀನ. ಅಧಿಕಾರಶಕ್ತಿಯನ್ನು ಅವುಗಳ ಪಾಲನೆಗೆ ಉಪಯೋಗಿಸಬೇಕು. ಅವುಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಅವನು ಸ್ವತಂತ್ರನಲ್ಲ. ಅದಕ್ಕೆ ಧಾರ್ಮಿಕರೂ ಶಾಸ್ತ್ರವಿಶಾರದರೂ ಇರುವ ಒಂದು ಸಮಿತಿಯನ್ನು ರಚಿಸಿಕೊಂಡು ಆ ಸಮಿತಿಯ ನಿರ್ಣಯವನ್ನು ಅವನು ಕಾರ್ಯಕಾರಿಯಾಗಿ ಮಾಡಬೇಕು. ಎಂದರೆ, ಅವನಿಗೆ ಕೇವಲ ಜಾರಿಗೆ ತರುವ–executive–ಹಕ್ಕು ಮಾತ್ರ ಇದೆ. ನಿರಂಕುಶ ಪ್ರಭುತ್ವಕ್ಕೆ ಮನುವಿನಲ್ಲಿ ಅವಕಾಶವೇ ಇಲ್ಲ. ನಿರಂಕುಶ ಪ್ರಭುಗಳನ್ನು ನೀಚರಾಜರೆಂದು ಪರಿಗಣಿಸಲಾಗಿದೆ. ಅಂತಹವರನ್ನು ಕ್ರಾಂತಿ ಮೂಲಕ ಪದಚ್ಯುತಿ ಗೊಳಿಸುವುದು ನ್ಯಾಯವೇ. ಅಂತಹ "ವೇನ"ನೆಂಬ ರಾಜನನ್ನು ಮನು ನಿದರ್ಶಿಸುತ್ತಾನೆ. ಮನುವಿನ ರಾಜ್ಯ ಪ್ರಜಾಪ್ರಭುತ್ವವಲ್ಲದಿದ್ದರೂ ಅದರಲ್ಲಿ ನ್ಯಾಯಕ್ಕೆ ಪ್ರಭುತ್ವವಿತ್ತು. ಅದು ನ್ಯಾಯಾಧೀನವಾದ ಅಧಿಕಾರ ಪ್ರಯೋಗದ ರಾಜ್ಯವಾಗಿತ್ತು.

ಹೀಗೆ ದೀರ್ಘವಾದ ಆಲೋಚನೆ, ಪಕ್ವವಾದ ಲೋಕಜ್ಞಾನ, ಸಮಾಜದ ಸುವ್ಯವಸ್ಥೆಯಲ್ಲಿ ತೀವ್ರವಾದ ಆಸಕ್ತಿ, ಧರ್ಮದಲ್ಲಿ ವ್ಯಾಪಕವೂ ಗಾಢವೂ ಆದ ನಿಷ್ಠೆ, ವೇದಾಂತ ಪ್ರತಿಪಾದ್ಯವಾದ ಪರತತ್ತ್ವ ಸಿದ್ಧಿಗೆ ಧರ್ಮವೇ ಸಾಧನವೆಂಬ ಅಂತಿಮ ಸಿದ್ಧಾಂತ, ಇವು ಮನುಸ್ಮೃತಿ ಯಲ್ಲಿ ಮನೋಹರವೂ ದೃಢವೂ ಆದ ರೀತಿಯಲ್ಲಿ ಅಭಿವ್ಯಕ್ತವಾಗಿ ಅದು ಇಂದಿಗೂ ಸಮಾಜ ಶಾಸ್ತ್ರವೇತ್ತರ ಪರಿಗ್ರಹಕ್ಕೆ ಯೋಗ್ಯವಾಗಿದೆ, ಸ್ಫೂರ್ತಿದಾಯಕವಾಗಿದೆ.

'ಮನುಸ್ಮೃತಿ'ಯನ್ನು ರಚಿಸಿದಾತನು ಯಾರೆಂದು ಹೇಳುವುದು ಅಸಾಧ್ಯಪ್ರಾಯವಾಗಿದೆ. 'ಋಗ್ವೇದ'ದಲ್ಲಿ ಮನುಷ್ಯಕುಲದ ಜನಕನೆಂದು ವರ್ಣಿತನಾಗಿರುವ ಕಥಾಪುರುಷನಾದ ಮನು ಅದನ್ನು ರಚಿಸಿರಲಾರನೆನ್ನುವುದು ಗತಾರ್ಥವಾಗಿಯೇ ಇದೆ.......'ಮಹಾಭಾರತ'ವು ಸ್ವಾಯಂಭುವ ಮನು ಮತ್ತು ಪ್ರಾಚೇತಸ ಮನುಗಳಲ್ಲಿ ಭೇದಕಲ್ಪಿಸುವಂತೆ ಕಾಣುತ್ತದೆ. ಸ್ವಾಯಂಭುವನನ್ನು ಧರ್ಮಶಾಸ್ತ್ರದ ಪ್ರವರ್ತಕನೆಂದು ಕರೆದರೆ, ಪ್ರಾಚೇತಸನನ್ನು ಅರ್ಥಶಾಸ್ತ್ರ ಅಥವಾ ರಾಜಧರ್ಮದ ಕರ್ತನೆಂದು ಮಾತ್ರ ಹೇಳಲಾಗಿದೆ.........ಆದ್ದರಿಂದ ಮೊತ್ತಮೊದಲಿಗೆ ಮನುವಿನ ಹೆಸರಿನಲ್ಲಿ ಎರಡು ಪ್ರತ್ಯೇಕ ಗ್ರಂಥಗಳಿದ್ದಿರುವುದು ಅಸಂಭವವಲ್ಲ; ಒಂದು ಧರ್ಮದ ಮೇಲೆ, ಇನ್ನೊಂದು ಅರ್ಥಶಾಸ್ತ್ರದ ಮೇಲೆ ....ನಾವು ಹೀಗೆ ಒಂದು ಊಹೆಯನ್ನು ಮಾಡಬಹುದು. ಮನುಸ್ಮೃತಿ'ಯ ಕರ್ತನು ಅವನಾರೇ ಆಗಿದ್ದಿರಲಿ, ತನ್ನ ಕೃತಿಯಲ್ಲಿ ಧರ್ಮ ಹಾಗೂ ಅರ್ಥಶಾಸ್ತ್ರಗಳ ಮೇಲೆ ಹಿಂದೆ ಇದ್ದ ಎರಡು ಕೃತಿಗಳ ವಿಷಯವನ್ನು ತನ್ನ ಕೃತಿಯಲ್ಲಿ ಅಳವಡಿಸಿಕೊಂಡು ಅವೆರಡನ್ನು ಹಿಂದೆ ಹಾಕಿ ಬಿಟ್ಟಿರಬೇಕು; ಈ ಕಾರ್ಯವು 'ಕೌಟಿಲೀಯ'ದ ರಚನಾಕಾಲದಲ್ಲಿ ಇನ್ನೂ ಮುಗಿಯದೆ ಇದ್ದಿರಬಹುದು ಅಥವಾ ಆದೇ ಆಗ ಮುಗಿದಿರಬಹುದು.

(ಡಾ. ಪಾಂಡುರಂಗ ವಾಮನರ ಕಾಣೆಯವರ 'ಧರ್ಮಶಾಸ್ತ್ರದ ಇತಿಹಾಸ' ಸಂಪುಟ ೧, ಭಾಗ ೧ರಕನ್ನಡ ಅನುವಾದ, ಕನ್ನಡ ಅಧ್ಯಯನ ಸಂಸ್ಥೆಯ ಪ್ರಕಟಣೆ, ಪು. ೧೭೨-೭೩ ರಿಂದ ಉದ್ಧೃತ).



ಇಕ್ಕೇರಿಯ ಪ್ರಾಚೀನ ಅಘೋರೇಶ್ವರಮೂರ್ತಿ (ಚಲಬೇರ)



ಧ್ರುವಬೇರದ (ಮೂಲ ಅಘೋರೇಶ್ವರ ಮೂರ್ತಿ) ಭಗ್ನಶಿಲ್ಪ

ಕೆಳದಿ ಗುಂಡಾಜೋಯಿಸ್

ಕೆಳದಿ ಇಕ್ಕೇರಿ ದೇಗುಲಗಳ ಪ್ರಾಚೀನ ಶಿಲ್ಪಕಲೆ

ದಕ್ಷಿಣ ಭಾರತದಲ್ಲಿ ಐಹೊಳೆ ಪಟ್ಟದಕಲ್ ಶಿಲ್ಪಾರಂಭದಿಂದ ೧೧-೧೩ನೆಯ ಶತಮಾನದ ಹೊತ್ತಿಗೆ ಉಚ್ಛ್ರಂಖಲ ಶಿಖರವನ್ನೇರಿದ ಹೊಯ್ಸಳ ಯುಗದೊಂದಿಗೆ ಕ್ರಮಕ್ರಮವಾಗಿ ವಿಜಯನಗರದವರೆಗೆ ಶಿಲ್ಪಿಗಳ ಕಲಾ ಕೌಶಲ್ಯವು ಕರ್ನಾಟಕದಲ್ಲಿ ಪ್ರತಿಧ್ವನಿಸಿ ವಿಜೃಂಭಿಸಿತು. ವಿಜಯನಗರದ ಆರಂಭದಲ್ಲಿ ದ್ರಾವಿಡ ಶೈಲಿಯು ಹೊಯ್ಸಳದೊಂದಿಗೆ ಸಮ್ಮಿಳನವಾಯಿತೆಂಬುದು ಡಾ॥ ಶ್ರೀಕಂಠಶಾಸ್ತ್ರಿಗಳ ಅಭಿಪ್ರಾಯ. ಕ್ರಿ. ಶ. ೧೩೦೦ಕ್ಕೆ ಶುದ್ಧ ಚಾಳುಕ್ಯ ಹೊಯ್ಸಳ ರೀತಿಯು ಅಂತ್ಯಗೊಂಡಿತೆಂದೂ ವಿದ್ವಾಂಸರ ಅಭಿಮತ. ಕ್ರಿ. ಶ. ೧೪ನೆಯ ಶತಮಾನದಲ್ಲಿ ವಾಸ್ತುಶಿಲ್ಪವು ತುಸು ಮುಂದೆ ಸಾಗಿ ತನ್ನದೇ ಆದ ಪ್ರಭಾವವನ್ನು ಗಳಿಸಿಕೊಂಡಿತು. ಕ್ರಿ. ಶ. ೧೫ ರಿಂದ ೧೮ನೆಯ ಶತಮಾನದವರೆಗೆ ಕೆಳದಿ ಅರಸರ ಕಾಲದಲ್ಲಿ ಶೈವ-ವೈಷ್ಣವ-ಇಸ್ಲಾಮೀ ಪ್ರಭಾವಗಳು ಸಮ್ಮಿಶ್ರಗೊಂಡಿವೆ. ಮಲೆನಾಡಿನಲ್ಲಿ ದೇವಾಲಯ ರಚನಾಶೈಲಿ ಇಷ್ಟು ಹೊತ್ತಿಗೆ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಬೆಳೆದುಬಂದಿತು. ಇದೇ ಕಾಲದಲ್ಲಿ ದಕ್ಷಿಣ ಭಾರತದ ಇತರೆಡೆ ಪ್ರಚಲಿತವಾಗಿದ್ದ ವಿಜಯನಗರ ರೀತಿಯ ದ್ರಾವಿಡ ಮತ್ತು ಹೊಯ್ಸಳ ವಾಸ್ತುಶೈಲಿಯ ಮಿಶ್ರಣ ಇಲ್ಲಿ ಕಂಡುಬರುತ್ತದೆ. ಈ ಸಂಕರ ಶೈಲಿಗೆ 'ಇಕ್ಕೇರಿ ಶೈಲಿ' ಅಥವಾ 'ಮಲೆನಾಡು ಶೈಲಿ' ಎಂದು ಕರೆಯುವ ರೂಢಿಯಿದೆ. ಇಕ್ಕೇರಿಯು ಕೇವಲ ರಾಜಧಾನಿ ಎನಿಸಿದ್ದರಿಂದ 'ಕೆಳದಿ ಶೈಲಿ' ಎಂದು ಕರೆಯುವುದು ಸೂಕ್ತ. ವಿನ್ಸೆಂಟ್ ಸ್ಮಿತ್‌ರವರ ಅಭಿಪ್ರಾಯದಂತೆ ಆಯಾ ದೇಶದ ಹೆಸರಿನ ಶೈಲಿಯನ್ನು ಸೂಚಿಸುವುದು ಉತ್ತಮವಾಗಿದ್ದು, ಕೆಳದಿ ವಾಸ್ತುಶಿಲ್ಪವು ತನ್ನದೇ ಆದ ಮರಾಮತ್ತು ನಿಯಮ ಹಾಗೂ ಸಂಪ್ರದಾಯದಂತೆ ನಿರ್ಮಾಣವಾಗಿರುವುದರಿಂದ 'ಕೆಳದಿ ವಾಸ್ತು ಶಿಲ್ಪ ಕಲಾ ಶಾಲೆ' ಎಂದು ಕರೆಯಲಾಗಿದೆ.

ಕೆಳದಿ-ಇಕ್ಕೇರಿ ದೇವಾಲಯಗಳ ಶಿಲ್ಪಕಲೆಯ ವೈಶಿಷ್ಟ್ಯಗಳನ್ನು ಈ ಕೆಳಕಂಡಂತೆ ವಿಂಗಡಿಸಬಹುದು.

೧. ವಾಸ್ತುಶಿಲ್ಪ ಲಕ್ಷಣಗಳು.
೨. ಮೂರ್ತಿಶಿಲ್ಪಗಳು (ಚಲಬೇರ).
೩. ಮರದ ಕೆತ್ತನೆಯ ಶಿಲ್ಪಗಳು.
೪. ಇತರೆ ಶಿಲ್ಪಗಳು.

ಕೆಳದಿ ದೇಗುಲಗಳ ವಾಸ್ತುಶಿಲ್ಪ ಲಕ್ಷಣಗಳು

ಬೂದು-ಹಸಿರು ಬಣ್ಣದ ಕಲ್ಲಿಂದಾದ ಈ ದೇಗುಲವು ದ್ರಾವಿಡ ಮತ್ತು ಹೊಯ್ಸಳ ವಾಸ್ತುಶೈಲಿಗಳ ಸಂಕರದೊಂದಿಗೆ ಚತುರಸ್ರಾಕಾರದ ತಲವಿನ್ಯಾಸವನ್ನು ಹೊಂದಿದೆ. ರಾಮೇಶ್ವರ ದೇಗುಲವು ಗರ್ಭಗೃಹ, ಭ್ರಮ ಮತ್ತು ತೆರೆದ ಮುಖಮಂಡಪಗಳಿಂದ ಕೂಡಿದೆ. ಜಗತಿಯ ಬಾಹ್ಯಭಿತ್ತಿಯು ಒಂದು ದಿಂಡಿನ ಮೇಲೆ ವಾದ್ಯಗಾರರ ಹಾಗೂ ನರ್ತಕರ ಶಿಲ್ಪಗಳಿವೆ. ಧ್ರುವಬೇರವಿರುವ ಗರ್ಭಗೃಹದ ಭಿತ್ತಿಯಲ್ಲಿ

ಚತುರಸ್ರಾಕಾರದ ಅರ್ಧಕಂಬಗಳ ಅಲಂಕರಣವೂ ಅವುಗಳ ನಡುವೆ ಕಣ್ಣಪ್ಪ, ಗರುಡ, ಹನುಮಾನ್, ಒಂಟೆ, ಆನೆ, ಯಾಳಿ, ಮಿಥುನಗಳು, ಆನೆಯ ಜೊತೆಗೆ ಹೋರಾಡುತ್ತಿರುವ ಯೋಧ, ಸೋಮ ಗ್ರಹಣ, ಮದ್ದಳೆಕಾರ, ಯೋಗಾಸನದಲ್ಲಿರುವ ರಾಮೇಶ್ವರ ಇತ್ಯಾದಿ ಶಿಲ್ಪಗಳೂ ಇವೆ. ಮುಂಚಾಚಿ ಕೊಂಡಿರುವ ಚಾವಣಿಯ ಏಣುಗಳ ಮೇಲೆ ವೀರಭದ್ರ, ತಾಂಡವೇಶ್ವರ, ಪಾರ್ವತಿ, ಮೋಹಿನಿ, ವೇಣು ಗೋಪಾಲ, ಕಾಳಿಂಗಮರ್ದನ, ಭೈರವ ಇತ್ಯಾದಿ ದೇವ ದೇವತೆಗಳ ಶಿಲ್ಪಗಳಿವೆ. ಇವುಗಳಲ್ಲಿ ಅನೇಕವನ್ನು ಶಿವಮೊಗ್ಗ ಜಿಲ್ಲಾ ವಸ್ತುಸಂಗ್ರಹಾಲಯಕ್ಕೆ ಕೊಂಡೊಯ್ಯಲಾಗಿದೆ. ಉಳಿದುವು ಕಣ್ಮರೆಯಾಗಿವೆ. ಗರ್ಭ ಗೃಹದ ಮೇಲಿನ ಗೋಪುರ ಚತುರಸ್ರಾಕಾರದ್ದು. ನಾಲ್ಕು ಅಂಕಣ ಉದ್ದ ಮತ್ತು ಮೂರು ಅಂಕಣ ಅಗಲವಿರುವ ಮುಖಮಂಡಪದ ಪಡುವಣ ಮೂಲೆಯ ಎರಡು ಮಾಡಗಳಲ್ಲಿ ಗಣಪತಿ ಹಾಗೂ ಮಹಿಷಾಸುರಮರ್ದಿನಿ ಮೂರ್ತಿಗಳಿವೆ. ದ್ವಾರಬಂಧದ ಕಂಬ-ತೋಳುಗಳಲ್ಲಿ ಶೈವದ್ವಾರಪಾಲಕ ರಿದ್ದಾರೆ. ಚಿಕ್ಕನವರಂಗಮಂಡಪ ಎರಡು ಸ್ತಂಭಗಳಿಂದ ಆವೃತ್ತವಾಗಿದೆ. ಬಸವನು ಇಲ್ಲಿ ಶೋಭಿಸಿ ದ್ದಾನೆ. ವಿನ್ಯಾಸದಲ್ಲಿ ಗರ್ಭಗೃಹ, ಪರಿಭ್ರಮಕ್ಕೆಡೆಯಿರುವ ಸುಕನಾಸಿ, ಚಿಕ್ಕನವರಂಗ ಮತ್ತು ಮುಖ ಮಂಡಪವಿರುವ ಗುಡಿಯ ಮುಂದಿನ ಮಂಡಪದಲ್ಲಿ ಸುತ್ತಲೂ ಒರಗು-ಬೆಂಚುಗಳಿರುವುದು ವಿಶೇಷ. ಮುಖಮಂಡಪದ ತಳದಲ್ಲಿ ಒಂದೆಡೆ ಮೂವರೂ ರಾಣಿಯರೊಂದಿಗೆ ಸೋಮಶೇಖರ ನಾಯಕನದಿರ ಬಹುದಾದ ಭಕ್ತವಿಗ್ರಹಗಳಿವೆ.

ಗರ್ಭಗೃಹ

ಗರ್ಭಗೃಹದ ಧ್ರುವಬೇರ ಲಿಂಗವು ಪೂರ್ವಮುಖವಾಗಿದೆ. ಇದರ ಅಭಿಷೇಕಜಲವು ಪೂರ್ವ ಅಥವಾ ಉತ್ತರಪ್ರವಣವಾಗಬೇಕೆಂದು ವೇದಾಗಮಗಳಲ್ಲಿ ವಿಧಿಸಿದೆ. ಮೂಲಬೇರದ ಪಿಂಡಿಕೆ ಅಥವಾ ಪೀಠ ವನ್ನು ಸ್ಥಾಪಿಸುವುದಕ್ಕೆ ಮುಂಚೆ ವಾಸ್ತುಮಂಡಲದ ಮಧ್ಯಭಾಗ ಬ್ರಹ್ಮಸ್ಥಾನದಲ್ಲಿ ಬೀಜಾವಾಪನ, ಶಂಕುಸ್ಥಾಪನ ಮುಂತಾದುವನ್ನು ಮಾಡಿ ಗರ್ಭಗುಡಿಯ ಪೂರ್ವ ಅಥವಾ ಉತ್ತರಗೋಡೆಯಲ್ಲೂ ಅಂತೆಯೇ ಬೀಜಾವಾಪನ ಮಾಡಿ ರಹಸ್ಯವಾಗಿ ಮುಚ್ಚಬೇಕೆಂದು ಆಗಮಗಳಲ್ಲಿ ಹೇಳಿದೆ. ಧ್ರುವ ಬೇರದ ಸ್ಥಾಪನೆಯ ನಂತರ ಪ್ರಾಣ-ಪ್ರತಿಷ್ಠಾ ನೇತ್ರೋನ್ಮೀಲನಾದಿ ಕರ್ಮಗಳನ್ನು ವಿಧಿವತ್ತಾಗಿ ನೆರವೇರಿಸಿದಲ್ಲಿ ಕ್ಷೇತ್ರವು ಜಾಗ್ರತವಾಗುವುದು. ಧ್ರುವಬೇರದ ದೃಷ್ಟಿ ಬಾಹ್ಯದಲ್ಲಿರುವ ಬಲಿಪೀಠದ ಮೇಲೆ ಬೀಳುವಂತಿರಬೇಕು. ಇದಕ್ಕೆ ಅನುಗುಣವಾಗಿ ಮುಖಮಂಡಪದ ಸಮೀಪದಲ್ಲಿರುವ ಪ್ರಧಾನ ಬಲಿಪೀಠವನ್ನೂ ಅವಲೋಕಿಸಬಹುದು. ಆಗಮ ವಿಧಿಗನುಗುಣವಾಗಿ ಇವುಗಳ ಪ್ರಮಾಣವು ಮೂಲ ಬೇರದ ದೃಷ್ಟಿಗನುಸಾರವಾಗಿರುವುದನ್ನು ಆಗಮ ಹಾಗೂ ಶಿಲ್ಪಕಲಾವಾಸ್ತು ತಜ್ಞರು ಗಮನಿಸ ಬಹುದಾಗಿದೆ.

ವೀರಭದ್ರ ದೇವಾಲಯ

ಈ ಗುಡಿಯ ಗರ್ಭಗೃಹ ಮತ್ತು ಮುಖಮಂಡಪಗಳು ಬದಿಯಲ್ಲಿರುವ ರಾಮೇಶ್ವರ ದೇವಾಲಯದ ಮಾದರಿಯವೇ ಆಗಿವೆ. ನವರಂಗದ ಮಧ್ಯದಲ್ಲಿ ಪಾತಾಳಾಂಕಣವಿರುವುದು ವಿಶೇಷ ವೈಶಿಷ್ಟ್ಯ. ಗರ್ಭಗೃಹದ ಬಾಹ್ಯಭಿತ್ತಿಯಲ್ಲಿರುವ ವಾಸ್ತುಪುರುಷನ ಶಿಲ್ಪ ಕುತೂಹಲಕಾರಿಯಾದದ್ದು. ಈ ವಾಸ್ತು ಪುರುಷನಿಗೆ ಆನೆಗೆ ಇರುವಂತೆ ಕೈಕಾಲುಗಳು ಮತ್ತು ಬಾಲವು ಇರುತ್ತದೆ. ಸಿಂಹದಂತಿರುವ ಮುಖ. ಗಡ್ಡ. ಇವಕ್ಕೆ ಹೊಂದಿಕೊಂಡು ಅಚ್ಚೊತ್ತಿದಂತೆ ಇರುವ ಹೊಟ್ಟೆ ಇವುಗಳು ಆಸಕ್ತಿಯನ್ನು ಕೆರಳಿಸು ತ್ತವೆ. ಬಲಭಾಗದಲ್ಲಿ ಕೈಯೆತ್ತಿಕೊಂಡು ಕುಳಿತಿರುವ ಬಾಲಕನೋರ್ವನೂ (ಇದು ವೀಣಾಧಾರಿಣಿ ಸ್ತ್ರೀಯೋರ್ವಳ ಮಧ್ಯದಲ್ಲಿದೆ). ಎಡಭಾಗದಲ್ಲಿ ದರ್ಪಣ ವೀಕ್ಷಣ ಧಾರಿಣಿಯಾಗಿ ಮಂಡಲರಹಸ್ಯ ವಿರುವ ಮೋಹಿನಿಯು ಕೂದಲು ಸರಿಮಾಡಿಕೊಳ್ಳುತ್ತಿರುವುದೂ ಹಾಗೂ ಸನಿಹದಲ್ಲಿಯೇ ಇರುವ ಭಸ್ಮಾಸುರನೂ ಗೋಚರಿಸುವರು. ಇಲ್ಲಿರುವ ಅಳತೆ ಪಟ್ಟಿಯೊಂದು (measuring rod) ೩೬'', ೮'',೪'' ಉದ್ದ ಹಾಗೂ ವಿಭಾಗೀಯ ಪ್ರಮಾಣಗಳನ್ನೂ ತೋರಿಸುತ್ತವೆ. ಉಳಿದೆಡೆಗಳಲ್ಲಿ ಪಂಚಶಿರ

ಕಾಮಧೇನು, ಜಂಗಮ ಇತ್ಯಾದಿ ಶಿಲ್ಪಗಳಿವೆ. ಇಲ್ಲಿಯೂ ಚಾವಣಿಯ ಮುಂಚಾಚಿಕೊಂಡಿರುವ ಭಾಗದ ಏಣುಗಳ ಮೇಲೆ ಸಾಲಾಗಿ ವಿವಿಧ ಶಿಲ್ಪಗಳಿದ್ದು ಈಗ ಅವುಗಳಲ್ಲಿ ಬಹಳಷ್ಟು ಕಣ್ಮರೆಯಾಗಿವೆ. ವಿಮಾನವು ರಾಮೇಶ್ವರ ದೇಗುಲದಷ್ಟು ಎತ್ತರವಿಲ್ಲ.

ಮುಖಮಂಡಪದ ಒಳಭಾಗ

ಇಲ್ಲಿರುವ ಸ್ತಂಭಗಳು ಯಾಳಿಗಳಿಂದ ಕೂಡಿವೆ. ನಾಗಬಂಧದ ಬೋದಿಗೆಗಳಿಂದ ಇವು ಭದ್ರವಾಗಿವೆ. ಬಾಹ್ಯಸ್ತಂಭದ ಒಂದೆಡೆಯಲ್ಲಿ ಮರಾಠಾ ಪ್ರಭಾವದಿಂದ ಕೂಡಿದ ಶಿವಾಜಿಯ ಹೋಲಿಕೆಯ ಕುದುರೆ ಸವಾರನ ಶಿಲ್ಪವಿದೆ. ಪಡುವಣ ಮೂಲೆಯ ಇಕ್ಕೆಡೆಗಳಲ್ಲಿ ದಕ್ಷಬ್ರಹ್ಮ ಹಾಗೂ ನಾರಸಿಂಹಮೂರ್ತಿ ಗಳಿವೆ. ಇವುಗಳು ೫' ಎತ್ತರವಿದ್ದು, ದಕ್ಷಬ್ರಹ್ಮನ ಬಲಭಾಗದಲ್ಲಿ ಕಮಂಡಲು ಇದೆ. ನವರಂಗ ದಲ್ಲಿರುವ ಅನೇಕ ಶಿಲ್ಪಕಲಾಕೃತಿಗಳು ಮನಸ್ಸನ್ನು ಸೂರೆಗೊಳ್ಳುತ್ತವೆ. ಆನೆ ಮುಖದ ಹಂಸ, ಯೋಗಿಯ ಶಿರದ ಅಗ್ರಭಾಗದಲ್ಲಿ ವೃಕ್ಷವೊಂದು ಬೆಳೆದು ಉಭಯ ಪಾರ್ಶ್ವಗಳಲ್ಲಿ ಕೈಜೋಡಿಸು ತ್ತಿರುವ ಕಪಿ ಸಮೂಹ, ದೂತರ ಮಧ್ಯೆ ಉತ್ತರೀಯ ಹಾಗೂ ಧೋತಿಯನ್ನು ಧರಿಸಿರುವ ರಾಜ ಚಿಹ್ನೆಯಿಂದ ಕೂಡಿದ ನಾಯಕ, ಮೇಲುಭಾಗದಲ್ಲಿ ಕಂಗೊಳಿಸುವ ಮನೋಹರ ಕಮಲಗಳು, ನಾಗ ಬಂಧಗಳು, ವಿವಿಧ ಕಲಾತ್ಮಕ ಶಿಲ್ಪಗಳು, ಗ್ರಹಗಳ ಮಧ್ಯೆ ಇರುವ ಸೂರ್ಯ, ಜಿಂಕೆಯೊಂದಿಗೆ ಚಂದ್ರ, ಆನೆ, ಸಿಂಹ, ಹೂವು, ವ್ಯಾಳ, ಪರ್ವತ, ಮಾನವ, ಹಾಗೂ ಎತ್ತು ಇತ್ಯಾದಿ ಕಲಾ ಸೌರಭಗಳು ಸೌಂದರ್ಯ ಪ್ರಜ್ಞೆಗಳಿಗೆ ರಸದೂಟವನ್ನು ಒದಗಿಸುತ್ತವೆ. ಸುಂದರ ಬೃಹತ್ ಕಮಲವೊಂದು ಸಿಡಿಲು ಹೊಡೆತದಿಂದ ಭಗ್ನವಾಗಿದೆ.

ಭುವನೇಶ್ವರಿ

ವೀರಭದ್ರ ದೇವಾಲಯದಲ್ಲಿ ಗಂಡಭೇರುಂಡವಿರುವ ಭುವನೇಶ್ವರಿ ಒಂದು ಅಪೂರ್ವ ಹಾಗೂ ಅಸಾದೃಶ ಕಲಾಕೃತಿ. ಕೆಳದಿ ಅರಸರ ಲಾಂಛನವಾಗಿದ್ದ ಇದನ್ನು ಕ್ರಿ. ಶ. ೧೮೮೧ರಲ್ಲಿ ಮೈಸೂರಿನ ಒಡೆಯರು ಅನುಸರಿಸಿ ಮುಂದುವರಿಸಿದರು. ಈ ಗಂಡಭೇರುಂಡ ಪಕ್ಷಿಯು ತನ್ನ ಎರಡು ಕೊಕ್ಕುಗಳ ಪೈಕಿ ಒಂದೊಂದರಲ್ಲೂ ಸಿಂಹವೊಂದನ್ನು ಕಚ್ಚಿ ಹಿಡಿದಿದೆ. ಸಿಂಹಗಳ ಬಾಯಿಯಲ್ಲಿ ಒಂದೊಂದು ಆನೆಯಿದೆ. ಹಾರುವ ಭಂಗಿಯಲ್ಲಿರುವ ಪಕ್ಷಿ ತನ್ನ ಕಾಲುಗಳಿಂದ ಆನೆಯನ್ನು ಹಿಡಿದು ಕೊಂಡಿರುವಂತೆ ಚಿತ್ರಿಸಲಾಗಿದೆ. ಇದನ್ನು ವರ್ಣಿಸುವುದಕ್ಕಿಂತ ಒಮ್ಮೆ ವೀಕ್ಷಿಸುವುದೇ ಮೇಲು. ಬೊಂಬಾಯಿಯ De-Souza ರವರು ಗಂಡಭೇರುಂಡವನ್ನು ಕುರಿತು ಮಹಾಪ್ರಬಂಧವೊಂದನ್ನು ಸಾದರಪಡಿಸಿರುವುದಾಗಿ ತಿಳಿದುಬಂದಿದೆ.

ದ್ವಾರಬಂಧದ ಕಂಬ-ತೋಳುಗಳಲ್ಲಿ ದ್ವಾರಪಾಲಕರ ಶಿಲ್ಪವಿದೆ. ಭ್ರಮದ ಮಧ್ಯೆ ಇರುವ ಗರ್ಭಗೃಹದ ಬೃಹತ್ ಪೀಠದಲ್ಲಿ ಧ್ರುವಬೇರ ವೀರಭದ್ರ ಮೂರ್ತಿಯಿದೆ. ಇದು ಪೈಠಣದಿಂದ ತಂದು ಪ್ರತಿಷ್ಠಾಪಿಸಿದ ಮೂರ್ತಿಯೆಂದು ಇತಿಹಾಸದ ಉಲ್ಲೇಖವಿದೆ.

ಧ್ವಜಸ್ತಂಭ

ವೀರಭದ್ರ ದೇಗುಲದ ಮುಂಭಾಗದಲ್ಲಿರುವ೨೫' ಎತ್ತರದ ಶಿಲಾಸ್ತಂಭವು ಗಣೇಶ, ಶಿವ, ನಂದಿ, ಪಾರ್ವತಿ ಮತ್ತು ಭೈರವರ ಶಿಲ್ಪಗಳಿಂದ ಕೂಡಿದೆ. ಗಣೇಶನ ಕೆಳಭಾಗದಲ್ಲಿ ಕುತೂಹಲಾಸಕ್ತಿ ಯನ್ನುಂಟುಮಾಡುವ ಪಂಚಮೂರ್ತಿ ಪುತ್ಥಳಿಗಳಿವೆ. ಇವು ಕೆಳದಿಯ ರಾಣಿ ಚೆನ್ನಮ್ಮಾಜಿ ಹಾಗೂ ಮರಾಠಾ ಸರದಾರರ ವೈಶಿಷ್ಟ್ಯಗಳನ್ನು ಪ್ರತಿಬಿಂಬಿಸುತ್ತವೆ.

ಪಾರ್ವತಿ ದೇವಾಲಯ

ಶಿಲಾಮಯ ಗರ್ಭಗೃಹ, ಭ್ರಮ, ಇಟ್ಟಿಗೆಗಳಿಂದ ಕಟ್ಟಿದ ಆಧುನಿಕ ಮಂಡಪ ಇವುಗಳಿಂದ ಕೂಡಿದ ಪಾರ್ವತೀ ದೇಗುಲದಲ್ಲಿ ಭೈರವ, ಷಣ್ಮುಖ, ಗಣೇಶ, ಅಂಧಕಾಸುರನ ವಧೆಯಲ್ಲಿ ನಟರಾಜ, ಪುರುಷಾ

ಮೃಗ, ಕಣ್ಣಪ್ಪ ಮತ್ತು ಗಜಲಕ್ಷ್ಮಿಯರ ಸುಂದರ ಶಿಲ್ಪಗಳಿವೆ. ಪಡುವಣ ಬಾಹ್ಯ ಭಿತ್ತಿ ಅಥವಾ ಕುಡ್ಯದಲ್ಲಿರುವ ಉಮಾ ಮಹೇಶ್ವರ ಶಿಲ್ಪವು ಇಕ್ಕೇರಿ (ಕೆಳದಿ) ಸುವರ್ಣನಾಣ್ಯದಲ್ಲಿ ಪ್ರತಿಬಿಂಬಿತವಾಗಿದೆ. ಇದು ಅಧ್ಯಯನಯೋಗ್ಯವಾದುದು.

ಕೆಳದಿ ದೇಗುಲದ ಮೂರ್ತಿ ಶಿಲ್ಪಗಳು

ಡಾ॥ ಗುರುರಾಜ ಭಟ್ಟರ ನಿರೂಪಣೆಯಂತೆ ಮಧ್ಯಸೂತ್ರ ಅಥವಾ ಬ್ರಹ್ಮಸೂತ್ರದಿಂದ ಆರಂಭಿಸಿ, ನಾಭಿಸೂತ್ರವನ್ನೊಳಗೊಂಡು ತಾಲಮಾನದ ಭೂಮಿಸೂತ್ರದವರೆಗೆ ಇರುವ ವಿವಿಧ ಮೂರ್ತಿಶಿಲ್ಪಗಳು ಕೆಳದಿ-ಇಕ್ಕೇರಿಗಳಲ್ಲಿ ಉಪಲಬ್ಧವಿವೆ. ಪ್ರಾಕಾರಾಂಗಣದ ಒಂದೆಡೆ ಇರುವ ಲಕ್ಷ್ಮೀನಾರಾಯಣ ಮೂರ್ತಿಯು ಕಲಾಭಿವ್ಯಕ್ತಿಯಲ್ಲಿ ಅನನ್ಯಶವಾದುದು. ಗರುಡನೂ ಸೇರಿದಂತೆ ಸೂಕ್ಷ್ಮ-ಕುಸುರಿನ ಕಲಾಜಾಣ್ಮೆಯನ್ನು ಸ್ಥಪತಿಯು ಕೌಶಲ್ಯದಿಂದ ತೋರ್ಪಡಿಸಿದ್ದಾನೆ. ಸುಂದರವೂ-ವೈವಿಧ್ಯಮಯವೂ ಆದ ಈ ಕಲಾಕೃತಿಯನ್ನು ಅಮೇರಿಕದ ವಿದ್ವಾಂಸರೊಬ್ಬರು ಕೊಂಡೊಯ್ಯಲು ಯತ್ನಿಸಿದ್ದುದನ್ನು ನಾನೇ ತಡೆಹಿಡಿದ್ದೇನೆ.

ಪೌಳಿಯ ವಿಡಪಾರ್ಶ್ವದಲ್ಲಿರುವ ಕೇಶವಮೂರ್ತಿಯೂ ಬಹು ಸುಂದರವಾದುದು. ಗರುಡ ಹಾಗೂ ದಶಾವತಾರ ಶಿಲ್ಪಗಳಿಂದ ಕೂಡಿದ ಈ ಮೂರ್ತಿಯ ಶಿಲ್ಪಕಲಾಪ್ರತಿಭೆಯು ಅನ್ಯಾದೃಶವಾದುದು. ಅಂತೆಯೇ ಸಪ್ತಮಾತೃಕಾ. ಕುಚಿನ ಜಿನಮೂರ್ತಿಗಳು ಮನೋಹರವಾದುದು.

ಇಕ್ಕೇರಿ ಅಘೋರೇಶ್ವರ ದೇವಾಲಯ

ಅಘೋರೇಶ್ವರ ದೇವಾಲಯದ ಮುಂಭಾಗದಲ್ಲಿ ಮೆಟ್ಟಿಲು ಏರಿದೊಡನೆ ಶಿಲಾ ಮಹಾದ್ವಾರವು ಗೋಚರಿಸುತ್ತದೆ. ಉಭಯ ಪಾರ್ಶ್ವದ ಜಗತೀ ಕಟ್ಟೆಯಲ್ಲಿ ಶಿಲಾಸ್ತಂಭದ ತಳಪಾಯದ ಅವಶೇಷಗಳು. ವಿಶಾಲ ಪೌಳಿಗಳು ಮುಂತಾದುವುಗಳನ್ನು ಸೂಕ್ಷ್ಮವಾಗಿ ಗಮನಿಸಿದಲ್ಲಿ ಶ್ರೀಮದ್ಗಾಂಭೀರ್ಯದಿಂದ ಕೂಡಿದ 'ಮಯೂರವಾಹರ' ಅಥವಾ ಪ್ರಾಕಾರವಿತ್ತಯುದು ದೃಗ್ಗೋಚರವಾಗುತ್ತದೆ. ಕ್ರಿ. ಶ. ೧೬೨೩ ಹಾಗೂ ೧೬೩೭ರಲ್ಲಿ ಕ್ರಮವಾಗಿ ಇಟಲಿಯ ಪ್ರವಾಸಿ ಪಿಯತ್ರೋ ಡೆಲ್ಲಾವಾಲ್ಲೆ ಹಾಗೂ ಇಂಗ್ಲೆಂಡಿನ ಪ್ರವಾಸಿ ಪೀಟರ್ ಮುಂಡಿ ಮುಂತಾದವರು ತಮ್ಮ ಕಥನದಲ್ಲಿ 'ಮಯೂರವಾಹರ'ದ ಉಲ್ಲೇಖನ ಮಾಡಿರುವುದು ಇದನ್ನು ಸಮರ್ಥಿಸುತ್ತದೆ.

ದೇವಾಲಯದ ವಾಸ್ತುಶಿಲ್ಪಗಳು

ಅಘೋರೇಶ್ವರ ಗುಡಿಯು ಕೆಳದಿ ಅರಸರ ಕಾಲದ ಶಿಲ್ಪಕಲಾಕೌಶಲ್ಯದಲ್ಲಿ ಅಮೋಘ ಸಾಧನೆಯನ್ನು ಗಳಿಸಿದೆ. ಇಟಗಿಯ ಮಹಾದೇವ ದೇವಾಲಯವನ್ನು ದೇವಾಲಯ ಚಕ್ರವರ್ತಿಯೆಂದು ಸಂಬೋಧಿಸಿದಂತೆ. ಕೆಳದಿ ನಾಯಕರ ಪರಂಪರೆಯ ಗುಡಿ ನಿರ್ಮಾಣದ ಸಾಲಿನಲ್ಲಿ ಇಕ್ಕೇರಿ ದೇಗುಲವು ದೇವಾಲಯ ಚಕ್ರವರ್ತಿಯೋಪಾದಿಯಲ್ಲಿದೆ ಎಂದರೆ ಅತಿಶಯೋಕ್ತಿಯಾಗಲಾರದು. ವಾಸ್ತುತಜ್ಞರು ಇದನ್ನು ವಿಶೇಷವಾಗಿ 'ಇಕ್ಕೇರಿ ಕಲಾ ಶಾಲೆಯ ವಾಸ್ತುಶಿಲ್ಪ' ಎಂಬುದಾಗಿಯೇ ಕರೆದು ವರ್ಣಿಸಿದ್ದಾರೆ. ಹೊಯ್ಸಳ ದ್ರಾವಿಡ ಶೈಲಿಯ ಸಂಕರದಿಂದ ಕೂಡಿದ ಇದರ ಶಿಲ್ಪಕಲಾ ಪಾಂಡಿತ್ಯ ಚತುರತೆಯು ಮೈದಾನದಲ್ಲಿರುವ ದೇಗುಲಗಳಿಗಿಂತಲೂ ವಿಭಿನ್ನಗೊಂಡು ಮಲೆನಾಡು ಶೈಲಿಯ ವಾಸ್ತುರಚನೆಯಲ್ಲಿ ತನ್ನದೇ ಆದ ಸೂತ್ರ ಪರಂಪರೆಯನ್ನು ಕಾಯ್ದುಕೊಂಡಿದೆ.

ಗುಡಿಯ ತಳವಿನ್ಯಾಸ ಮತ್ತು ಜಗತಿ

ದೇಗುಲವು ಆಳವಾದ ತಳವಿನ್ಯಾಸಗಳಿಂದ ಭದ್ರಬುನಾದಿಯಲ್ಲಿ ನಿರ್ಮಿಸಲ್ಪಟ್ಟಿದೆ. ಇದು ಐದು ದಪ್ಪ ದಿಂಡುಗಳನ್ನೊಳಗೊಂಡ ಆರು ಅಡಿ ಎತ್ತರದ ಜಗತಿಯ ಮೇಲೆ ಇದ್ದು, ಅಡಿದಿಂಡಿನ ಮೇಲೆ

ಒಂದರಲ್ಲಿ ಕೀರ್ತಿಮುಖಿಗಳ ಮತ್ತು ಇನ್ನೊಂದರಲ್ಲಿ ಮೇಲೆ ಸಿಂಹಸಾಲುಗಳ ಅಲಂಕರಣವಿದೆ. ತಳ ವಿನ್ಯಾಸದಲ್ಲಿ ಜಗತಿ ಚತುರಸ್ರಾಕಾರವಾಗಿದ್ದರೂ, ಪರಿಘದ ಓಟವನ್ನು ಅಲ್ಲಲ್ಲಿ ಹಿಂದಕ್ಕೆ-ಮುಂದಕ್ಕೆ ಜಗ್ಗಿರುವುದರಿಂದ ಅಂಚುಗಳು ದಂತಪಂಕ್ತಿಯಂತೆ ಕಾಣುತ್ತವೆ. ಜಗತಿಯು ಅಗಲ ಬಹಳ ಕಿರಿದಾಗಿದ್ದು, ಅದಕ್ಕೆ ಹತ್ತಲು ಮೆಟ್ಟಿಲುಗಳೂ ಇಲ್ಲದಿರುವುದರಿಂದ ಇದು ಹೊಯ್ಸಳ ದೇಗುಲಗಳಲ್ಲಿರುವಂತೆ ಪ್ರದಕ್ಷಿಣ ರೀತಿಯಲ್ಲಿ ಕಟ್ಟಲಾಗಿಲ್ಲವೆಂಬುದು ಸ್ಪಷ್ಟಪಡುತ್ತದೆ. ಪೂರ್ವಭಾಗದ ಜಗತೀಕಟ್ಟೆಯಲ್ಲಿ ಐರಾವತವನ್ನೇರಿದ ಇಂದ್ರ ಪಶ್ಚಿಮದಲ್ಲಿ ಮಕರವನ್ನೇರಿದ ವರುಣನ ಮೂರ್ತಿಯೂ ಇದೆ. ಸೋಮಸೂತ್ರದ ಕೆಳಭಾಗದಲ್ಲಿ ಸುಂದರವಾದ ಇಂದ್ರನ ಮೂರ್ತಿಶಿಲ್ಪವಿದೆ.

ಗರ್ಭಗೃಹ

ಜಗತಿಯ ಮೇಲಿನ ಗುಡಿಭಾಗದಲ್ಲಿ ಚತುರಸ್ರಾಕಾರದ ಗರ್ಭಗೃಹವೂ ಅದರ ಮುಂದೆ ತೆರೆದ ಸುಕನಾಸಿಯೂ ಇದ್ದು ಅದಕ್ಕೂ ಮುಂದೆ ೨೫ ಅಂಕಣಗಳ ಮಂಡಪವಿದೆ. ಗರ್ಭಗೃಹದ ಬಾಹ್ಯ ಭಿತ್ತಿಯ ಮೇಲೆ ಪೂರ್ವ, ದಕ್ಷಿಣ ಮತ್ತು ಪಶ್ಚಿಮ ಪಾರ್ಶ್ವಗಳಲ್ಲಿ ದೇವಕೋಷ್ಠಕಗಳಿವೆ. ಅವುಗಳ ಮೇಲೆ ಸಿಂಹಪಟ್ಟಿಕೆ ಮತ್ತು ಗೋಪುರಗಳ ಅಲಂಕರಣವಿದೆ. ಸೂರಿನ ಭಾಗದಲ್ಲಿ ಅಷ್ಟಾಕಾರದ ಕಪೋತವಿದೆ. ಗರ್ಭಗೃಹದ ಮೇಲಿನ ಗೋಪುರ ಎರಡು ತಲಗಳಲ್ಲಿದ್ದು ವಿಮಾನ ಭಾಗಗಳು ನಿಂತ ಸಿಂಹಗಳ ಶಿಲ್ಪಗಳಿಂದ ಸಾಲಂಕೃತವಾಗಿದೆ.

ಸುಮಾರು ೧೦ ಅಡಿ ಚತುರಸ್ರಾಕಾರದಿಂದ ಕೂಡಿದ ಗರ್ಭಗೃಹದಲ್ಲಿ ಬೃಹತ್ ಪೀಠವಿದೆ. ೮' × ೫' ಪ್ರಮಾಣವುಳ್ಳ ಪೀಠದಲ್ಲಿ ೩೨ ವಿಗ್ರಹಗಳು ಅಂಚಿನಲ್ಲಿ ಶೋಭಿಸಿವೆ. ಧ್ರುವಬೇರ ಅಘೋರೇಶ್ವರ ಮೂರ್ತಿಯನ್ನು ಕುರಿತು ನಡೆಸಿದ ನನ್ನ ನೂತನ ಸಂಶೋಧನೆಯನ್ನು ವಿದ್ವಾಂಸರು ಈಗಾಗಲೇ ತೀವ್ರವಾಗಿ ಗಮನಿಸಿರಬಹುದೆಂದು ಭಾವಿಸುವೆನು.

ನವರಂಗ

ಸುಕನಾಸಿಯ ಮುಂದೆ ನವರಂಗವೆಂಬ ಹಜಾರವಿದೆ. ವೈವಿಧ್ಯಮಯ ಸ್ತಂಭಗಳಿಂದ ನವರಂಗವು ಶೋಭೆಗೊಂಡು ಅಪೂರ್ವ ಸೌಂದರ್ಯದಿಂದ ಕೂಡಿದೆ. ಇಲ್ಲಿ ೨½ ಅಡಿ ಎತ್ತರದಲ್ಲಿ ಇಕ್ಕಟ್ಟಾದ ಜಗತಿಯಿದೆ. ಸಿಂಹ ಹಾಗೂ ನಾಗಬಂಧಗಳ ಬೋದಿಗೆಗಳು ಹಾಗೂ ಮೇಲ್ಚಾವಣಿಗಳು ಪ್ರಾಚೀನ ಮಠಾ ಮತ್ತು ಸಿಯುಮದಂತೆ ರೇಖಾವಿನ್ಯಾಸಕ್ಕೆ ಅನುಗುಣವಾಗಿ ಸೂತ್ರಗ್ರಾಹಿಯ ಜಾಣ್ಮೆಯಿಂದ ಭವ್ಯವಾಗಿ ಜೋಡಿಸಲ್ಪಟ್ಟಿವೆ. ಇಲ್ಲಿಯ ಹಲವು ಸ್ತಂಭಗಳು ಚಾಲುಕ್ಯ ಹಾಗೂ ಹೊಯ್ಸಳ ಶೈಲಿಯನ್ನು ಪ್ರತಿಬಿಂಬಿಸುತ್ತವೆ.

ನವರಂಗದ ದಕ್ಷಿಣ ಕುಡ್ಯದಲ್ಲಿ ನವಿಲುವಾಹನದ ಸುಂದರ ಷಣ್ಮುಖ, ಗಣೇಶ, ಮಹಿಷಾಸುರ ಮರ್ದಿನಿ, ಭೈರವ ಹಾಗೂ ಕಣ್ಮರೆಯಾಗಿರುವ ಮೂಲ ಮೂರ್ತಿಗೆ ಬದಲಾಗಿ ಇತರೆ ಮೂರ್ತಿಗಳು ಇವೆ.

ಜಾಮಿತಿಗನುಗುಣವಾಗಿ ರೂಪಿಸಿರುವ ಗಜ ಹಾಗೂ ಸ್ತಂಭ ಪ್ರಮಾಣಗಳೂ ಕೋಷ್ಟಕ ಸಂಕೇತಗಳನ್ನು ಹೊಂದಿವೆ. ಮಧ್ಯ ಮಂಡಪದ ಮೇಲುಗಡೆ ಭುವನೇಶ್ವರಿಯು ೯ ಪದ್ಮಗಳನ್ನೊಳಗೊಂಡು ಸೌಂದರ್ಯಮಯವಾಗಿದೆ. ತಳಭಾಗದಲ್ಲಿನ ೭ ಭಕ್ತವಿಗ್ರಹಗಳು ಕೆಳದಿ ನಾಯಕರದಾಗಿವೆ. ವೈವಿಧ್ಯಮಯ ಕಲಾಕೃತಿ ಸೌರಭಗಳಿಂದ ಕೂಡಿದ ಸ್ತಂಭವೊಂದರಲ್ಲಿ ಇರುವ 'ಕ್ಯಾಬರೆ' ಶಿಲ್ಪವನ್ನು ಮಾತ್ರ ಯುವದಂಪತಿಗಳು ನೋಡಲು ಮರೆಯಬೇಡಿರಿ.

ಸುಕನಾಸಿ

ಮಹಾದ್ವಾರವು ಕಲಾಕೃತಿಗಳಿಂದ ಶೃಂಗರಿಸಲ್ಪಟ್ಟಿದೆ. ದ್ವಾರಬಂಧದ ಕಂಬದ ಭಾಗಗಳಲ್ಲಿ ಸುಮಾರು ೧೦' × ೫' ಪ್ರಮಾಣವಿರುವ ದ್ವಾರಪಾಲಕರು ಪ್ರೇಕ್ಷಕರನ್ನು ವೈಭವದಿಂದ ಸ್ವಾಗತಿಸುತ್ತಾರೆ. ಎರಡು

ಸುಕನಾಸಿಗಳಿದ್ದು ಒಂದೆಡೆ ಚಪ್ಪಟೆಯಾದ ಬೃಹತ್ ಸ್ತಂಭಗಳು ವಿಮಾನದ ಭಾರವನ್ನು ಸಮರ್ಪಕವಾಗಿ ವಹಿಸುವ ರೀತಿಯಲ್ಲಿ ಬೋದಿಗೆಗಳಿಂದ ಭದ್ರವಾಗಿ ಹಾಗೂ ಸಮನಾಗಿ ಜೋಡಿಸಲ್ಪಟ್ಟಿವೆ. ಸುಕನಾಸಿಯಿಂದ ಗರ್ಭಗೃಹವನ್ನು ಸುತ್ತಿಬರಲು ಭ್ರಮವಿದೆ. ಇಲ್ಲಿನ ಬಸವನ ವಿಗ್ರಹ ಅಮೃತ ಶಿಲೆಯಿಂದ ಕೂಡಿದೆ. ಸೂಕ್ಷ್ಮ ಕೆತ್ತನೆಗಳ ಕುಸುರಿನ ಕೆಲಸಗಳಿಂದ ಕೂಡಿದ ದ್ವಾರಭಾಗದಲ್ಲಿ ಒಂದೆಡೆ ಇರುವ ಮುದ್ದಾದ ಚಿಕ್ಕ ಮಾರುತಿ ಶಿಲ್ಪವನ್ನು ನೋಡಲು ಮರೆಯದಿರಿ.

ಮುಚ್ಚಿಗೆ ಮಾಡು

ಇತರೆಡೆಗಳಲ್ಲಿನ 'ಮಾಡು'ವಿನ ಸ್ವರೂಪಕ್ಕಿಂತ ಕೆಳದಿ-ಇಕ್ಕೇರಿ ದೇವಾಲಯದ 'ಮಾಡು'ವಿನ ಸ್ವರೂಪವೇ ವಿಭಿನ್ನವಾದುದು. ಕಟ್ಟಡದ ಮೇಲ್ಭಾಗದಲ್ಲಿ ಚಪ್ಪಟೆಯಾದ 'ಮಾಡಿ'ರುವ ನಿದರ್ಶನಗಳೇ ಅಧಿಕ. ಕಂಬದಿಂದ ಕಂಬಕ್ಕೆ, ಕಂಬದಿಂದ ಮಗ್ಗಲು ಗೋಡೆಗೆ ದಪ್ಪಕಲ್ಲಿನ ಜಂತಿಗಳನ್ನು ಹಾಸಿ, ಅವುಗಳ ಮೇಲೆ ತಿರುಗಿ ಚಪ್ಪಡಿ ಕಲ್ಲುಗಳನ್ನು ಒತ್ತೊತ್ತಾಗಿ ಹೊದೆಸಿ ತಾರಸಿ 'ಮಾಡು'ಗಳನ್ನು ಜೋಡಿಸಿರುವುದು ಕಂಡುಬರುತ್ತದೆ. ದೇಗುಲಗಳ ಗರ್ಭಗುಡಿ, ಹಜಾರ, ನವರಂಗ, ಸಭಾಮಂಡಪ, ಮುಖಮಂಡಪಗಳ ವಿಸ್ತಾರಕ್ಕೆ ತಕ್ಕಂತೆ ಜಂತಿಗಳನ್ನು ಹಾಸಿ, ತಿರುಗಿ ಅವುಗಳ ಮೇಲೆ ಓರೆಜಂತಿಗಳನ್ನು ಇರಿಸಿ, ಅಲ್ಲಿನ ಮೂಲೆಗಳನ್ನು ಮುಚ್ಚುತ್ತ ಸರಿದು ಸೊಬಗಿನ ಮುಚ್ಚಿಗೆಗಳು ನಿರ್ಮಿಸಲ್ಪಟ್ಟಿವೆ. ಇವುಗಳು ಮಲೆನಾಡಿಗೆ ತಕ್ಕಂತೆ ಅಸಾಮಾನ್ಯ ಲಾಲಿತ್ಯ ಮತ್ತು ವೈಖರಿಗಳಿಂದ ತುಂಬಿವೆ.

ವಿಮಾನ

ಗರ್ಭಗೃಹದ ಗೋಪುರವು ತಳಪಾಯದಿಂದ ಸುಮಾರು ೬೦ ಅಡಿ ಎತ್ತರವಿದೆ. ವಿಮಾನ ಭಾಗದಲ್ಲಿ ವಿಶಾಲ ಆವರಣವುಳ್ಳ ಕೋಣೆಯೊಂದಿದೆ. ಮುಂಭಾಗದಲ್ಲಿ ವಿವಿಧ ಮೂರ್ತಿಗಳಿವೆ. ಶಿಖರದ ಅಂತ್ಯದೆಡೆಯಲ್ಲಿ ವೃತ್ತಾಕಾರವು ನಾಲ್ದೆಸೆಗಳಲ್ಲಿಯೂ ಕೀರ್ತಿಮುಖಗಳನ್ನೊಳಗೊಂಡಿದೆ. ಶಿಖರದಲ್ಲಿ ಲೋಹದ ಕಳಶವು ಶೋಭಿಸಿದೆ. ಇಲ್ಲಿದ್ದ ಸುವರ್ಣಕಳಶವೊಂದು ಘಟಕಳದಲ್ಲಿರುವುದಾಗಿ ಉಕ್ತವಾಗಿದೆ.

ನವರಂಗ ಹಾಗೂ ಮಂಡಪದ ಹೊರನೋಟ

ಬಾಹ್ಯಭಿತ್ತಿಯಲ್ಲಿ ವೈವಿಧ್ಯಮಯ ಕಲಾಕೃತಿಗಳು ವಿಜೃಂಭಿಸಿವೆ. ಕುಡ್ಯದ ಮೇಲೂ ಅಲ್ಪ ಉಬ್ಬಿದ ಶಿಲ್ಪಗಳ ಅಲಂಕರಣವಿದೆ. ಇಲ್ಲಿ ಆರು ಪಟ್ಟಿಕೆಗಳಿದ್ದು ಕೆಳಗಿನದರಲ್ಲಿ ಮಧ್ಯೆ ಮಧ್ಯೆ ಸಿಂಹ, ಕೋತಿ, ಹಂಸ, ಕಾಮಕೇಳಿಯ ಶಿಲ್ಪಗಳ ಸಾಲೂ, ಎರಡನೆಯದರಲ್ಲಿ ಕಂಬಗಳ ಮೇಲೆ ಎತ್ತಿರುವ ಗೋಪುರಗಳ ಸಾಲೂ ಇವೆ. ಮೇಲ್ಭಾಗದಲ್ಲಿ ಜಾಲಂಧ್ರಗಳ ಅಲಂಕರಣವಿದ್ದು ಇವುಗಳ ಮಧ್ಯೆ ಕಮಾನಿನಾಕೃತಿಯ ಕೋಷ್ಠಕಗಳಿವೆ. ಕೋಷ್ಠಕಗಳಲ್ಲಿ ಯಕ್ಷರು, ದಿಕ್ಪಾಲಕರು, ವಿಷ್ಣು, ಭೈರವ ಇತ್ಯಾದಿ ಶಿಲ್ಪಗಳಿವೆ. ಇದರ ಮೇಲೆ ಕಿನ್ನರಿಯರು, ಪುರುಷಾಮೃಗ, ಹುಲಿಯನ್ನೇರಿರುವ ಯೋಗಿ ಇತ್ಯಾದಿ ಶಿಲ್ಪಗಳ ಸಾಲೂ ೫ನೆಯ ಪಟ್ಟಿಕೆಯಲ್ಲಿ ಹೂಗಳೂ ೬ನೆಯದರಲ್ಲಿ ಎಲೆಯಾಕಾರದ ನಕಾಶೆಯ ಸಾಲೂ ಇವೆ. ದ್ವಾರಪಾಲಕರು ಸ್ವಾಗತಿಸಲು ತಮ್ಮದೇ ಆದ ಭಂಗಿಗಳಲ್ಲಿದ್ದಾರೆ. ಮಹಾದ್ವಾರದ ಮೇಲೆ ಇರುವ ಗಜಲಕ್ಷ್ಮಿಯು ದೇಗುಲದ ಸೌಭಾಗ್ಯವನ್ನು ಹೆಚ್ಚಿಸಿದೆ.

ಉಭಯ ಪಾರ್ಶ್ವಗಳಲ್ಲಿರುವ ಮನೋಹರ, ಸುಂದರ ಹಾಗೂ ಮುದ್ದಾದ ಆನೆಗಳು ಮನಮೋಹಕವಾಗಿ ಆಹ್ವಾನಿಸುತ್ತವೆ. ಶಿವಪ್ಪನಾಯಕನು ಭಾಗಾಯತಿನ ಅಡಕೆ ಮರದ ಪ್ರಮಾಣವನ್ನು ಸಿಸ್ತಿಗಳವಡಿಸಲು ಉಪಯೋಗಿಸಿಕೊಂಡಂತಿರುವ ಮೆಟ್ಟಿಲುಗಳು ವೈಶಿಷ್ಟ್ಯಪೂರ್ಣವಾಗಿವೆ.

ಕುಡ್ಯ ಹಾಗೂ ದೇವಾಲಯಗಳ ಮೇಲಿರುವ ನರ್ತಕರು, ವಾದ್ಯಗಾರರು ಮುಂತಾದ ಶಿಲ್ಪಗಳೂ ಸಮಕಾಲೀನ ಸಾಮಾಜಿಕ ಸ್ಥಿತಿಯ ಅಧ್ಯಯನದಲ್ಲಿ ಹೆಚ್ಚು ಬೆಳಕು ಚೆಲ್ಲುತ್ತವೆ.

ಪಾರ್ವತಿ ದೇವಾಲಯ

ಅಘೋರೇಶ್ವರದ ಪಶ್ಚಿಮಕ್ಕಿರುವ ಪಾರ್ವತೀಗುಡಿಯೂ ಮೇಲಿನದರ ಮಾದರಿಯಲ್ಲಿಯೇ ಇದೆ. ಆದರೆ ನವರಂಗದ ಬಾಗಿಲುವಾಡ ಮತ್ತು ಕಿಟಕಿಗಳಲ್ಲಿ ಚೂಪುತಲೆಯ ಕಮಾನುಗಳನ್ನು ಉಪಯೋಗಿಸಿರುವುದು ಇಲ್ಲಿಯ ವಿಶೇಷ. ಈ ಅಂಶವು ಭಾರತೀಯ ಇಸ್ಲಾಮಿಕ್ ವಾಸ್ತುಶೈಲಿಯಿಂದ ಪ್ರಭಾವಿತಗೊಂಡದ್ದಾಗಿರುವುದಾಗಿ ಕಂಡುಬರುತ್ತದೆ. ಹೊರಭಾಗದ ಸ್ತಂಭಗಳಲ್ಲಿ ಸಿಂಹ ಹಾಗೂ ಮುಸ್ಲಿಂ ಸವಾರರನ್ನೊಳಗೊಂಡ ಶಿಲ್ಪಗಳನ್ನು ಸೂಕ್ಷ್ಮವಾಗಿ ಪರಿವೀಕ್ಷಿಸಬಹುದಾಗಿದೆ. ನಾಗಬಂಧಗಳೊಂದಿಗೆ ಬೋದಿಗೆಗಳು ಸಮಪಾಟಾಗಿ ಜೋಡಿಸಲ್ಪಟ್ಟಿವೆ.

ಗರ್ಭಗುಡಿಯಲ್ಲಿ ಧ್ರುವಬೇರವು ಕಣ್ಮರೆಯಾಗಿದ್ದು ಇದಕ್ಕೆ ಬದಲಾಗಿ ಬೇರೊಂದು ಮೂರ್ತಿಯಿದೆ.

ನಂದಿ ಮಂಡಪ

ಅಘೋರೇಶ್ವರನ ಮುಂದಿನ ನಂದಿ ಮಂಡಪವು ಎತ್ತರವಾದ ಜಗತಿಯ ಮೇಲಿದ್ದು ಭಿತ್ತಿಯಲ್ಲಿ ಏಳು ಚೂಪುತಲೆಯ ಕಮಾನುಗಳನ್ನು ಒಳಗೊಂಡಿದೆ. ಕಮಾನುಗಳ ಮಧ್ಯದಲ್ಲಿ ಶಿಲ್ಪಗಳಿವೆ. ಇದರ ವಿನ್ಯಾಸ ಹಾಗೂ ನಿರ್ಮಾಣವು ರೈಸ್ ಹೇಳುವಂತೆ ಅಪೂರ್ವವಾದುದು. ಸುಮಾರು ೪′ ಎತ್ತರವಿರುವ ಜಗತಿಯಲ್ಲಿ ಚತುರಸ್ರಾಕಾರದ ದ್ರಾವಿಡ ಶೈಲಿಯ ಸ್ತಂಭಗಳು ಸಿಂಹಮುಖದೊಂದಿಗೆ ಚಾಚಿಕೊಂಡಿವೆ. ಕುಡ್ಯದಲ್ಲಿ ಡಮರುಗ ವಾದ್ಯಗಾರ, ನರ್ತಕರು, ದೂತರು, ಕಾಳಿಂಗಮರ್ದನ ಮುಂತಾದ ಅಪೂರ್ವ ಶಿಲ್ಪಗಳಿವೆ.

ಉದ್ದ ೧೧′ × ೧೦′ ಎತ್ತರವಿರುವ ನಂದಿಯು ಶೋಭಾಯಮಾನವಾಗಿ ವಿರಾಜಿಸುತ್ತಿದೆ. ಇದೊಂದು ಪ್ರದರ್ಶನಾಲಯದಂತೆ (Museum) ರಂಜಿಸಿದೆ.

ಇಕ್ಕೇರಿಯಲ್ಲಿನ ಮೂರ್ತಿಶಿಲ್ಪಗಳು

ನವರಂಗದ ಮೂಲೆಯೊಂದರಲ್ಲಿ ಸುಮಾರು ೭′ × ೪′ ಪ್ರಮಾಣವುಳ್ಳ ಸುಂದರ ಶಿಲ್ಪದ ಸ್ತ್ರೀ ಮೂರ್ತಿಯೊಂದಿದೆ. ಇದರ ಅಕ್ಕಪಕ್ಕಗಳಲ್ಲೂ ಎರಡು ಮೂರ್ತಿಗಳಿವೆ.

ಭಗ್ನಶಿಲ್ಪಗಳು

ಗುಡಿಗಳ ಆವರಣದಲ್ಲಿ ಎರಡು ಭಗ್ನಶಿಲ್ಪಗಳು ಮಹಾದ್ವಾರವನ್ನು ಪ್ರವೇಶಿಸಿದೊಡನೆಯೇ ಗೋಚರಿಸುತ್ತವೆ. ಮೂಲ ಧ್ರುವಬೇರವು ಕಣ್ಮರೆಯಾಗಿದ್ದು ಗರ್ಭಗುಡಿಯ ಪೀಠದಲ್ಲಿದ್ದ ಈ ಭಗ್ನ ಶಿಲ್ಪವನ್ನು ಇಲ್ಲಿ ತಂದಿರಿಸಿರುವುದಾಗಿ ತಿಳಿದುಬಂದಿದೆ. ಇದರ ಸೂಕ್ಷ್ಮ ಅವಲೋಕನೆಯಿಂದ ಮೂರ್ತಿಶಿಲ್ಪವನ್ನು ಪರಿಶೀಲಿಸಿದಲ್ಲಿ ಮಾನೋಪಮಾನದಿಂದ ಲಂಬಮಾನದವರೆಗೆ ಭಗ್ನಶಿಲ್ಪದ ಪ್ರಮಾಣದ ಅಸ್ತಿತ್ವವನ್ನು ಕಲ್ಪಿಸಿಕೊಂಡು ಉತ್ತಮ ದಶತಾಲವನ್ನು ಗುರ್ತಿಸಬಹುದಾಗಿದೆ. ಪಿಂಡಿಕೆಗೆ ಹೊಂದಿರುವ ವಾಸ್ತುಶಿಲ್ಪ ಲಕ್ಷಣಗಳೂ ಭಗ್ನಶಿಲ್ಪದಲ್ಲಿ ಗೋಚರಿಸುತ್ತವೆ. ಐತಿಹಾಸಿಕ ಆಧಾರಾಂಶಗಳು ಪಿಂಡಿಕೆಯಲ್ಲಿದ್ದ ಅಘೋರ ಮೂರ್ತಿಯ ಅಸ್ತಿತ್ವವನ್ನು ಬಲವಾಗಿ ಸಮರ್ಥಿಸುತ್ತವೆ. ಈಗ ಮೂರ್ತಿಗೆ ಬದಲಾಗಿ ಪಿಂಡಿಕೆಯ ಪ್ರಮಾಣಕ್ಕೆ ಸರಿದೂಗದ ಲಿಂಗವಿದೆ. ಇಲ್ಲಿರುವ ಕಂಚಿನ ಅಘೋರೇಶ್ವರ ಮೂರ್ತಿ ಹಾಗೂ ಕೆಳದಿಯಲ್ಲಿರುವ ಮರದ ಕೆತ್ತನೆಯ ಅಘೋರೇಶ್ವರ ಮೂರ್ತಿಗಳ ಎಲ್ಲ ಲಕ್ಷಣಗಳೂ ಧ್ರುವಬೇರದಲ್ಲಿತ್ತೆಂಬುದು ಸೂಕ್ಷ್ಮ ಅವಲೋಕನಗಳಿಂದ ವ್ಯಕ್ತಪಡುತ್ತದೆ. ಪ್ರಾಚ್ಯಸಂಶೋಧನೆಯ ಇತಿಹಾಸದಲ್ಲಿಯೇ ನೂತನ ಅಧ್ಯಾಯವೆನಿಸಿದ ಈ ಅಪೂರ್ವ ಸಂಶೋಧನೆಯನ್ನು 'ಇಕ್ಕೇರಿಯ ಐತಿಹಾಸಿಕ ಹಿನ್ನೆಲೆ' ಹಾಗೂ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ನನ್ನ ಲೇಖನಗಳಿಂದ ವಿದ್ವಾಂಸರು

ಹಾಗೂ ಮಹಾಜನತೆಯು ಮನಗಾಣಬಹುದಾಗಿದೆ. ಕ್ರಿ. ಶ. ೧೭ನೆಯ ಶತಮಾನದಲ್ಲಿ ಬಿಜಾಪುರದ ರಣದುಲ್ಲಾಖಾನನ ದಾಳಿಗೆ ಇಕ್ಕೇರಿಯು ತುತ್ತಾದಾಗ ಈ ಮೂಲಮೂರ್ತಿಗೂ ದುರ್ದೆಸೆ ಒದಗಿರಬಹುದಾಗಿದೆ. ಇದು ಅಪೂರ್ವ ಸಂಗತಿಯಾಗಿದ್ದು ಕುತೂಹಲಕರವಾಗಿದೆ. ಅಂತೆಯೇ ಪಕ್ಕದಲ್ಲಿರುವ ಮಗುದೊಂದು ಭಗ್ನಶಿಲ್ಪವೂ ಸ್ತ್ರೀ ಮೂರ್ತಿಗೆ ಸರಿಸಮಾನವಾಗಿದ್ದು ಪಾರ್ವತೀ ದೇಗುಲದ ಧ್ರುವ ಬೇರದ ಅಸ್ತಿತ್ವವನ್ನು ಪ್ರತಿಬಿಂಬಿಸುತ್ತದೆ.

ಅಘೋರೇಶ್ವರ ಮೂರ್ತಿ

ಶಿಲ್ಪಕಲಾಸೌಂದರ್ಯದಿಂದ ಕೂಡಿದ ಈ ಚಳ್ಳಿಯರಕ್ಕೆ ೩೨ ಹಸ್ತಗಳಿದ್ದು ವಿವಿಧ ಮುದ್ರೆಗಳು ಕುತೂಹಲಾಸಕ್ತಿಯನ್ನುಂಟುಮಾಡುತ್ತವೆ. ಸುಂದರವಾದ ಈ ಮೂರ್ತಿಯನ್ನು ಇಟಲಿ ಪ್ರವಾಸಿ ಪಿಯತ್ರೋ ದೆಲ್ಲಾವಾಲ್ಲೆಯು 'ಅಘೋರ್ ಹೌರಾ' ಎಂಬುದಾಗಿ ವರ್ಣಿಸಿದ್ದಾನೆ. ಐತಿಹಾಸಿಕ ಮಹತ್ವವುಳ್ಳ ಅಪೂರ್ವವಾದ ಈ ಕಂಚಿನ ಮೂರ್ತಿಯು ಸಂಗ್ರಹಯೋಗ್ಯವಾದುದು ಹಾಗೂ ಜತನದಿಂದ ಕಾಪಿಡುವುದೂ ಅಷ್ಟೇ ಸೂಕ್ತವಾದುದು. ಇದರ ಹಿಂಭಾಗದಲ್ಲಿ 'ಯಿಾ ಯಿಕ್ಕೇರಿ ಅಘೋರೇಶ್ವರನ ಪ್ರಭಾವಳಿ (ಪಿಠ) ಸೇ ೧ '೧೧' ಎಂಬ ಕನ್ನಡ ಶಾಸನವಿದೆ.

ರೂವಾರಿಗಳು

ಇಕ್ಕೇರಿ ದೇಗುಲದ ನವರಂಗದ ಬಾಹ್ಯದ ಮೂಲೆಯೊಂದರಲ್ಲಿ 'ಯಿಾ ಮಂಟಪದ ಕೆಲಸವ ಗೆಯಿದ ಆಚಾರಿ ಹೊಂಬುಜದ ವೆಂಕಟ್ಟೆಯನೂ' ಎಂಬ ಶಿಲಾ ಶಾಸನವು ವಿಜಯನಗರಕಾಲದ ಶೈಲಿಯಲ್ಲಿರುವುದರಿಂದ ನವರಂಗ ಮಂಡಪವು ಹೊಂಬುಜದ ಆಚಾರಿ ವೆಂಕಟ್ಟೆಯನ ನೇತೃತ್ವದಲ್ಲಿ ಸೂತ್ರಗ್ರಾಹಿಗಳಿಂದ ರಚಿಸಿರಬಹುದಾಗಿದೆ. ಅನೇಕ ಸ್ಥಪತಿಗಳೂ, ರೂವಾರಿಗಳೂ ಹಾಗೂ ಸೂತ್ರಗ್ರಾಹಿಗಳೂ ಹಂಪೆಯಲ್ಲಿ ನೆಲೆಸಿದ್ದರೆಂದು ವಿದ್ವಾಂಸರ ಅಭಿಮತ. ಮೈಸೂರು ಅರಸರ ವಸ್ತುಸಂಗ್ರಹಾಲಯದಲ್ಲಿ ಕೆಳದಿ ರಾಣಿಯ ಕಲ್ಲಿನ ಮಂಚವೊಂದರ ಶೋಧನೆಯಲ್ಲಿ ನಾನು ನಿರತನಾಗಿದ್ದಾಗ ಅಲ್ಲಿರುವ ಶಾಸನವೊಂದು ನನಗೆ ಆಸಕ್ತಿಯನ್ನು ಕೆರಳಿಸಿತು. ಇಕ್ಕೇರಿ ದೇಗುಲದಲ್ಲಿರುವ ಭಕ್ತವಿಗ್ರಹದ ಲಿಪಿಯಲ್ಲಿ ಕಂಡುಬಂದ 'ಚಿಳಿಗಿ ಗಿರಿಯಂ'ನಿಗೂ ಕಲ್ಲಿನ ಮಂಚದಲ್ಲಿರುವ 'ಚಿಳಿಗಿಯ ಕಲುಕುಟಿಕ ಕರಿಪಿರಣ್ಣ' ನಿಗೂ ಸಂಬಂಧವಿದೆಯೇ ಎಂಬ ಸಂದೇಹವು ಕಾಡುತ್ತಿದೆ. ಅಘೋರೇಶ್ವರ ದೇಗುಲದ ಪೂರ್ವಭಾಗದ ಮೆಟ್ಟಿಲೊಂದರಲ್ಲಿ '೧೦ ಪದ್ಮ' ಎಂಬ ಲಿಪಿಯಿದೆ. ದೇಗುಲ ನಿರ್ಮಾಣಕ್ಕೆ ೧೦ ಪದ್ಮ ವೆಚ್ಚವಾಗಿರುವುದಾಗಿ ಹೇಳಿಕೆಯುಂಟು. ರಾಜಾದಿತ್ಯನ ವ್ಯವಹಾರ ಗಣಿತದ ಪ್ರಕಾರ ೪೦ ಸ್ಥಾನ ಅಂಕಸಂಜ್ಞೆಗಳಲ್ಲಿ (place values) ಪದ್ಮವು ಏಕದಿಂದ ೧೫ನೆಯದಾಗುತ್ತದೆ. ಎಂದರೆ ಶತಕೋಟಿಯ ನಂತರ ೫ನೆಯದಾಗುತ್ತದೆ.

ಮರದ ಕೆತ್ತನೆಯ ಕಲಾಕೃತಿಗಳು

ಕೆಳದಿಯ ವಾಸ್ತು ಹಾಗೂ ಶಿಲ್ಪಕಲಾಶಾಲೆಯಲ್ಲಿ ಮರದ ಕೆತ್ತನೆಯ ಕಲಾ ಕೌಶಲ್ಯಗಳೂ ಪ್ರಾಮುಖ್ಯವಾದುದು. ಕೆಳದಿ ದೇಗುಲದಲ್ಲಿರುವ ಎಡ-ಬಲ ಮುಖಾರಿಗಳ ಬೃಹತ್ ಮರದ ಬೊಂಬೆಗಳೂ ಇವುಗಳೊಂದಿಗಿರುವ ಸ್ತ್ರೀ ಮೂರ್ತಿ ಹಾಗೂ ಪ್ರಾಣಿಗಳೂ ಚಂದನದ ಕೆತ್ತನೆಗಳೂ ಮನಸ್ಸನ್ನು ಸೂರೆಗೊಳ್ಳುತ್ತವೆ.

ವಾಸ್ತುನಿರೂಪಣೆಯ ಮೇರೆಗೆ ಮರದಿಂದ ರೂಪಿಸಿದ ಶಿಲ್ಪ ವೈವಿಧ್ಯತೆಯುಳ್ಳ ಸ್ತಂಭಗಳೂ, ಬೋದಿಗೆಗಳೂ ಕಲಾಕೃತಿಗಳ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ. ಪಾರ್ವತೀ ದೇವಾಲಯದ ಮೇಲ್ಛಾವಣಿಯಲ್ಲಿ ಕಂಡುಬರುವ ವೈವಿಧ್ಯಮಯ ರಂಗೋಲಿ ಹಾಗೂ ಪದ್ಮ ಚಿತ್ರಗಳೂ, ಛಾವಣಿಯ ನಾಲ್ದೆಸೆಯ ಸಾಲಿನಲ್ಲಿಯೂ ಕಂಡುಬರುವ ಮೂರ್ತಿಶಿಲ್ಪಗಳೂ ಕಲಾರಂಗದಲ್ಲಿ ಉಚ್ಛ್ರಾಯದ ಶ್ರೇಣಿಯನ್ನು ಪಡೆದಿವೆ.

ಪಾರ್ವತೀ ದೇವಾಲಯದ ಚಾವಣಿಯ ಮೇಲ್ಭಾಗದಲ್ಲಿ ಈ ಕೆಳಕಂಡಂತೆ ಕಲಾಕೃತಿಗಳಿವೆ.

ಮೊದಲನೇ ಅಂಕಣ:

೧ನೇ ಸಾಲು—ನಂದಿ, ವೀರಭದ್ರ, ತುಂಬುರನಾರದ, ಅಘೋರೇಶ್ವರ, ರಾಮೇಶ್ವರ, ಚಂದ್ರಮೌಳೇಶ್ವರ, ಕೊರವಂಜಿ.

೨ನೇ ಸಾಲು—ದತ್ತಾತ್ರೇಯ, ಅಗ್ನಿ, ನಟರಾಜ, ದಕ್ಷಾಧಿಪತಿ, ವೀರಭದ್ರ, ವೆಂಕಟರಮಣ, ಕಾಳಿಂಗ ಮರ್ದನ, ವೇಣುಗೋಪಾಲ, ನರ್ತಕಿ.

೩ನೇ ಸಾಲು—ಮಹಿಷಾಸುರಮರ್ದಿನಿ, ನಗಾರಿ, ಪುಂಗಿ, ಮೃದಂಗ, ವೀಣ, ನರ್ತನ, ತಾಳ, ಪಿಟೀಲು, ಗಜಾಸುರ ಸಂಹಾರ, ತಂಬೂರಿ.

೪ನೇ ಸಾಲು—ಶಿವಪಾರ್ವತಿ, ಕಾಲಭೈರವ, ಲಕ್ಷ್ಮಣ–ರಾಮ-ಮಾರುತಿ, ಗಣೇಶ, ವೆಂಕಟರಮಣ, ಭೃಂಗಿ

ಎರಡನೇ ಅಂಕಣ:

ಇಂದ್ರ, ಅಗ್ನಿ, ಯಮ, ನೈರುತ್ಯ, ವರುಣ, ವಾಯುವ್ಯ, ಕುಬೇರ, ಈಶಾನ್ಯ.

ಇತ್ಯಾದಿ ಕಲಾಸೌರಭಗಳಿವೆ. ದಬ್ಲಿನ್ ಕಾಲೇಜಿನ ಪ್ರೊ. ಮಾಟೆರವರು ಇವುಗಳ ಅಧ್ಯಯನಕ್ಕೆ ಬರುವವರಿದ್ದಾರೆ. ಕೆಳದಿಯ ಬ್ರಹ್ಮರಥವೊಂದು ಅಗ್ನಿಗಾಹುತಿಯಾಗಿ ಕಲಾ ಪ್ರಪಂಚಕ್ಕೆ ಅಪಾರ ನಷ್ಟವಾಗಿರುವುದು ಸರ್ವವೇದ್ಯ.

ದಿ ೯–೧೧–೧೬೨೩ರಲ್ಲಿ ಇಟಲಿ ಪ್ರವಾಸಿ ಪಿಯತ್ರೋ ಡೆಲ್ಲಾವಾಲ್ಲೆಯು ಕಲಾಸೌರಭದಿಂದ ಕೂಡಿದ್ದ ಇಕ್ಕೇರಿಯ ಬ್ರಹ್ಮರಥವೊಂದನ್ನು ಹೀಗೆ ವರ್ಣಿಸಿದ್ದಾನೆ. ಅದರ ಸಾರಾಂಶ:

> "...ಪಕ್ಕದಲ್ಲಿಯೇ ಇದ್ದ ದೇವಸ್ಥಾನದ ಆವಾರದಲ್ಲಿ ಬೃಹದಾಕಾರದ ರಥವೊಂದನ್ನು ನೋಡಿದೆ. ಕೆಲವೊಂದು ಹಬ್ಬಗಳಲ್ಲಿ ತಮ್ಮ ದೇವತಾಮೂರ್ತಿಗಳನ್ನು ಇದರಲ್ಲಿರಿಸಿ ಜನರು ವೈಭವದ ಮೆರವಣಿಗೆಯನ್ನು ನಡೆಸುವುದುಂಟು, ಈ ರಥದಲ್ಲಿ ಬೇರೆ ಅನೇಕ ಜನರೂ ಕುಣಿಯುವ ಹೆಂಗಸರೂ ವಾದ್ಯ-ಕುಣಿತಗಳನ್ನು ಮಾಡುವರು. ರಥದ ನಾಲ್ಕು ಚಕ್ರಗಳಲ್ಲಿ ಪ್ರತಿಯೊಂದರ ವ್ಯಾಸ ೧೪ ಅಡಿಗಳಷ್ಟು ಇದ್ದು ಬದಿಯ ಹಲಗೆ ಒಂದಡಿ ದಪ್ಪವಾಗಿತ್ತು. ಹಲಗೆಯ ಅಕ್ಕಪಕ್ಕದಲ್ಲಿ ಸ್ತ್ರೀ-ಪುರುಷ ಮೂರ್ತಿಗಳಿದ್ದುವು. ರಥವು ಬಹಳ ಎತ್ತರವಾಗಿದ್ದು, ಸಾಕಷ್ಟು ಜನ ಹಿಡಿಸುವಷ್ಟು ಪ್ರಶಸ್ತವಾಗಿತ್ತು. ಒಟ್ಟಿನಲ್ಲಿ ಹೇಳುವುದಾದರೆ ರೋಂ ಪಟ್ಟಣದಲ್ಲಾದರೆ ಅತಿ ವಿಶಾಲ ಮಾರ್ಗಗಳಲ್ಲಿ ಮಾತ್ರ ಈ ರಥ ಹಾಯ್ದಾಡಲು ಅವಕಾಶವಿದೆ..."

೨೫೫ ವರ್ಷದ ಹಿಂದಿನ ಇಂತಹ ರಥದ ಹಾಗೂ ಕಲಾಕೃತಿಗಳ ವೈಭವವನ್ನು ಊಹಿಸಿಕೊಳ್ಳಬಹುದಾಗಿದೆ. ಈಗ ಇದರ ಅಲ್ಪಾವಶೇಷಗಳು ಮಾತ್ರ ಕಾಣಸಿಗುತ್ತವೆ.

ಸಾಗರ ಹಾಗೂ ಸೊರಬದ ಗುಡಿಗಾರರು ಈ ಪರಂಪರೆಯಿಂದಲೇ ಬಂದವರೆಂಬುದಾಗಿ ಪ್ರೊ. ಜಿ. ಎಸ್. ದೀಕ್ಷಿತರ ಅಭಿಪ್ರಾಯವಾಗಿದೆ.

ಉಪಸಂಹಾರ

ಕೆಳದಿ ನಾಯಕರು ಧಾರ್ಮಿಕ ಮತ್ತು ಲೌಕಿಕ ವಾಸ್ತುಶಿಲ್ಪದ ಅಭಿವೃದ್ಧಿಗೆ ಸಲ್ಲಿಸಿದ ಕೊಡುಗೆ ಸಾಮಾನ್ಯವಾದುದಲ್ಲ. ಕೆಳದಿ-ಇಕ್ಕೇರಿ ದೇವಾಲಯಗಳು ದಕ್ಷಿಣಭಾರತದ ಕರ್ನಾಟಕದ ವಾಸ್ತುಶಿಲ್ಪಕ್ಕೆ ಮಹತ್ವದ ಕಾಣಿಕೆ. ವಾಯುಗುಣ ಮತ್ತು ಭೌಗೋಲಿಕ ಪರಿಸರಕ್ಕನುಗುಣವಾಗಿ ವಾಸ್ತುಶಿಲ್ಪದಲ್ಲಿ ಅವಶ್ಯವೆನಿಸಿದ ಬದಲಾವಣೆಗಳನ್ನು ಈ ನಾಯಕರು ಕೈಗೊಂಡರು. ನವರಂಗವು ಸಾಮಾನ್ಯವಾಗಿ ಆಯತಕಾರವಾಗಿ (rectangular) ಇರುವಂತೆಯೇ ಇದೆ. ಅದು ಶಿಲಾ ಫಲಕಗಳಿಂದ ಆವೃತ

ವಾಗಿದೆ. ಈ ತರಹದ ರಚನೆಯು ಮಲೆನಾಡಿನಲ್ಲಿ ಮಳೆಗಾಲದ ರಕ್ಷಣೆಗೋಸುಗ. ಕಪೋತಪಾಳಿ ಮುಂತಾದುವು ಪರಾಮತ್ತ್ವ ನಿಯಮಕ್ಕನುಸಾರವಾಗಿ ಮಳೆನೀರು ಒಳಭಾಗದಲ್ಲಿ ಬರದಂತಾಗಿದೆ. ನವರಂಗದಲ್ಲಿ ಮೂರು ದ್ವಾರಗಳಿವೆ. ಕಟ್ಟಡದ ಮುಂಭಾಗದ ಕೆಳಗಡೆಯಲ್ಲಿ ಚಿಕ್ಕ ಪ್ರಮಾಣದ ಶಿಖರದ ವಿನ್ಯಾಸ ಅಲಂಕಾರವಿದೆ. ಅಲ್ಲಿಯ ಜಾಲಂಧ್ರಗಳಿಂದ ಒಳಗೆ ಬೆಳಕು ಬರುತ್ತದೆ. ಜಂಘವೂ ಸಹ ಹೂವಿನ ಮತ್ತು ವೃತ್ತಾಕೃತಿಗಳುಳ್ಳ ಚಿತ್ರಕೆಲಸಗಳಿಂದ ಅಲಂಕೃತವಾಗಿದೆ. ಚಜ್ಜಕ್ಕೆ ಆಧಾರ ವಾಗಿರುವ ಕಲ್ಲಿನ ತೊಲೆಯು ಮರಗೆಲಸದ ಮಾದರಿಯಲ್ಲಿದೆ. ಮಲೆನಾಡಿನಲ್ಲಿ ಇದು ಸಾಮಾನ್ಯ ರೂಢಿಯಲ್ಲಿರುವ ವೈಶಿಷ್ಟ್ಯ.

ಇಕ್ಕೇರಿ ದೇವಾಲಯದ ನಂದಿ. ಕೆಳದಿಯ ವೀರಭದ್ರ ದೇವಾಲಯದಲ್ಲಿ ಗಂಡಭೇರುಂಡವಿರುವ ಭುವನೇಶ್ವರಿ ಮುಂತಾದ ಶಿಲ್ಪಗಳು ಅಸದೃಶ ಕಲಾಕೃತಿಗಳು. ಕೆಳದಿ ಅರಸರ ಕಾಲದ ವಾಸ್ತುಶಿಲ್ಪ ವನ್ನು ಕುರಿತು ಸಶಾಸ್ತ್ರೀಯ ಹಾಗೂ ವೈಜ್ಞಾನಿಕ ರೀತಿಯಲ್ಲಿ ವಿಶೇಷ ಅಧ್ಯಯನ ಅಗತ್ಯವಾಗಿದೆ.

ಟಿ. ವಿ. ವೆಂಕಟಾಚಲ ಶಾಸ್ತ್ರೀ

ಭಾರತೀಯ ಜನಜೀವನ

(ಕ್ರಿ.ಶ. ೧೦ ನೆಯ ಶತಮಾನದವರೆಗೆ)

೧. ಷೋಡಶ ಮಹಾಜನಪದಗಳು

ಕ್ರಿಸ್ತಪೂರ್ವ ಆರನೆಯ ಶತಮಾನದ ಆದಿಯಲ್ಲಿ ಭರತಖಂಡವು ಹಲವು ಸ್ವತಂತ್ರವಾದ ಪ್ರಾಂತಗಳಾಗಿ ವಿಭಾಗವಾಗಿದ್ದುವಲ್ಲದೆ ಅತ್ಯುನ್ನತವಾದ ಏಕಾಧಿಪತ್ಯವೆಂಬುದಿರಲಿಲ್ಲ. ಬೌದ್ಧಧರ್ಮದ 'ಅಂಗುತ್ತರ ನಿಕಾಯ', 'ದೀಘನಿಕಾಯ', 'ಮಹಾವಸ್ತು' ಇಂತಹ ಗ್ರಂಥಗಳಲ್ಲಿ ಆ ಕಾಲದ ಮಹಾರಾಜ್ಯಗಳ ಉಲ್ಲೇಖಗಳು ಕಂಡುಬರುತ್ತವೆ. ಗೌತಮಬುದ್ಧನಿಗೆ ಸ್ವಲ್ಪ ಮೊದಲು ಅಸ್ತಿತ್ವದಲ್ಲಿದ್ದ ಅವನ್ನು ಗತಾನುಗತಿಕವಾಗಿ 'ಸೋಳಸ ಮಹಾಜನಪದಾ' ಎಂಬುದಾಗಿ ಹೆಸರಿಸಿದೆ. ಅವು ಯಾವುವು ಎಂದು ದನ್ನು 'ಅಂಗುತ್ತರನಿಕಾಯ'ದಲ್ಲಿ ಈ ಪ್ರಕಾರವಾಗಿ ಹೇಳಿದೆ: ಕಾಶಿ, ಕೋಸಲ, ಅಂಗ, ಮಗಧ, ವಜ್ಜಿ, ಮಲ್ಲ, ಚೇದಿ, ವತ್ಸ (ವಂಶ), ಕುರು, ಪಾಂಚಾಲ, ಮಚ್ಛ, (ಮತ್ಸ್ಯ) ಸೂರಸೇನ, ಅಸ್ಸಕ, ಅವಂತಿ, ಗಾಂಧಾರ, ಕಾಂಭೋಜ. 'ದೀಘನಿಕಾಯ'ದಲ್ಲಿ ಇದನ್ನು ಕಾಶಿ-ಕೋಸಲ, ವೃಜಿ-ಮಲ್ಲ ಎಂಬುದಾಗಿ ಜೋಡಿ ಜೋಡಿಯಾಗಿ ಹೇಳಿರುವುದೂ ಉಂಟು. ಈ ಜನಪದಗಳು ಗಾಂಧಾರದಿಂದ ಬಂಗಾಳದ ಗಡಿಗಳವರೆಗೆ ವ್ಯಾಪಿಸಿದ್ದವೆಂದು ಹೇಳಬಹುದು.

ಜೈನಧರ್ಮದ 'ಭಗವತೀಸೂತ್ರ'ದಲ್ಲಿ ಕೂಡ ೧೬ ರಾಜ್ಯಗಳ ಹೆಸರುಗಳು ಬರುತ್ತವೆ; ಆದರೆ ಇಲ್ಲಿಯ ಹೆಸರುಗಳು ಸ್ವಲ್ಪಮಟ್ಟಿಗೆ ಬೇರೆಯೇ ಆಗಿವೆ. ಪುರಾಣಗಳಲ್ಲಿಯ ಹೇಳಿಕೆಯಲ್ಲಿಯೂ ಗಮನಾರ್ಹ ವ್ಯತ್ಯಾಸಗಳಿವೆ. ಬೌದ್ಧ ಮತ್ತು ಜೈನ ಧರ್ಮಗಳ ಗ್ರಂಥಗಳಲ್ಲಿ ಹೇಳಿರುವ ವೃಜಿ (ವಜ್ಜಿ) ಮತ್ತು ಮಲ್ಲದೇಶಗಳು ಅವೈದಿಕ ಪಂಥಗಳ ನೆಲೆಯೆಂಬ ಕಾರಣದಿಂದ ಪುರಾಣಗಳಲ್ಲಿ ಲುಪ್ತವಾಗಿರು ವಂತೆ ತೋರುತ್ತದೆ. ಪುರಾಣಗಳಲ್ಲಿ ಈ ರಾಜ್ಯಗಳು ಸ್ವಯಮಾಡಳಿತ ಕೂಟಗಳಾಗಿದ್ದುವು ಎಂಬುದಕ್ಕೆ ಆಧಾರಗಳು ದೊರೆಯದಿದ್ದರೂ ಗೌತಮ ಬುದ್ಧನ ಕಾಲದಲ್ಲಿ ಆ ರೀತಿಯಿದ್ದುವೆಂಬುದಕ್ಕೆ ಬೌದ್ಧ ಗ್ರಂಥಗಳಲ್ಲಿ ಆಧಾರಗಳುಂಟು. ಕಪಿಲವಸ್ತುವಿನ ಶಾಕ್ಯರು ವೈಶಾಲಿಯ ಲಿಚ್ಛವಿಗಳು ಮಿಥಿಲೆಯ ವಿದೇಹರು ಮುಂತಾದವರ ಕೂಟಗಳನ್ನು ಇಲ್ಲಿ ನೆನೆಯಬಹುದು. ಪಾಣಿನಿಯ (ಕ್ರಿ.ಪೂ. ಸು. ೭೦೦) 'ಅಷ್ಟಾಧ್ಯಾಯಿ'ಯಲ್ಲಿ ಗಣರಾಜ್ಯಗಳಿಗೆ ಸಂಘ ಅಥವಾ ಗಣ ಎಂಬುದಾಗಿಯೂ. ಅರಸಾಳ್ವಿಕೆಯ ರಾಜ್ಯಗಳಿಗೆ 'ಜನಪದ' ಎಂಬುದಾಗಿಯೂ ಮಾತುಗಳನ್ನು ಬಳಸಲಾಗಿದೆ. ಗಾಂಧಾರ ಅವಂತಿ ಕೋಸಲ—ಈ ಮೊದಲಾದವನ್ನು ಪ್ರಾಚ್ಯಜನಪದಗಳೆನ್ನಲಾಗಿದೆ. ಬೌಧಾಯನ ಧರ್ಮಸೂತ್ರದಲ್ಲಿ ಸುರಾಷ್ಟ್ರ ಅವಂತಿ ಮೊದಲಾದ ರಾಜ್ಯಗಳನ್ನು ಕುರಿತಿದೆ. ಇಂತಹ ಅರಸಾಳ್ವಿಕೆಯಿಲ್ಲದ ಸ್ವಯಮಾಡಳಿತ ಕೂಟಗಳನ್ನು ಮೆಗಾಸ್ತನೀಸ್ ಕೌಟಿಲ್ಯರು ಸ್ಪಷ್ಟವಾಗಿಯೇ ಪ್ರಸ್ತಾಪಿಸಿದ್ದಾರೆ. ಅವುಗಳ ಉಲ್ಲೇಖ ಕ್ರಿ. ಶ. ನಾಲ್ಕನೆಯ ಶತಮಾನದ ಶಾಸನಗಳಲ್ಲಿಯೂ ಕಂಡುಬರುತ್ತದೆ.

ಕ್ರಿ. ಪೂ. ೬ನೆಯ ಶತಮಾನದ ಹೊತ್ತಿಗಾಗಲೇ ಪೂರ್ವೋಕ್ತವಾದ ೧೬ ರಾಜ್ಯಗಳಲ್ಲಿ ಕೆಲವು ತಮ್ಮ ಪ್ರಾಮುಖ್ಯವನ್ನು ಕಳೆದುಕೊಂಡು ಬಿಟ್ಟಿದ್ದುವು. ಕೆಲವು ಸ್ವಲ್ಪಕಾಲವಾದ ಮೇಲೆ ಪ್ರಬಲ

ವಾದವು. ವೇದಗಳ ಕಾಲದಿಂದೀಚೆಗೆ ಉತ್ತರಭಾರತದಲ್ಲಿ ಅಗ್ರಗಣ್ಯವಾಗಿದ್ದ ಕುರು ಪಾಂಚಾಲಗಳು ಈಗ ಅಷ್ಟು ಪ್ರಮುಖವಾಗಿರಲಿಲ್ಲ. ರಾಜಕೀಯವಾಗಿಯೂ ಸಾಂಸ್ಕೃತಿಕವಾಗಿಯೂ ಕಳೆದ ಶತಮಾನದಲ್ಲಿ ಕೇಂದ್ರಸ್ಥಾನದಲ್ಲಿ ಮೆರೆದಿದ್ದ ವಿದೇಹ ರಾಜ್ಯದ ಹೆಸರು ಈಗ ಅಷ್ಟಾಗಿ ಕೇಳಿ ಬರುತ್ತಿರಲಿಲ್ಲ. ಹೀಗಿದ್ದು ಕೂಡ ೧೬ ಮಹಾಜನಪದಗಳಲ್ಲಿ ಕೋಸಲ, ಮಗಧ, ವತ್ಸ, ವೃಜಿ, ಮಲ್ಲ ಮತ್ತು ಅವಂತಿ ಇವು ಪ್ರಬಲವಾಗಿದ್ದವೆಂದು ಬೌದ್ಧಸಾಹಿತ್ಯದಲ್ಲಿ ಅವುಗಳ ಬಗೆಗೆ ದೊರೆಯುವ ಹೆಚ್ಚಿನ ಮಾಹಿತಿಯಿಂದಾಗಿ ಹೇಳಬಹುದು. ಈ ರಾಜ್ಯಗಳವರು ಬುದ್ಧನೊಡನೆ ನೇರ ಹಾಗೂ ಹತ್ತಿರದ ಸಂಬಂಧವನ್ನು ಹೊಂದಿದ್ದಂತೆ ತೋರುತ್ತದೆ. ಆತನು ಈ ನಗರಗಳಿಗೆ ಹಲವು ಬಾರಿ ಭೇಟಿಯಿತ್ತು ಧರ್ಮಪ್ರಸಾರವನ್ನು ಯಶಸ್ವಿಯಾಗಿ ಕೈಕೊಂಡಂತೆ ಕಂಡುಬರುತ್ತದೆ.

ಷೋಡಶ ಮಹಾಜನಪದಗಳಲ್ಲಿ ಮಗಧ ರಾಜ್ಯದ ಚರಿತ್ರೆಯು ಹೊರತಾಗಿ ಇತರ ರಾಜ್ಯಗಳ ವಿಚಾರವಾಗಿ ಹೆಚ್ಚಿನ ಮಾಹಿತಿ ಒಂದು ಸಮಂಜಸವಾದ ಕ್ರಮದಲ್ಲಿ ಪೂರ್ವೋಕ್ತ ಆಧಾರಗ್ರಂಥಗಳಲ್ಲಿ ದೊರೆಯುವುದಿಲ್ಲ. ದೊರೆಯುವ ಮಟ್ಟಿಗೆ ಆ ಕಾಲದ ಭಾರತೀಯ ಜನಜೀವನದ ಸ್ಥಿತಿಗತಿಗಳನ್ನು ಇಲ್ಲಿ ಸಂಕ್ಷೇಪವಾಗಿ ನಿರೂಪಿಸಬಹುದು. ಅಂಗರಾಜ್ಯವು (ಇಂದಿನ ಭಾಗಲ್ಪುರ, ಮಾಂಘೈರ್ ಜಿಲ್ಲೆಗಳ ಪ್ರದೇಶ) ವ್ಯಾಪಾರ ವಾಣಿಜ್ಯಗಳ ಪ್ರಮುಖ ಕೇಂದ್ರವಾಗಿದ್ದು, ಅಲ್ಲಿಯ ವ್ಯಾಪಾರಿಗಳು ದೂರದ ಸುವರ್ಣಭೂಮಿಗೆ ಸಾಂಯಾತ್ರಿಕರಾಗಿ ಹೋಗುತ್ತಿದ್ದರು. ಉತ್ತರ ದಕ್ಷಿಣಗಳಲ್ಲಿ ವರುಣಾ ಮತ್ತು ಅಸಿಗಳೆಂಬ ನದಿಗಳು ಹರಿಯುತ್ತಿದ್ದ ಕಾಶೀರಾಜ್ಯವು ಕೂಡ ಸಂಪದ್ಭರಿತವೂ ಸಮೃದ್ಧವೂ ಆಗಿದ್ದಿತು. ಕೋಸಲರಾಜ್ಯವು (ಇಂದಿನ ಔಧ್) ಬುದ್ಧನ ಸಮಕಾಲೀನನಾಗಿದ್ದ ಪ್ರಸೇನಜಿತ್ ಎಂಬ ದೊರೆಯ ಸಂಬಂಧದಿಂದಾಗಿ ಬೌದ್ಧಧರ್ಮದ ಇತಿಹಾಸದಲ್ಲಿ ಗಣನೆಗೆ ಬರತಕ್ಕದ್ದಾಗಿದೆ. ಬೌದ್ಧ ಗ್ರಂಥಗಳಲ್ಲಿ ಬುದ್ಧನಿಗೂ ಪ್ರಸೇನಜಿತ್ತುವಿಗೂ ನಡೆದ ಹಲವು ಸಂದರ್ಶನ ಸಂವಾದಗಳನ್ನು ಉಲ್ಲೇಖಿಸಿದೆ. ಪ್ರಸೇನಜಿತ್ತುವಿನ ಮಗನು ಬುದ್ಧನಂತಹ ಮಹಾಪುರುಷನು ಜನಿಸಿದ ಶಾಕ್ಯಕುಲಕ್ಕೆ ಮೃತ್ಯುಸ್ವರೂಪನಾಗಿ ಪರಿಣಮಿಸಿದ್ದು, ನಿಜವಾಗಿ ಆ ಕುಲಕ್ಕೆ ಅದು ಕೊನೆಗಾಲವೇ ಆಯಿತೆನ್ನಬಹುದು. ಹಲವು ಜನವರ್ಗಗಳ ರಾಜ್ಯವಾಗಿದ್ದ ವೃಜಿಯಲ್ಲಿ ಪ್ರಸಿದ್ಧರಾಗಿದ್ದವರೆಂದರೆ ಲಿಚ್ಛವಿಗಳು ಮತ್ತು ವಿದೇಹದವರು. ರಾಜರ್ಷಿಯಾದ ಜನಕನ ಕಾಲದಲ್ಲಿ ವಿದೇಹವು ಪ್ರಖ್ಯಾತವಾಗಿದ್ದು, ಅದರ ರಾಜಧಾನಿ ಮಿಥಿಲೆ ರಾಜಕೀಯ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದ್ದಿತು. ಸಮಸ್ತ ವೃಜಿ ರಾಜ್ಯಕೂಟದ ಕೇಂದ್ರವಾಗಿದ್ದ ವೈಶಾಲಿ ನಗರವನ್ನು (ಉತ್ತರ ಬಿಹಾರಿನ ಮುಜಫರ್‌ಪುರ ಜಿಲ್ಲೆಯ ಇಂದಿನ ಬಸಾರ್ಹ್) ರಾಮಾಯಣದಲ್ಲಿ 'ವಿಶಾಲಾ' ಎಂಬ ಹೆಸರಿನಿಂದ ಕರೆದು ಅದನ್ನು ಉತ್ತಮಪುರಿಯೆಂದು ಹೊಗಳಿದೆ. ವೈಶಾಲಿಯು ಉನ್ನತ ಸೌಧಗಳು ಕಮಲಸರೋವರಗಳು ಮೊದಲಾದವುಗಳಿಂದ ಕೂಡಿದ್ದಿತು. ನಗರದ ಸುತ್ತ ಮೂರು ಪ್ರಾಕಾರಗಳು ಒಂದೊಂದು ಗಾವುದದ ಅಂತರದಲ್ಲಿ ನಿರ್ಮಿತವಾಗಿದ್ದುವು. ಒಂದೊಂದರಲ್ಲಿಯೂ ದ್ವಾರಗಳೂ ಕಾವಲುಗೋಪುರಗಳೂ ಇರುತ್ತಿದ್ದುವು. ಬೌದ್ಧಧರ್ಮದ ಉದಯಕಾಲದಲ್ಲಿ ಮಲ್ಲರಾಜ್ಯಕೂಟದ ಕುಶಿನಾರಾ ಮತ್ತು ಪಾವಾ ಈಯೆರಡು ಕೇಂದ್ರಗಳು ಬಹು ಪ್ರಮುಖವಾಗಿದ್ದುವೆಂದು ತಿಳಿಯುತ್ತದೆ. (ಇವುಗಳಲ್ಲಿ ಮೊದಲನೆಯದು ಗೋರಖ್‌ಪುರದ ಪೂರ್ವಕ್ಕೆ ೩೫ ಮೈಲಿಗಳ ಅಂತರದಲ್ಲಿರುವ ಇಂದಿನ ಕಾಸಿಯಾ ಎಂಬ ಸ್ಥಳ; ಎರಡನೆಯದು ಈ ಸ್ಥಳಕ್ಕೆ ೧೨ ಮೈಲಿ ದೂರದಲ್ಲಿರುವ ಪಡರಾವ್ನಾ ಎಂಬ ಗ್ರಾಮ). ಮಲ್ಲರನ್ನು ಮನು ವ್ರಾತ್ಯಕ್ಷತ್ರಿಯರೆಂದು ಕರೆದಿದ್ದಾನೆ; ಬೌದ್ಧ ಗ್ರಂಥದಲ್ಲಿ ವಾಶಿಷ್ಠರೆಂದಿದೆ. ಇವರ ಮುಖ್ಯ ಪಂಗಡಗಳೆರಡು ಬುದ್ಧನ ಮೃತಿಯ ಬಳಿಕ ಆತನ ದೇಹದ ಅವಶೇಷಗಳಿಗಾಗಿ ಭಾಗವನ್ನು ಬಯಸಿದಂತೆ ತಿಳಿಯುತ್ತದೆ. ಇವರಲ್ಲಿ ಹಲವರು ಬೌದ್ಧ ಮತ್ತು ಜೈನ ಮತಗಳೆರಡಕ್ಕೂ ಅನುಯಾಯಿಗಳಾಗಿದ್ದರು. ಚೇದಿಗಳ ಒಂದು ಶಾಖೆ ಕಲಿಂಗ ರಾಜ್ಯದಲ್ಲಿ ಒಂದು ಅರಸುಮನೆತನವನ್ನು ನೆಲೆಗೊಳಿಸಿದ್ದು ಆ ರಾಜ್ಯದ ಚರಿತ್ರೆಯಲ್ಲಿ ಗಮನಿಸತಕ್ಕ ವಿಷಯ. ಕೌಶಾಂಬಿಯು ರಾಜಧಾನಿಯಾಗಿದ್ದ ವತ್ಸದೇಶವು ಅತ್ಯಂತ ಸಂಪದ್ಭರಿತವೂ ಸಮೃದ್ಧವೂ ಆಗಿದ್ದಿತು. ಉಚ್ಚ ಶ್ರೇಣಿಯ ಹತ್ತಿಯ ತಯಾರಿಕೆಗೆ ಹೆಸರುವಾಸಿಯಾಗಿದ್ದಿತು. ಬುದ್ಧನ ಸಮಕಾಲೀನನಾಗಿದ್ದ ಉದಯನನೆಂಬ ರಾಜನೇ ಭಾಸನ 'ಸ್ವಪ್ನವಾಸದತ್ತಾ', ಹರ್ಷನ 'ಪ್ರಿಯದರ್ಶಿಕಾ,' 'ರತ್ನಾವಳಿ'—ಈ ನಾಟಕಗಳ ನಾಯಕವ್ಯಕ್ತಿ. ಕಾಳಿದಾಸನ ಕಾಲದಲ್ಲಿಯೂ ಅವಂತಿಯಲ್ಲಿ ಈತನ ಬಗೆಗೆ

ಕೆಲವು ಕಥೆಗಳು ಪ್ರಚಲಿತವಿದ್ದವು. ಮೊದಲು ಬೌದ್ಧಮತದ ಬಗೆಗೆ ಅಸಹನೆಯಿಂದಿದ್ದ ಈತನು ಕಾಲಕ್ರಮದಲ್ಲಿ ಬೌದ್ಧಮತದ ಅನುಯಾಯಿಯಾದಂತೆ ತಿಳಿಯುತ್ತದೆ. ಕೌಶಾಂಬಿಯು ಆ ಕಾಲದ ಆರು ಭಾರತೀಯ ಮಹಾನಗರಗಳಲ್ಲಿ ಒಂದಾಗಿದ್ದಿತು. ವ್ಯಾಪಾರ ವಾಣಿಜ್ಯಗಳಿಗೆ ಸಾರಿಗೆ ಸಂಪರ್ಕಗಳಿಗೆ ಅನುಕೂಲಕರ ಕೇಂದ್ರವಾಗಿದ್ದಿತು. ಪ್ರಖ್ಯಾತಿಯಲ್ಲಿ ಇದನ್ನು ಅಂದಿನ ತಕ್ಷಶಿಲೆ, ಶ್ರಾವಸ್ತಿ, ವಾರಣಾಸಿ, ರಾಜಗೃಹ, ವೈಶಾಲಿ ಈ ನಗರಗಳೊಡನೆ ಹೋಲಿಸಬಹುದು. ಸಿರಿವಂತ ವ್ಯಾಪಾರಿಯೂ ಸಾಮಾನ್ಯ ವ್ಯಾಪಾರಿಯೂ ನಗರದಲ್ಲಿ ಒಟ್ಟಿಗೆ ಇರುತ್ತಿದ್ದರು. ಆ ನಗರಕ್ಕೆ ದಕ್ಷಿಣದಿಂದಲೂ ಪಶ್ಚಿಮದಿಂದಲೂ ಪದಾರ್ಥಗಳೂ ಪ್ರಯಾಣಿಕರೂ ಪ್ರವಾಹವಾಗಿ ಹರಿದುಬರುತ್ತಿದ್ದುದನ್ನು ಸುತ್ತನಿಪಾತದಲ್ಲಿ ಉಲ್ಲೇಖಿಸಿದೆ. ಬುದ್ಧನ ಕಾಲದಲ್ಲಿ ಕುರುದೇಶವು ತನ್ನ ರಾಜಕೀಯ ಪ್ರಾಮುಖ್ಯವನ್ನು ಕಳೆದುಕೊಂಡಿದ್ದಿತು. ಕುರುಗಳಲ್ಲಿ ಮೊದಲು ಅರಸಾಳ್ವಿಕೆಯ ಪದ್ಧತಿಯಿದ್ದು ಬಳಿಕ ಗಣತಂತ್ರರಾಜ್ಯಪದ್ಧತಿ ರೂಢಿಗೆ ಬಂದಿತು. ಈ ಜನರು ತಮ್ಮ ಅಗಾಧ ಪ್ರಜ್ಞಾವಂತಿಕೆ ಶರೀರಸ್ವಾಸ್ಥ್ಯಗಳಿಗೆ ಹೆಸರಾಗಿದ್ದರು. ಮೊದಲು ಅರಸೊತ್ತಿಗೆಯ ರಾಜ್ಯವಾಗಿದ್ದು ಕ್ರಿ. ಪೂ. ೬–೫ನೆಯ ಶತಮಾನಗಳಲ್ಲಿ ಗಣತಂತ್ರ 'ಸಂಘ' ವೆನಿಸಿದ ಪಾಂಚಾಲರಾಜ್ಯ ಪ್ರಾಚೀನ ಕಾಲದಿಂದಲೇ ಉತ್ತರ ದಕ್ಷಿಣ ಪಾಂಚಾಲಗಳಾಗಿ ವಿಭಾಗವಾಗಿದ್ದಿತು. ಬುದ್ಧನ ಕಾಲದಲ್ಲಿ ಮತ್ಸ್ಯರಾಜ್ಯಕ್ಕೆ ಕುರುರಾಜ್ಯದ ವಿಷಯದಲ್ಲಿ ನೋಡಿರುವಂತೆಯೇ ಯಾವ ರಾಜಕೀಯ ಪ್ರಾಮುಖ್ಯವೂ ಇರಲಿಲ್ಲ. ಈಚೆಗೆ ವಿಶಾಖಪಟ್ಟಣದ ಪ್ರದೇಶದಲ್ಲಿ ಮತ್ಸ್ಯರ ಒಂದು ಶಾಖೆ ಕಂಡುಬಂದಿದೆಯೆಂಬುದು ಚರಿತ್ರೆಯ ದೃಷ್ಟಿಯಿಂದ ಗಮನಿಸತಕ್ಕ ಸಂಗತಿ. ಶೂರಸೇನರಾಜ್ಯವು ಗ್ರೀಕ್ ಲೇಖಕರಿಂದಲೂ ಉಲ್ಲೇಖನಗೊಂಡಿದೆ. ಶೂರಸೇನ ರಾಜನಾದ ಅವಂತಿಪುತ್ರನು ಬುದ್ಧನ ಮುಖ್ಯ ಶಿಷ್ಯರಲ್ಲಿ ಮೊದಲಿಗನೆಂಬುದು ಗಮನಾರ್ಹವಾಗಿದೆ. ಈತನ ಪ್ರೋತ್ಸಾಹದಿಂದ ಮಥುರಾ ಪ್ರಾಂತದಲ್ಲಿ ಬೌದ್ಧಧರ್ಮವು ಆಶ್ರಯವನ್ನು ಪಡೆಯಿತು. ಆದರೆ ಮೆಗಾಸ್ತನೀಸನ ಕಾಲಕ್ಕೆ ಮಥುರೆ ಕೃಷ್ಣಪೂಜೆಯ ಸ್ಥಾನವಾಗಿ ಮಗಧರಾಜ್ಯದ ಭಾಗವಾಯಿತು. ಅಶ್ವಕ, ಅಶ್ಮಕ, ಅಸ್ಸಕ ಎಂಬ ಹೆಸರುಗಳಿಂದ ಕರೆಯಲ್ಪಟ್ಟಿರುವ ಅಸ್ಸಕರಾಜ್ಯವು ಬೌದ್ಧ ಗ್ರಂಥಗಳಲ್ಲಿ ಮಹಾಜನಪದವೆಂದು ಖ್ಯಾತವಾಗಿದೆ. ಅದು ಬೌದ್ಧಗ್ರಂಥಗಳ ಪ್ರಕಾರ ಆಂಧ್ರವೆಂದೂ ಅರ್ಥಶಾಸ್ತ್ರದ ಟೀಕಾಕಾರ ಭಟ್ಟಸ್ವಾಮಿಯ ಪ್ರಕಾರ ಮಹಾರಾಷ್ಟ್ರವೆಂದೂ ತಿಳಿಯುವುದು. ಕೋಸಲ ವತ್ಸ ಮಗಧ ರಾಜ್ಯಗಳನ್ನು ಬಿಟ್ಟರೆ ನಾಲ್ಕನೆಯ ಮಹಾರಾಜ್ಯವಾಗಿದ್ದ ಅವಂತಿಯು ಬೌದ್ಧ ಧರ್ಮೋದಯದ ಕಾಲದಲ್ಲಿ ಏಳಿಗೆಯಲ್ಲಿದ್ದಿತು. ಚರಿತ್ರೆಯಲ್ಲಿಯೂ ಸಾಹಿತ್ಯದಲ್ಲಿಯೂ ಪ್ರಖ್ಯಾತವಾಗಿರುವ ಉಜ್ಜಯಿನಿ ಮಾಹಿಷ್ಮತಿ ವಿದಿಶೆ ದಶಾರ್ಣ—ಮೊದಲಾದವು ಈ ರಾಜ್ಯದ ಪ್ರಸಿದ್ಧ ನಗರಗಳು. ಉಜ್ಜಯಿನಿಯು ಬೌದ್ಧಧರ್ಮದ ಒಂದು ಮುಖ್ಯ ಸ್ಥಾನವೆನಿಸಿದ್ದು ಪ್ರಮುಖ ಥೇರ ಅಥವಾ ಥೇರಿಗಳು ಇಲ್ಲಿಯೇ ಹುಟ್ಟಿದರು ಅಥವಾ ನೆಲಸಿದರು ಎಂಬುದು ಆ ಧರ್ಮದ ಚರಿತ್ರೆಯ ದೃಷ್ಟಿಯಿಂದ ಗಮನಾರ್ಹವಾಗಿದೆ. ಗಾಂಧಾರ ಅಥವಾ ಗಂಧರ್ವ ವಿಷಯದ ರಾಜಧಾನಿಯಾದ ತಕ್ಷಶಿಲೆ ವ್ಯಾಪಾರ ಕೇಂದ್ರವೂ ವಿದ್ಯೆಯ ಪ್ರಾಚೀನ ಪೀಠವೂ ಆಗಿ ವಿಖ್ಯಾತವಾಗಿದ್ದಿತು. ಪ್ರಾಚೀನ ಸಾಹಿತ್ಯದಲ್ಲಿಯೂ ಅಶೋಕನ ಶಾಸನಗಳಲ್ಲಿಯೂ ಗಾಂಧಾರ ವಿಷಯ ದೊಳಗೇ ಕಾಂಬೋಜವು ಸೇರಿಸಲ್ಪಟ್ಟಿದೆ. ಕೌಟಿಲ್ಯನ ಕಾಲದಲ್ಲಿ ಇಲ್ಲಿ ಸಂಘ ಪದ್ಧತಿಯ ಸರ್ಕಾರವಿದ್ದಂತೆ ತಿಳಿಯುವುದು.

ಭಾರತದ ಚರಿತ್ರೆಯನ್ನು ಖಚಿತವಾದ ನೆಲೆಗಟ್ಟಿನ ಮೇಲೆ ಬರೆಯಲು ಆರಂಭಿಸುವುದಕ್ಕೆ ಕ್ರಿ.ಪೂ. ೬ನೆಯ ಶತಮಾನದ ಆರಂಭದಿಂದಷ್ಟೇ ಸಾಧ್ಯ. 'ಅಂಗುತ್ತರ ನಿಕಾಯ'ದಲ್ಲಿ ಉಲ್ಲೇಖವಾಗಿರುವ ಪೂರ್ವೋಕ್ತವಾದ ೧೬ ದೇಶಗಳು ಕ್ರಿ.ಪೂ. ೫೫೦ರ ಮೊದಲಲ್ಲಿ ಪ್ರಖ್ಯಾತವಾಗಿದ್ದವು. ಚಿಕ್ಕ ರಾಜ್ಯಗಳಲ್ಲಿ ಸು. ಐದು ಲಕ್ಷ ಜನರ ಶಾಕ್ಯರ ರಾಜ್ಯವನ್ನು ಹೇಳಬಹುದು. ಶಾಕ್ಯರು ರೋಹಿಣೀ ನದಿಯ ನೀರನ್ನು ಕೃಷಿಗೆ ಬಳಸಿಕೊಳ್ಳುತ್ತಿದ್ದುದರಿಂದ ಆ ಬಗೆಗೆ ನೆರೆಯ ರಾಮಗ್ರಾಮದ ಕೋಲಿಯರೊಡನೆ ಸಣ್ಣ ಪುಟ್ಟ ಜಗಳಗಳಾಗುತ್ತಿದ್ದಂತೆ ತೋರುತ್ತದೆ. ಬೌದ್ಧಗ್ರಂಥವೊಂದು ಇಂತಹ ಒಂದು ಜಗಳವನ್ನು ವಿವರವಾಗಿ ಉಲ್ಲೇಖಿಸಿದೆ. ಇಂತಹ ಸಂದರ್ಭದಲ್ಲಿ ಕೋಲಿಯರು ಶಾಕ್ಯರಲ್ಲಿ ಪ್ರಚಲಿತವಿದ್ದ ಸೋದರಿವಿವಾಹದ ಪದ್ಧತಿಯನ್ನು ಟೀಕಿಸಿದ ಹಾಗೆ ತೋರುತ್ತದೆ. ಇನ್ನು ಭಗ್ಗರೆಂಬವರು ಐತರೇಯ ಬ್ರಾಹ್ಮಣದಲ್ಲಿ ಭಾರತ—ಹರಿವಂಶಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ತುಂಬ ಹಳೆಯ ಕುಲದವರು.

ಮುಂದೆ ಮೌರ್ಯರೆಂಬ ಪ್ರಸಿದ್ಧ ಮನೆತನವಾಗಿ ಸಾಮ್ರಾಜ್ಯವನ್ನು ಕಟ್ಟಿದ ಮೋರಿಯರು ಕ್ರಿ. ಪೂ. ೬ನೆಯ ಶತಮಾನದಲ್ಲಿಯೇ ಇದ್ದವರು. ಈ ರಾಜ್ಯಗಳ ಗಣಕೂಟಗಳಲ್ಲಿ ಉನ್ನತಾಧಿಕಾರ ಸಂಸ್ಥೆಯಾಗಿ ಒಂದು ಕೇಂದ್ರ ಜನಪ್ರಿಯ ಸದಸ್ಯಕೂಟವಿದ್ದಿತು. ಚಿಕ್ಕವರು ದೊಡ್ಡವರು ಎಲ್ಲರೂ ಅದರ ಸದಸ್ಯರಾಗಿ ರಾಜ್ಯದ ವ್ಯವಹಾರಗಳನ್ನು ಒಟ್ಟಿಗೆ ಚರ್ಚಿಸುತ್ತಿದ್ದರು. ಮೊದಲು ಅರಸಾಳ್ವಿಕೆಯ ಕೂಟಗಳಿದ್ದು, ಅರಸರ ದುರಾಡಳಿತವೋ ದೌರ್ಜನ್ಯವೋ ಕಾರಣವಾಗಿ ಅದು ಅಳಿದು ಪ್ರಜಾತಂತ್ರವು ನೆಲಸಿತೆಂದು ತೋರುತ್ತದೆ. ಬೌದ್ಧ ಜೈನಧರ್ಮಗಳೆರಡೂ ಸ್ವಯಮಾಡಳಿತ ರಾಜ್ಯಕೂಟಗಳಲ್ಲಿಯೇ ಸಾಮಾನ್ಯವಾಗಿ ಪ್ರೋದಯಗೊಂಡವು. ಧರ್ಮಪ್ರಸಾರಕ್ಕೆ ಮುಖ್ಯ ಪ್ರೋತ್ಸಾಹವನ್ನು ಪಡೆದುಕೊಂಡವು.

೨. ಮಗಧ ಸಾಮ್ರಾಜ್ಯ (ಕ್ರಿ. ಪೂ. ೬–೫ನೆಯ ಶತಮಾನಗಳು)

ಕ್ರಿ. ಪೂ. ೬ನೆಯ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ರಾಜ್ಯಗಳಲ್ಲಿ ಅಧಿರಾಜ್ಯತೆಗೆ ಪ್ರಥಮ ಪ್ರಯತ್ನ ನಡೆಸಿದ್ದು ಮಗಧರಾಜ್ಯ. ಪ್ರಬಲನಾದ ಬಿಂಬಿಸಾರನ (ಕ್ರಿ. ಪೂ. ಸು. ೫೪೪–೪೯೩) ರಾಜ್ಯವ್ಯವಸ್ಥೆ, ಸೈನ್ಯವ್ಯವಸ್ಥೆ, ಶಿಸ್ತು, ಕುಟಿಲರಾಜನೀತಿ ಇವುಗಳಿಂದ ಮಗಧವು ಇತರ ಸಣ್ಣಪುಟ್ಟ ರಾಜ್ಯಗಳನ್ನು ಒಳಕೊಂಡು ಬಲಿಷ್ಠವಾಗಿ ಬೆಳೆಯಿತು. ಆಗ ತಾನೇ ರಾಜಕೀಯ ಆಡಳಿತ ಪದ್ಧತಿಯ ಉದಯವಾಯಿತೆನ್ನಬಹುದು. ಈತನ ರಾಜ್ಯ ಎಂಬತ್ತುಸಾವಿರ ಸಂಪದ್ಭರಿತವಾದ ಗ್ರಾಮಗಳನ್ನು ಒಳಕೊಂಡಿದ್ದಿತು. ಬ್ರಾಹ್ಮಣರ ಗ್ರಾಮಗಳೂ ಸೈನ್ಯ ಸಂಗ್ರಹಣೆಯ ನೆಲೆಗಳೂ ಇದ್ದವು. ಬೌದ್ಧ ಗ್ರಂಥಗಳು ಈ ಮಹಾರಾಜ್ಯದ ಆಡಳಿತದ ಬಗೆಗೆ ಸ್ವಲ್ಪಮಟ್ಟಿಗೆ ಬೆಳಕು ಚೆಲ್ಲುತ್ತವೆ. ಹಳ್ಳಿಗಳು ತಮ್ಮದೇ ಆದ ಜನಕೂಟಗಳ ಆಡಳಿತವನ್ನು ಹೊಂದಿದ್ದವು. ಇವರ ನಾಯಕರು 'ಗ್ರಾಮಿಕರು, ಎಂಬವರು. 'ಮಹಾವಗ್ಗ'ದಲ್ಲಿ ೮೦,೦೦೦ ಗ್ರಾಮಗಳ ಗ್ರಾಮಿಕರ ಒಂದು ಮಹಾಕೂಟವನು ಉಲ್ಲೇಖಿಸಿದೆ. ನಗರ ಕೇಂದ್ರಗಳಲ್ಲಿ ಮುಖ್ಯ ಅಧಿಕಾರಿಗಳಾಗಿ ಮಹಾಮಾತ್ರರೆಂಬವರು ಇರುತ್ತಿದ್ದರು. ಆಡಳಿತದ ಸರ್ವಕಾರ್ಯ ನಿರ್ವಾಹಕರು (ಸಬ್ಬತ್ಥಕ), ನ್ಯಾಯವ್ಯವಹಾರ ನಿರ್ವಾಹಕರು (ವೋಹಾರಿಕಾ), ಮತ್ತು ಸೇನಾನಾಯಕ—ಎಂಬುದಾಗಿ ಇವರಲ್ಲಿ ಮೂರುವರ್ಗಗಳಿರುತ್ತಿದ್ದವು. ತಪ್ಪಿತಸ್ಥರು ಕಾರಾಗೃಹ ವಾಸದ ಶಿಕ್ಷೆಯನ್ನು, ಅಂಗಚ್ಛೇದಾದಿ ಶಿಕ್ಷೆಗಳನ್ನು ಅನುಭವಿಸಬೇಕಾಗುತ್ತಿತ್ತು. ಎಲ್ಲ ವ್ಯವಸ್ಥೆಯ ಮೇಲೆಯೂ ದೊರೆಯಾದ ಬಿಂಬಿಸಾರನಿಗೆ ಕಟ್ಟುನಿಟ್ಟಾದ ಹಿಡಿತವಿರುತ್ತಿದ್ದಿತು.

ಮಗಧ ರಾಜಧಾನಿಯಾದ ಗಿರಿವ್ರಜವೂ ಅಲ್ಲಿಯ ಅರಮನೆಯೂ ಮಹಾಗೋವಿಂದನೆಂಬ ಶಿಲ್ಪಿಯಿಂದ ನಿರ್ಮಾಣವಾಯಿತು. ನಗರದ್ವಾರವು ಸಂಜೆಯಾಗುತ್ತಲೇ ಮುಚ್ಚುತ್ತಿದ್ದಿತು. ಆ ಬಳಿಕ ಅರಸನೇ ಆಗಲಿ ಪ್ರವೇಶಿಸುವಂತಿರಲಿಲ್ಲ.

ಪ್ರಖ್ಯಾತನಾದ ಬಿಂಬಿಸಾರನನ್ನು ಬೌದ್ಧಮತದ ಅನುಯಾಯಿಯೆಂದು ಬೌದ್ಧಗ್ರಂಥಗಳಲ್ಲಿಯೂ ಜೈನಮತದ ಅನುಯಾಯಿಯೆಂದು ಜೈನ ಗ್ರಂಥಗಳಲ್ಲಿಯೂ ಹೇಳಿದೆ. ಬಿಂಬಿಸಾರನು ಬೌದ್ಧಮತದ ಪ್ರಭಾವಕ್ಕೆ ಒಳಗಾಗಿದ್ದನೆಂಬುದಕ್ಕೆ ಹೆಚ್ಚಿನ ಪ್ರಮಾಣಗಳು ದೊರೆಯುತ್ತವೆ. ಬಿಂಬಿಸಾರನ ಮಗ ಅಜಾತಶತ್ರು (ಕ್ರಿ. ಪೂ. ೪೯೩–೪೬೨) ಕೂಡ ಪ್ರಬಲನೂ ಚತುರನೂ ಆದ ದೊರೆಯಾಗಿದ್ದುದರಿಂದ ಮಗಧರಾಜ್ಯ ಇನ್ನೂ ವಿಸ್ತರಿಸಿ ಬಲಗೊಂಡಿತು. ಈತನ ಆಳ್ವಿಕೆಯ ಎಂಟನೆಯ ವರ್ಷದಲ್ಲಿಯೇ ಬುದ್ಧನು ತೀರಿಕೊಂಡನು. ಅಜಾತಶತ್ರುವಿನ ಹೆಸರು ಬೌದ್ಧಮತದ ಚರಿತ್ರೆಯಲ್ಲಿ ಅಮರವಾಗಿರುವುದು ಆತನು ಆ ಮತದ ಮೊತ್ತಮೊದಲ 'ಸಂಗೀತಿ' ಎಂಬ ಸರ್ವಸದಸ್ಯಸಭೆಯಲ್ಲಿ ಭಾಗವಹಿಸಿದ್ದನೆಂಬ ಸಂಗತಿಯಿಂದ. ಇದು ನಡೆದದ್ದು ವೈಭಾರಗಿರಿಯ ಸತ್ತಪಣ್ಣಿ ಗುಹೆಯಲ್ಲಿ ಆತನೇ ಕಟ್ಟಿಸಿದ ಹಜಾರದಲ್ಲಿ. ಅಜಾತಶತ್ರು ಬೌದ್ಧಮತಕ್ಕೆ ಕೊಟ್ಟ ಅಮಿತವಾದ ಪ್ರೋತ್ಸಾಹವನ್ನು 'ಮಹಾವಂಶ'ದಲ್ಲಿ ಉಗ್ಗಡಿಸಿದೆ. ಅಜಾತಶತ್ರುವಿನ ಅನಂತರದಲ್ಲಿ, ಶಿಶುನಾಗನೆಂಬವನ ಮಗ ಕಾಲಾಶೋಕನ ಕಾಲದಲ್ಲಿಯೇ ಎರಡನೆಯ ಬೌದ್ಧ ಮಹಾಸಭೆ ಜರುಗಿತು.

ಮಗಧದ ರಾಜಕೀಯ ಪ್ರಾಮುಖ್ಯ ಮಹತ್ವದ ಸ್ಥಾನಮಾನಗಳ ಸಂಪಾದನೆಗೆ ಅದರ ಭೌಗೋಳಿಕ ಪರಿಸರವು ಕಾರಣವಾಗಿದ್ದಂತೆಯೇ ಆಚಾರ ವಿಚಾರಗಳ ಸ್ವಾತಂತ್ರ್ಯ, ವಿಭಿನ್ನ ಸಂಸ್ಕೃತಿಗಳ ಸಮ್ಮಿಳನ

ಇವೂ ಕಾರಣಗಳಾಗಿವೆ. ವೈದಿಕ ರಾಜ್ಯಪದ್ಧತಿ ವೈದಿಕ ಸಂಸ್ಕೃತಿ ತಮ್ಮ ಪ್ರಭಾವ ಪ್ರಾಬಲ್ಯಗಳನ್ನು ಕಳೆದುಕೊಂಡಿದ್ದುವು. ಬೌದ್ಧ ಜೈನಧರ್ಮಗಳ ಸಾರ್ವಜನಿಕದೃಷ್ಟಿ ಜನಾದರಣೀಯವಾದವು. ಸಾಮ್ರಾಜ್ಯ ಪದದ ಅಸ್ತಿವಾರವನ್ನು ಹಾಕಿದ ಮಗಧವು ಒಂದು ವಿಶ್ವಧರ್ಮದ ವಿಕಾಸಕ್ಕೆ ಯೋಗ್ಯವಾತಾವರಣ ವನ್ನೂ ಕಲ್ಪಿಸಿತು.

3. ನಂದರು ಕ್ರಿ. ಪೂ. ೪ನೆಯ ಶತಮಾನ(ಸು. ೩೬೪-೩೨೪ ಕ್ರಿ.ಪೂ.)

ಮಗಧರಾಜ್ಯದ ಅರಸೊತ್ತಿಗೆ ಶಿಶುನಾಗ ಸಂತತಿಯ ರಾಜ, ರಾಜಪುತ್ರರ ಕೊಲೆಯಿಂದ ಕೊನೆ ಗೊಂಡಮೇಲೆ ನಂದರ ಆಳ್ವಿಕೆ ಮೊದಲಾಯಿತು. ನಂದರ ಮೂಲಪುರುಷ ರಾಜದ್ರೋಹಿಯೂ ಕೀಳುಕುಲದವನೂ ಆಗಿ ಸಾಹಿತ್ಯಕವಾದ ಆಕರಗಳಲ್ಲಿ ವರ್ಣಿತವಾಗಿದ್ದಾನೆ. ನಂದರ ಸಾಮ್ರಾಜ್ಯವು ಬೇರೆ ಬೇರೆ ಸ್ವತಂತ್ರ ಪ್ರಾಂತ್ಯಗಳನ್ನು ಒಗ್ಗೂಡಿಸಿ ಕಟ್ಟಿದ ಒಂದು ಶಿಥಿಲವಾದ ರಾಜ್ಯವ್ಯವಸ್ಥೆಯು ಹಾಗಿರದೆ, ಧನಜನ ಸಂಪದ್ಭರಿತವಾದ ಏಕರಾಟ್ ಆಧಿಪತ್ಯದ ಒಂದು ದಕ್ಷ ಪ್ರಭುತ್ವವಾಗಿದ್ದಿತು. ಸಿಂಹಾಸನ ವಾಗಲಿ ನಾಯಕತ್ವವಾಗಲಿ ಕ್ಷತ್ರಿಯರಿಗೆ ಮಾತ್ರ ಸೇರಿದ್ದು ಎಂಬ ಭಾವನೆ ಈ ಕಾಲದಲ್ಲಿ ತೊಲಗಿದ್ದು ಒಂದು ಕ್ರಾಂತಿಕಾರಕವಾದ ಪರಿವರ್ತನೆಯೇ ಆಗಿತ್ತು. ಮಹಾಪದ್ಮನು ಅನೇಕ ಸಂಖ್ಯೆಯಲ್ಲಿ ಕ್ಷತ್ರಿಯ ರಾಜ್ಯಕೂಟಗಳನ್ನು ಸದೆದಿಕ್ಕಿ ಮಹಾರಾಜ್ಯವನ್ನು ಕಟ್ಟಿ ಅದನ್ನು ಭದ್ರವಾದ ಅಸ್ತಿವಾರದ ಮೇಲೆ ನಿಲ್ಲಿಸಿದನು. ರಾಜಕೀಯದಲ್ಲಿಯೂ ಧರ್ಮದಲ್ಲಿಯೂ ಹಳೆಯ ಪರಂಪರಾನುಗತ ಅಭಿಪ್ರಾಯಗಳು ತೊಲಗಿ ಹೊಸಪದ್ಧತಿಗಳಿಗೆ ದಾರಿಯಾಯಿತು. ಧರ್ಮದಲ್ಲಿ ಅವೈದಿಕ ಮನೋಧರ್ಮವು ವಿಜಿಗೀಷು ವಾಗಿ ಬೆಳೆಯತೊಡಗಿದ್ದಂತೆ ರಾಜಕೀಯದಲ್ಲಿ ಅಸಾಂಪ್ರದಾಯಿಕ ದೃಷ್ಟಿಕೋನವು ಅದರ ಜತೆಗೂಡಿತು. ಜೈನ ಬೌದ್ಧಧರ್ಮಗಳು ಸಾಂಪ್ರದಾಯಿಕ ವೈದಿಕಧರ್ಮದ ಕಂದಾಚಾರಗಳನ್ನು ಪ್ರತಿಭಟಿಸಿ ವಿಶ್ವ ಸಾಮಾನ್ಯ ನೈತಿಕ ಮೌಲ್ಯಗಳನ್ನು ಹರಡತೊಡಗಿದಂತೆ, ಶೂದ್ರನಾಯಕರು ಕ್ಷತ್ರಿಯನಾಯಕರ ಅವಶೇಷಗಳ ಮೇಲೆ ಆರ್ಯಾವರ್ತದಲ್ಲಿ ಮಹಾಸಾಮ್ರಾಜ್ಯವನ್ನು ಸ್ಥಾಪಿಸಿದರು.

ಅರ್‍ರಿಯನ್ ಎಂಬ ಲೇಖಕನು ನಂದರ ಕಾಲದಲ್ಲಿ ಸುಭದ್ರವಾದ ಪ್ರಭುತ್ವವಿದ್ದಿತೆಂದೂ ನ್ಯಾಯ ನೀತಿಗಳಿಂದ ಅಧಿಕಾರವನ್ನು ಚಲಾಯಿಸಲಾಗುತ್ತಿದ್ದಿತೆಂದೂ ವರ್ಣಿಸಿರುತ್ತಾನೆ; ರಾಜ್ಯದ ಪ್ರಜೆಗಳು ವಿಶೇಷವಾಗಿ ಕೃಷಿಕರಾಗಿದ್ದರೆಂದೂ ಭೂಮಿಯು ತುಂಬ ಫಲವತ್ತಾಗಿದ್ದಿತೆಂದೂ ಹೇಳಿರುತ್ತಾನೆ. ಸಾಮ್ರಾಜ್ಯದ ಅಕ್ಕಪಕ್ಕ ಪ್ರದೇಶಗಳಲ್ಲಿರುವ ಜನಗಳಿಗೆ ನಂದರು ಸಾಕಷ್ಟು ಸ್ವಾತಂತ್ರ್ಯವನ್ನು ಕೊಟ್ಟಿದ್ದರೆಂದು ತೋರುತ್ತದೆ. ಇದು ಅವರ ಆಡಳಿತ ಜನಪ್ರಿಯವಾಗಲು ಒಂದು ಕಾರಣವಾಗಿರ ಬಹುದು. ಆದರೆ ಸ್ವಕೀಯ ಆಡಳಿತದ ಅಂಕೆಗೆ ಸೇರಿದ್ದ ಪ್ರದೇಶಗಳಲ್ಲಿ ಅವರು ದರ್ಪದ ಬಿಗಿಯಾದ ಆಡಳಿತವನ್ನೇ ಚಲಾಯಿಸುತ್ತಿದ್ದರು. ನಂದರ ಕೊನೆಯ ಅರಸು ಚರಿತ್ರಪ್ರಸಿದ್ಧನಾಗಿದ್ದ ಕೃಪಣನಾಗಿದ್ದ ನೆಂಬುದು ಆತನ ಬಗೆಗೆ ನಾನಾ ಇತಿಹಾಸಮೂಲಗಳಲ್ಲಿ ದೊರೆಯುವ ಕಥೆಗಳಿಂದ ತಿಳಿದುಬರುತ್ತದೆ. ಈತನ ಸೈನ್ಯದಲ್ಲಿ ೨೦ ಸಾವಿರ ಅಶ್ವಾರೋಹಿಪಡೆ, ೨ ಲಕ್ಷ ಪದಾತಿ, ೨ ಸಾವಿರ ನಾಲ್ಕು ಕುದುರೆ ಕಟ್ಟಿದ ರಥಗಳು, ೩ ಸಾವಿರ ಆನೆಗಳು—ಇರುತ್ತಿದ್ದವೆಂದು ಗ್ರೀಕ್ ಲೇಖಕರು ವರ್ಣಿಸಿದ್ದಾರೆ. ಇಷ್ಟು ಅಗಾಧ ಸೈನ್ಯವಿದ್ದೂ ಈತನು ತನ್ನ ದೋಷದೌರ್ಬಲ್ಯಗಳಿಂದಾಗಿ ಚಂದ್ರಗುಪ್ತಮೌರ್ಯನಿಂದ ಪದಚ್ಯುತನಾಗ ಬೇಕಾಯಿತು. ಜೈನ ಉಲ್ಲೇಖಗಳ ಪ್ರಕಾರ ಜೈನಧರ್ಮದಲ್ಲಿ ಒಲವಿದ್ದ ನಂದರಾಜರು ಜೈನರನ್ನೇ ಮಂತ್ರಿಗಳಾಗಿ ನಿಯಮಿಸಿಕೊಳ್ಳುತ್ತಿದ್ದರೆಂದು ತಿಳಿಯುವುದು. ಅಲ್ಲದೆ ಈ ಮಂತ್ರಿಪದವು ಅನು ವಂಶಿಕವೂ ಆಗಿತ್ತು. ಜೈನಪ್ರಭಾವವು ಮಂತ್ರಿಗಳ ಮೂಲಕವಾಗಿ ಆಸ್ಥಾನದಲ್ಲಿಯೂ ಸಮಾಜದಲ್ಲಿಯೂ ಕ್ರಮವಾಗಿ ಹಬ್ಬತೊಡಗಿದ್ದಿತು.

ವಿದೇಶಿಯ ಆಕ್ರಮಣಗಳು—ಪರ್ಶಿಯಾದವರು (ಕ್ರಿ.ಪೂ.೬—೫ನೆಯ ಶತಮಾನಗಳು)

ಭಾರತದ ಒಳಭಾಗವು ಮಗಧದ ಆಶ್ರಯದಲ್ಲಿ ರಾಜಕೀಯವಾಗಿ ಒಗ್ಗೂಡುವ ಸ್ಥಿತಿಯಲ್ಲಿದ್ದಾಗ. ಅದರ ಅರಕ್ಷಿತವೂ ಅಭದ್ರವೂ ಆದ ಗಡಿಪ್ರಾಂತಗಳ ಒಂದು ದಿಕ್ಕಿನಲ್ಲಿ ವಿದೇಶೀಯ ಆಕ್ರಮಣಗಳು

ಮೊದಲಾದವು. ಇವುಗಳಲ್ಲಿ ಮೊದಲನೆಯದು ಪರ್ಶಿಯಾದವರ ಆಕ್ರಮಣ. ಸೈರಸ್‌ದೊರೆಯ ಕಾಲದಲ್ಲಿ (ಕ್ರಿ.ಪೂ. ೫೫೮–೫೩೦) ಮೊದಲಾದ ಪರ್ಶಿಯಾ-ಭಾರತ ಸಂಪರ್ಕ ಮುಂದೆ ಡೇರಿಯಸ್ (ಕ್ರಿ.ಪೂ. ೫೨೨–೪೮೬) ಮತ್ತು ಇತರರ ಕಾಲದಲ್ಲಿ ಅಧಿಕಗೊಂಡಿತು. ಸೈರಸ್‌ದೊರೆಗೆ ಭಾರತದ ದೊರೆಯೊಬ್ಬ ಹಣದೊಂದಿಗೆ ದೂತನನ್ನು ಕಳಿಸಿಕೊಟ್ಟಿದ್ದನೆಂಬುದಾಗಿ ಕ್ಸೆನೋಫೋನ್ ಉಲ್ಲೇಖಿಸಿದ್ದಾನೆ. ಹೆರೊಡೊಟಸ್ ಭರತಖಂಡವನ್ನು ಡೇರಿಯಸ್ಸನ ಸಾಮ್ರಾಜ್ಯದ ೨೦ನೆಯ ಸತ್ರಪಿಯೆಂಬುದಾಗಿ ತಿಳಿಸಿ, ಆ ಸಾಮ್ರಾಜ್ಯಕ್ಕೆ ಈ ದೇಶವು ಲಕ್ಷಾಂತರ ರೂಪಾಯಿಗಳ ಬೆಲೆಯ ಚಿನ್ನದ ರಜವನ್ನು ರಾಜ್ಯಾದಾಯ ವಾಗಿ ಸಲ್ಲಿಸುತ್ತಿದ್ದಿತೆಂದು ಬರೆದಿದ್ದಾನೆ. ಇದು ಉತ್ತರ ಸಿಂಧೂನದಿಯ ನದೀಪಾತ್ರಗಳ ಮೆಕ್ಕಲು ಗಳಿಂದ ಒದಗುತ್ತಿದ್ದಿತು. ಸಿಂಧೂ ಪಾತ್ರದ ಭೂಶೋಧನೆಗೆ ಡೇರಿಯಸ್ ಕ್ರಿ.ಪೂ. ೫೧೮ರಲ್ಲಿ ಒಂದು ನಾವಿಕ ಪಡೆಯನ್ನು ತನ್ನ ಆಸ್ಥಾನದ ಗ್ರೀಕ್ ಸಾಹಸಿಯೊಬ್ಬನ ನೇತೃತ್ವದಲ್ಲಿ ಕಳಿಸಿಕೊಟ್ಟ ಸಂಗತಿಯನ್ನು ಹೆರೊಡೊಟಸ್ ಉಲ್ಲೇಖಿಸಿದ್ದಾನೆ. ಸೂಸಾ ಅರಮನೆಯ ನಿರ್ಮಾಣಕ್ಕೆ ಗಾಂಧಾರ ದೇಶದಿಂದ ತೇಗದ ಮರವನ್ನು ತರಿಸಲಾಯಿತೆಂದು ಅಲ್ಲಿಯ ಶಾಸನದಲ್ಲಿ ಹೇಳಿದೆ.

ಡೇರಿಯಸನ ಮಗ ಕ್ಷಯಾರ್ಷನು (ಕ್ರಿ.ಪೂ. ೪೮೬–೪೬೫) ತನ್ನ ಗ್ರೀಸ್ ದೇಶದ ದಾಳಿಯಲ್ಲಿ ಭಾರತದ ಸೈನ್ಯವನ್ನು ಕೂಡ ಕೂಡಿಸಿಕೊಂಡು ಹೋಗಿದ್ದನು. 'ಯೂರೋಪ್ ಖಂಡದ ನೆಲದ ಮೇಲೆ ಭಾರತದ ಸೈನ್ಯವು ಕಾದಾಡಿದ ಪ್ರಥಮ ಪ್ರಸಂಗವೆಂದರೆ ಚರಿತ್ರೆಯಲ್ಲಿ ಇದೇ.' ಭಾರತೀಯ ಸೈನಿಕರ ಮತ್ತು ಸೈನ್ಯದ ಸಜ್ಜಿನ ಬಗೆಗೆ ಹೆರೊಡೊಟಸ್ ಕೊಟ್ಟಿರುವ ವರ್ಣನೆ ಸ್ವಾರಸ್ಯಕರವಾಗಿದೆ: 'ಭಾರತೀ ಯರು ಹತ್ತಿಯ ನೂಲಿನ ಬಟ್ಟೆಯನ್ನು ಉಟ್ಟವರಾಗಿದ್ದರು. ಬೆತ್ತದ ಬಿಲ್ಲುಬಾಣಗಳನ್ನು ತೊಟ್ಟವ ರಾಗಿದ್ದರು. ಬಾಣಗಳ ತುದಿ ಕಬ್ಬಿಣದ ಅಲಗಿನಿಂದ ಕೂಡಿರುತ್ತಿತ್ತು...' ಭಾರತವು ಕ್ಷಯಾರ್ಷನಿಗೆ ಪದಾತಿಬಲವನ್ನಷ್ಟೇ ಅಲ್ಲದೆ ಅಶ್ವದಳವನ್ನೂ ರಥಗಳನ್ನೂ ಹೇಸರಕುದುರೆಗಳನ್ನೂ ರಥಗಳನ್ನೆಳೆಯುವ ಕುದುರೆಗಳನ್ನೂ ಹೇಸರಗತ್ತೆಗಳನ್ನೂ ಬಹುಸಂಖ್ಯೆಯಲ್ಲಿ ನಾಯಿಗಳನ್ನೂ ಒದಗಿಸಿತೆಂಬುದಾಗಿಯೂ, ಪದಾತಿಬಲಕ್ಕಿಂತಲೂ ಅಂತು ಕುದುರೆಯ ಪಡೆಗೂ ಸಜ್ಜು ಸಮಾನವಾಗಿದ್ದಿತೆಂಬುದಾಗಿಯೂ ಹೆರೊಡೊಟಸ್ಸನ ವಿವರಣೆಯಿಂದಲೇ ತಿಳಿಯುವುದು.

ಪರ್ಶಿಯಾದವರ ಒಡಿತವು ಭಾರತದ ಮೇಲೆ ಕ್ರಿ.ಪೂ. ೩೩೦ ರ ವರೆಗೆ, ೩ನೆಯ ಡೇರಿಯಸ್ಸ ನವರೆಗೆ, ನಡೆಯಿತು. ಈ ಕಾಲದಲ್ಲಿಯೂ ಒಂದೆರಡು ಸಂದರ್ಭಗಳಲ್ಲಿ ಭಾರತದ ಸೈನ್ಯವು ಹೊರನಾಡಿ ಗರಿಗಾಗಿ ಹೊರನಾಡಿನ ನೆಲದಲ್ಲಿ ಹೋರಾಡಿತೆಂದು ತಿಳಿಯುವುದು.

ಭಾರತ-ಪರ್ಶಿಯಾದವರ ಸಂಪರ್ಕವು ಕ್ರಿ. ಪೂ. ೬ನೆಯ ಶತಮಾನಕ್ಕಿಂತ ಪ್ರಾಚೀನವಾದುದು. ಇವರು ಮೂಲತಃ ಒಂದೇ ಬುಡಕಟ್ಟಿಗೆ ಸೇರಿದವರಾಗಿದ್ದು, ಭಾಷೆ, ಆಚಾರ ವ್ಯವಹಾರಗಳು, ಮುಂತಾದವುಗಳಲ್ಲಿ ಸಾಮ್ಯತೆಯುಳ್ಳವರಾಗಿದ್ದರೆಂಬುದು ಸುವಿದಿತವಾದ ವಿಷಯ. ಈಗ ಕ್ರಿ.ಪೂ. ೬ನೆಯ ಶತಮಾನದಿಂದ ಈ ಸಂಪರ್ಕ ವಿವಿಧ ಮುಖವಾಗಿ ಬೆಳೆದು, ವ್ಯಾಪಾರ ವಾಣಿಜ್ಯಗಳಲ್ಲಿಯೂ ಭಾಷಾಲಿಪಿ ವಾಸ್ತುಶಿಲ್ಪಗಳಲ್ಲಿಯೂ ಪರ್ಶಿಯಾದ ಪ್ರಭಾವ ಭಾರತದ ಮೇಲೆ ಗಣನೀಯ ಪ್ರಮಾಣ ದಲ್ಲಿ ಆದದ್ದು ಕಂಡುಬರುತ್ತದೆ.

ಮ್ಯಾಸಿಡೋನಿಯದವರು (ಕ್ರಿ.ಶ. ೩೨೭–೨೫): ಮಹಾವಿಜಯಿಯಾದ ಅಲೆಕ್ಸಾಂಡರನ ನೇತೃತ್ವದಲ್ಲಿ ಯೂರೋಪ್ ಖಂಡದ ಕಡೆಯಿಂದ ಮ್ಯಾಸಿಡೋನಿಯದ ದಾಳಿ ಸಂಘಟಿಸಿ ಎರಡನೆಯ ಬಾರಿಗೆ ಭಾರತ ವಿದೇಶೀಯರ ಅಂಕೆಗೆ ಒಳಗಾಯಿತು. ಕ್ರಿ.ಪೂ. ೩೨೭ರ ಮೇ ತಿಂಗಳ ಮೊದಲ ಅಲೆಕ್ಸಾಂಡರನು ಭಾರತದ ಕಡೆಗೆ ನುಗ್ಗಿ ಮಾರ್ಚ್ ೩೨೬ ರಿಂದ ಸೆಪ್ಟೆಂಬರ್ ೩೨೫ರ ವರೆಗೆ ಲ್ಲಿ ಭಾರತದಲ್ಲಿದ್ದನೆಂದು ಗ್ರೀಕ್ ಲೇಖಕರ ಬರವಣಿಗೆಗಳಿಂದ ತಿಳಿಯುವುದು. ಈ ಅವಧಿಯಲ್ಲಿ ಹಲವು ತಿಂಗಳುಗಳು ಉತ್ತರ ಭಾರತದ ನಾನಾಭಾಗಗಳ ಜನರೊಡನೆ ಆತನು ಉಗ್ರವಾದ ಹೋರಾಟವನ್ನು ನಡೆಸಬೇಕಾಯಿತು. ಇದು ಭಾರತದ ಶೌರ್ಯಸ್ಥೈರ್ಯಗಳ ಸತ್ತ್ವಪರೀಕ್ಷೆಯ ಕಾಲವಾಗಿತ್ತು. ಭಾರತದ ಹಲವು ಪ್ರದೇಶಗಳಲ್ಲಿ ಅತ್ಯಂತ ಸಮರ್ಥರಾದ ನಾಯಕರೂ, ಅವರಿಗೆ ಬೆಂಬಲವಾಗಿ ಅಗಾಧವಾದ ಚತುರಂಗ ಸೈನ್ಯದ ಬಲವೂ, ನಾಯಕರಲ್ಲಿಯೂ ಯೋಧರಲ್ಲಿಯೂ ಸಾಹಸಪ್ರಿಯತೆ, ಆತ್ಮಾಭಿಮಾನ

ಮಾತೃಭೂಮಿಗಾಗಿ ಹೋರಾಡಿ ಮಡಿಯುವ ಸಂಕಲ್ಪನಿಷ್ಠೆ, ಸ್ವಾತಂತ್ರ್ಯ ಸಂರಕ್ಷಣೆಯ ಅಪೇಕ್ಷೆ–, ಇಂತಹ ವೀರೋಚಿತವಾದ ಗುಣಗಳ ಮೇಳನವೂ ಬೇಕಾದ ಹಾಗೆ ಇದ್ದು ಕೂಡ ಭಾರತೀಯರ ಹೋರಾಟ ಯಶಸ್ವಿಯಾಗಲಿಲ್ಲ. ತಕ್ಷಶಿಲೆಯ ಅರಸನಾದ ಆಂಭಿಯು ತನ್ನ ನೆರೆಯ ರಾಜ್ಯದ ರಾಜನಾದ ಪೌರವನ ಮೇಲಿನ ಅಸಹನೆಯಿಂದಾಗಿ ಅವನ ಅಭ್ಯುದಯವನ್ನು ಸಹಿಸದೆ ಕ್ಷುದ್ರಬುದ್ಧಿಯಿಂದ ವಿದೇಶೀಯ ಮಧ್ಯಪ್ರವೇಶವನ್ನು ಸ್ವಾಗತಿಸಿದನು. ಆತನು ಅಲೆಕ್ಸಾಂಡರನಿಗೆ ರಾಯಭಾರವನ್ನು ಕಳಿಸುವಾಗ ಉಪಾಯನವಾಗಿ ೫೬ ಆನೆಗಳು, ದೊಡ್ಡ ಆಕಾರದ ಬಹುಸಂಖ್ಯಾತ ಕುರಿಗಳು, ಒಳ್ಳೆಯ ತಳಿಯ ೩೦೦೦ ಗೂಳಿಗಳನ್ನು ಕಳಿಸಿಕೊಟ್ಟನೆಂಬುದಾಗಿ ಕರ್ಟಿಯಸ್ ಬರೆದಿದ್ದಾನೆ. ತಕ್ಷಶಿಲೆಯ ಪ್ರಬಲ ಪ್ರತಿಕಕ್ಷಿಯಾದ, ಝೀಲಂ ಮತ್ತು ಚೇನಾಬ್ ನದಿಗಳ ನಡುವಣ ರಾಜ್ಯವನ್ನು ಆಳುತ್ತಿದ್ದ, ಪೋರಸನ್ನು (ಪೌರವನು) ಸ್ವದೇಶದ ಮರ್ಯಾದೆಯನ್ನು ಕಾಪಾಡಲೆಂದು, ರಾಜತ್ವದ ಘನತೆ ಗಾಂಭೀರ್ಯಗಳನ್ನೂ ಆತ್ಮಗೌರವವನ್ನೂ ಮೇಲೆತ್ತಿ ಹಿಡಿಯಲೆಂದು ದೃಢನಿಶ್ಚಯ ಮಾಡಿದವನಾಗಿ ಅಲೆಕ್ಸಾಂಡರನೊಡನೆ ಅತ್ಯುಗ್ರವಾಗಿ ಹೋರಾಡಿದನು. ಶತ್ರುಗಳು ಅಂಜುಬುರುಕರು ದ್ರೋಹಿಗಳು ತನ್ನ ಸುತ್ತುಮುತ್ತೆಲ್ಲ ತುಂಬಿ ಮಾತೃಭೂಮಿಯ ಘನತೆಗೌರವಗಳಿಗೆ ಭಂಗವನ್ನುಂಟುಮಾಡುವ ಉದ್ಯಮಗಳಲ್ಲಿ ತೊಡಗಿರುತ್ತಿದ್ದರೆ. ಪೌರವನು ತನ್ನ ಸೈನ್ಯಸಮಸ್ತವನ್ನೂ ವಿದೇಶೀಯ ಪಡೆಯ ಮೇಲೆ ನಿರ್ಭೀತಿಯಿಂದ ನುಗ್ಗಿಸಿ ಪಟ್ಟುಹಿಡಿದು ಕೊನೆಯತನಕ ಹೋರಾಡಿದನು. ಆತನ ಪಕ್ಷದಲ್ಲಿ ೩೦ ಸಾವಿರ ಕಾಲುಬಲ, ೪ ಸಾವಿರ ಕುದುರೆಗಳು, ೩೦೦ ರಥಗಳು, ೨೦೦ ಆನೆಗಳು ಇದ್ದವೆಂಬುದಾಗಿ ಒಬ್ಬ ಚರಿತ್ರಕಾರನು ಬರೆದಿದ್ದಾನೆ. ಈ ಅಗಾಧವಾದ ಚತುರಂಗಬಲವನ್ನು ಪೌರವನು ಚತುರತೆಯಿಂದ ಯುದ್ಧಕ್ಕೆ ಒಡ್ಡಿನಿಂತನಾದರೂ ಕೆಲವು ಪ್ರಾಕೃತಿಕ ಕಾರಣಗಳಿಂದ, ಎದುರಾಳಿಯಾದ ಅಲೆಕ್ಸಾಂಡರನ ಕುಶಲ ಯುದ್ಧತಂತ್ರದಿಂದ ಯಶಸ್ಸು ಗಳಿಸುವುದು ಸಾಧ್ಯವಾಗಲಿಲ್ಲ. ತನ್ನ ಬಂಧು ಬಾಂಧವರನ್ನು ಮಕ್ಕಳನ್ನು ಸೇನಾನಿಗಳನ್ನು ಆತನು ಯುದ್ಧದಲ್ಲಿ ಕಳೆದುಕೊಂಡರೂ ದೇಹವು ಪ್ರತಿಪಕ್ಷದ ಘಾತಗಳಿಂದ ಕ್ಷತವಿಕ್ಷತವಾದರೂ ಆತನು ಧೃತಿಗೆಡದೆ ಹೋರಾಡಿದನೆಂಬುದು ಭಾರತದ ವೀರತೆಗೆ ಘನತೆಗೆ ಉಜ್ವಲ ಸಾಕ್ಷಿಯಾಗಿದೆ. ಪೌರವನು ಅಲೆಕ್ಸಾಂಡರನಿಗೆ ಸೆರೆಯಾಗಬೇಕಾಗಿ ಬಂದಾಗ, ಅಲೆಕ್ಸಾಂಡರ್ ಪೌರವನನ್ನು ಕುರಿತು 'ನಿನ್ನನ್ನು ಈಗ ಹೇಗೆ ನಡಸಿಕೊಳ್ಳಬೇಕು' ಎಂಬುದಾಗಿ ಪ್ರಶ್ನಿಸಿದನಂತೆ. ಅದಕ್ಕೆ ಆತನು 'ದೊರೆಯಂತೆ ನಡೆದುಕೋ' ಎಂದನಂತೆ. ಅದರ ಅಭಿಮತವನ್ನು ಸ್ಪಷ್ಟಪಡಿಸುವ ಹಾಗೆ ಅಲೆಕ್ಸಾಂಡರ್ ಮತ್ತೆ ಪ್ರಶ್ನಿಸಲು "ದೊರೆಯ ಹಾಗೆ ಎಂದು ಹೇಳಿದೆನಷ್ಟೆ. ಅದರಲ್ಲಿಯೇ ಎಲ್ಲವೂ ಅಡಕವಾಗಿದೆ"—ಎಂಬುದಾಗಿ ದಿಟ್ಟತನದ ಮಾರುತ್ತರವಿತ್ತನಂತೆ. ಈ ಪ್ರಸಿದ್ಧವಾದ ಪ್ರತ್ಯುತ್ತರ ಭಾರತದ ಕ್ಷಾತ್ರತೇಜಸ್ಸಿಗೆ ಅನುಗುಣವಾದದ್ದಾಗಿದೆ.

ಅಲೆಕ್ಸಾಂಡರ್ ತನ್ನ ಭಾರತದ ದಿಗ್ವಿಜಯವನ್ನು ಮುಂದುವರಿಸಲು ಸೈನಿಕರ ಅಸಹಕಾರದಿಂದ ಸಾಧ್ಯವಾಗದಾಯಿತು. ಆತನು ತಾನು ಗೆದ್ದ ರಾಜ್ಯವನ್ನು ಪೌರವ ಮೊದಲಾದವರ ವಶಕ್ಕೆ ಒಪ್ಪಿಸಿ ಕ್ರಿ. ಪೂ. ೩೨೫ರಲ್ಲಿ ಭಾರತದಿಂದ ನಿರ್ಗಮಿಸಿದನು. ಈ ನಿರ್ಗಮನದ ಹಾದಿಯಲ್ಲಿಯೂ ಆತನು ಕೆಲವು ಗಣರಾಜ್ಯಗಳ ಒಕ್ಕೂಟಗಳಿಂದ ಉಗ್ರವಾದ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ಬ್ರಾಹ್ಮಣರು ಧರ್ಮಗ್ಲಾನಿಯಾದಂತೆ ಭಾವಿಸಿ ಕ್ಷತ್ರಿಯರಿಗಿಂತ ಮಿಗಿಲಾಗಿ ಹೋರಾಡಿ ಪ್ರಾಣಾರ್ಪಣೆ ಮಾಡಿದ್ದು ಸ್ವಾರಸ್ಯಕರವೂ ಸ್ಮರಣೀಯವೂ ಆದ ಚಾರಿತ್ರಿಕ ಸಂಗತಿ. ಹಾಗೆಯೇ ಅರ್ಜುನಾಯನರ ಒಂದು ನಗರದಲ್ಲಿ ಸು. ೨೦ ಸಾವಿರ ಪ್ರಜೆಗಳು ಧೈರ್ಯಸಾಹಸಗಳಿಂದ ಅಲೆಕ್ಸಾಂಡರನನ್ನು ದಿರಿಸಿ ಕೊನೆಗೆ ತಮ್ಮ ಹೆಂಡತಿ ಮಕ್ಕಳೊಡನೆ ಅಗ್ನಿಯಲ್ಲಿ ಬಿದ್ದು ಪ್ರಾಣಬಿಟ್ಟರು. ಎಂಬ ಸಂಗತಿ ಪರಕೀಯ ಆಳ್ವಿಕೆಯನ್ನೊಪ್ಪದ ಸ್ವಾತಂತ್ರ್ಯಪ್ರೇಮಿಯಾದ ಪ್ರಾಚೀನ ಭಾರತೀಯ ಜನತೆಯ ಸತ್ತ್ವಸಂಪನ್ನತೆಯನ್ನು ನಿರ್ದೇಶಿಸುತ್ತದೆ.

ಚರಿತ್ರಕಾರರು ಅಲೆಕ್ಸಾಂಡರನ ಭಾರತ ದಿಗ್ವಿಜಯದ ಪರಿಣಾಮಗಳನ್ನೂ ಭಾರತೀಯರ ಅಪಜಯದ ಕಾರಣಗಳನ್ನೂ ವಿಮರ್ಶಿಸಿದ್ದಾರೆ. ಅಲೆಕ್ಸಾಂಡರನ ದಿಗ್ವಿಜಯವು ರಾಜಕೀಯವಾಗಿ ಒಂದು ಯಶಸ್ವಿಯಾದ ಸಾಧನೆಯಾಗಲಿಲ್ಲ; ಸಾಹಿತ್ಯ, ಜನಜೀವನ ಅಥವಾ ಜನತಾಸರ್ಕಾರದ ಮೇಲೆ

ಶಾಶ್ವತವಾದ ಪ್ರಭಾವಮುದ್ರೆಯನ್ನು ಅಂಕಿಸಲಿಲ್ಲ; ಆತನು ವಿಭಾಗಿಸಿದ ಸತ್ರಪಿಗಳಲ್ಲಿ ಒಡೆಯರಾಗಿದ್ದವರು ಅಲೆಕ್ಸಾಂಡರನ ಮೇಲಾಳ್ಕೆಯನ್ನು ಅಲಕ್ಷಿಸಿ ಸ್ವತಂತ್ರರಾಗುವುದು ಬಹುಬೇಗ ನಡೆದುಹೋಯಿತು. ಹೀಗೆಯೇ ಇನ್ನೂ ಹಲವು ಪರಿಣಾಮಗಳನ್ನು ಹೇಳಿದ್ದಾರೆ. ಭಾರತಕ್ಕೆ ಆತನ ವಿಜಯಯಾತ್ರೆಯಿಂದ ಆದ ಕೆಲವು ಉಪಕಾರಗಳೂ ಉಂಟು. ಚಿಕ್ಕರಾಜ್ಯಗಳು ದೊಡ್ಡರಾಜ್ಯಗಳಲ್ಲಿ ಸೇರಿಹೋಗಿ ರಾಜಕೀಯವಾಗಿ ಒಂದು ಒಗ್ಗಟ್ಟು ಸಾಧಿತವಾಯಿತು. ಚಂದ್ರಗುಪ್ತ ಮೌರ್ಯನಿಗೆ ಸಾಮ್ರಾಜ್ಯವನ್ನು ಕಟ್ಟಲು ಇದರಿಂದ ಅನುಕೂಲವಾಯಿತು. ವಾಸ್ತವವಾಗಿ ಅಂದಿನ ಪರಿಸ್ಥಿತಿಗೆ ಇಂತಹ ಒಗ್ಗಟ್ಟು ಬಹಳ ಅವಶ್ಯಕವಾಗಿದ್ದಿತು. ನೆಲನೀರುಗಳ ಮೇಲೆ ನಾಲ್ಕು ದೂರದ ದಾರಿಗಳು ತೆರೆದು ಭರತಖಂಡಕ್ಕೆ ಗ್ರೀಸ್ ದೇಶದೊಡನೆ ಸಂಪರ್ಕವು ಹೆಚ್ಚು ಗಾಢವಾಯಿತು. ಪರಸ್ಪರವಾಗಿ ವ್ಯಾಪಾರ ವಾಣಿಜ್ಯಗಳ ಸಾಂಸ್ಕೃತಿಕ ವ್ಯವಹಾರಗಳ ಕೊಳುಕೊಡೆಗಳು ಸಾಧ್ಯವಾದವು. ಮಧ್ಯ ಏಷ್ಯದ ಸಂಪದಭ್ಯುದಯವು ಭಾರತದೊಡನೆ ಇಟ್ಟುಕೊಂಡ ವ್ಯಾಪಾರಸಂಬಂಧದಿಂದ ಕುದುರಿತು.

ಅಲೆಕ್ಸಾಂಡರನ ವಿಶ್ವವಿಜಯದ ಧ್ಯೇಯಗಳಲ್ಲಿ ಗ್ರೀಕ್ ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ತಾನು ಗೆದ್ದ ನಾಡುಗಳಲ್ಲಿ ಹರಡಬೇಕೆಂಬ ಒಂದು ಉದ್ದೇಶವೂ ಸೇರಿದ್ದಿತು. ಇಂಡೋ-ಗ್ರೀಕ್ ಅರಸರ ನಾಣ್ಯಗಳು ಗ್ರೀಕ್ ಮಾದರಿಯಲ್ಲಿ ಅಚ್ಚುಕಟ್ಟಾದ ಆಕೃತಿಗಳಲ್ಲಿ ಮುದ್ರಿತವಾಗತೊಡಗಿದವು. ಗಾಂಧಾರ ಶೈಲಿಯ ವಾಸ್ತುಶಿಲ್ಪವು ರೂಪಿಗೆ ಬಂದಿತು. ಅಲೆಕ್ಸಾಂಡರನು ಭಾರತೀಯ ನಾಯಕರ ವೀರೋದಾತ್ತ ಗುಣಗಳನ್ನು ಮೆಚ್ಚಿಕೊಂಡಂತೆ ಭಾರತೀಯ ತತ್ತ್ವದರ್ಶನದಲ್ಲಿ ಕುತೂಹಲವನ್ನೂ ತೋರಿಸಿದ್ದು ಸ್ವಾರಸ್ಯಕರವಾದ ಸಂಗತಿ. ಆತನು ಭಾರತದಲ್ಲಿ ಸಂದರ್ಶಿಸಿದ ಸನ್ಯಾಸಿಗಳು ಆತನ ದಿಗ್ವಿಜಯದ ನಿರರ್ಥಕತೆಯನ್ನು ದೃಷ್ಟಾಂತಪೂರ್ವಕವಾಗಿ ಆತನಿಗೆ ಮನವರಿಕೆಮಾಡಿಕೊಟ್ಟಂತೆಯೇ ತಪಸ್ಸು ವೈರಾಗ್ಯಗಳ ವೀರವ್ರತದ ಮಹತ್ತ್ವವನ್ನೂ ಮನವರಿಕೆಮಾಡಿಕೊಟ್ಟರು. ಅಲೆಕ್ಸಾಂಡರನ ಜತೆಗೆ ಬಂದಿದ್ದ, ಸಾಹಿತ್ಯದಲ್ಲಿಯೂ ವಿಜ್ಞಾನದಲ್ಲಿಯೂ ಉನ್ನತ ತಿಳಿವಳಿಕೆ ಹೊಂದಿದ್ದ, ಕೆಲವು ಅಧಿಕಾರಿಗಳೂ ಜತೆಗಾರರೂ ಯುದ್ಧದ ನೆನಪುಗಳನ್ನು ಬರೆದಿಟ್ಟು, ತನ್ಮೂಲಕವಾಗಿ ಭರತಖಂಡದ ಬಗೆಗೆ, ಅಲ್ಲಿಯ ಜನವರ್ಗಗಳ ಬಗೆಗೆ ತಮ್ಮ ಅನುಭವ ವಿಶೇಷಗಳನ್ನು ವಿವರಿಸಿದ್ದು ಚಾರಿತ್ರಿಕವಾಗಿ ಬಹಳ ಅನುಕೂಲಕರ ದಾಖಲೆಗಳಾಗಿ ಮುಂದಿನ ಚರಿತ್ರಕಾರರಿಗೆ ಒದಗಿತು.

ವಿನ್ಸೆಂಟ್ ಸ್ಮಿತ್ತರು ಅಲೆಕ್ಸಾಂಡರನ ದಿಗ್ವಿಜಯಾನಂತರದ ಭಾರತವನ್ನು ವರ್ಣಿಸಿರುವ ರೀತಿ ಸ್ವಾರಸ್ಯಕರವೂ ಸ್ಮರಣೀಯವೂ ಆಗಿದೆ: 'ಭಾರತವು ಏನೂ ಬದಲಾಯಿಸಲಿಲ್ಲ. ಯುದ್ಧದಲ್ಲಿ ಆದ ಗಾಯಗಳು ಬೇಗ ಮಾಯ್ದುವು. ಸುಟ್ಟು ಕಾಳಿನಂತಾಗಿದ್ದ ಹೊಲಗದ್ದೆಗಳಲ್ಲಿ ಮತ್ತೆ ತಾಳ್ಮೆಯ ಮೂರ್ತಿಗಳಾದ ಎತ್ತುಗಳು ಉಳುಮೆಗೆ ತೊಡಗಲು ಮಾಡಿದಂತೆ ಅಷ್ಟೇ ಮಟ್ಟಿಗೆ ತಾಳ್ಮೆಯ ಪ್ರತೀಕಗಳಾದ ಕೃಷಿಕರು ದುಡಿಮೆಗೆ ಕೈಹಚ್ಚಿದಂತೆ. ಹಸುರಿನ ನಗೆ ಹೊಮ್ಮಿತು. ಲಕ್ಷೋಪಲಕ್ಷವಾಗಿ ಕೊಲ್ಲಲ್ಪಟ್ಟು ಹಾಳುಬೀಡಾಗಿದ್ದ ವಸತಿಗಳು ಮತ್ತೆ ಜನಪ್ರವಾಹದಿಂದ ಕಿಕ್ಕಿರಿಯಿತು. ಅದು ತಗ್ಗಬೇಕಾದರೆ ಮನುಷ್ಯನ ಕ್ರೌರ್ಯ, ಪ್ರಕೃತಿಯ ವಿಕೋಪ ಎರಡರಿಂದಷ್ಟೇ ಸಾಧ್ಯ. ಭಾರತವು ಗ್ರೀಸ್ ಆಗಲಿಲ್ಲ. ಅದು ತನ್ನ ದಿವ್ಯ ನಿರ್ಲಿಪ್ತತೆಯ ಬದುಕನ್ನು ಎಂದಿನಂತೆ ಬಾಳಲು ಮೊದಲಿಟ್ಟಿತು. ಮ್ಯಾಸಿಡೋನಿಯದ ದಾಳಿಯ ಬಿರುಗಾಳಿಯನ್ನು ಬಹುಬೇಗ ಮರೆತುಬಿಟ್ಟಿತು. ಯಾವ ಭಾರತೀಯ ಲೇಖಕನೇ ಆಗಲಿ, ಆತನು ಹಿಂದುವೇ ಇರಲಿ ಅಥವಾ ಬೌದ್ಧನೋ ಜೈನನೋ ಆಗಿರಲಿ, ಅಲೆಕ್ಸಾಂಡರನನ್ನು ಕುರಿತು, ಆತನ ಕಾರ್ಯಗಳನ್ನು ಕುರಿತು ಎಷ್ಟು ಮಾತ್ರವೂ ದೃಷ್ಟಾಂತಿಸುವುದಿಲ್ಲ.'

ಮೌರ್ಯ ಸಾಮ್ರಾಜ್ಯ

ಅಲೆಕ್ಸಾಂಡರನ ವಿಜಯಯಾತ್ರೆಯು ಮೌರ್ಯಸಾಮ್ರಾಜ್ಯದ ಸುಭದ್ರವಾದ ಕಟ್ಟಡಕ್ಕೆ ತಕ್ಕ ಅಡಿಪಾಯವನ್ನು ಹಾಕಿತು. ಹಿಂದೆ ಪಿಪ್ಪಲಿವಾನದಲ್ಲಿ ಆಳುತ್ತಿದ್ದ ಮೋರಿಯವೆಂಬ ಕ್ಷತ್ರಿಯಕುಲಕ್ಕೆ ಸೇರಿದಂತೆ ತೋರುವ ಚಂದ್ರಗುಪ್ತ ಮೌರ್ಯನು ತಾನು ಯಶಸ್ವೀಕ್ರಾಂತಿಯಿಂದ ಪಡೆದುಕೊಂಡ ನಂದ ಸಾಮ್ರಾಜ್ಯಕ್ಕೆ ಪಂಜಾಬ್ ಮತ್ತು ಸಿಂಧ್ ಪ್ರಾಂತಗಳನ್ನು ಕೂಡಿಸಿ ಮೌರ್ಯಸಾಮ್ರಾಜ್ಯವನ್ನು ಬಲವಾಗಿ

ಕಟ್ಟಿ ಬೆಳೆಸುವುದಕ್ಕೆ ಅದರಿಂದ ಸಾಧ್ಯವಾಯಿತು. ಚಂದ್ರಗುಪ್ತನು ಮೌರ್ಯವಂಶಸ್ಥಾಪಕನಾಗಿ, ಗ್ರೀಕ್ ರಾಜಪ್ರತಿನಿಧಿಗಳನ್ನೂ ದಾಳಿಕಾರರನ್ನೂ ಪೂರ್ತಿಯಾಗಿ ಅಡಗಿಸಿ ಮ್ಯಾಸಿಡೋನಿಯದ ಆಳೊತ್ತಿನಿಂದ ದೇಶವನ್ನು ಮುಕ್ತಗೊಳಿಸಿ, ಮೊದಲಬಾರಿಗೆ ಭಾರತದ ಬಹುಭಾಗವನ್ನು ಒಂದೇ ಛತ್ರದಡಿಯಲ್ಲಿ ರಾಜಕೀಯವಾಗಿ ಒಗ್ಗೂಡಿಸಿ ವಿಖ್ಯಾತನಾದನು. ಆತನು ಪಿತ್ರಾರ್ಜಿತವಾದ ಸಿಂಹಾಸನವನ್ನು ಎಲ್ಲ ರಾಜರಂತೆ ಏರಿ ಆಳಿದವನಲ್ಲ, ಸಾಮಾನ್ಯವಾದ ಪ್ರದೇಶದಲ್ಲಿ ಹುಟ್ಟಿ ಉನ್ನತಿಗೇರಿದವನು. ಬ್ರಾಹ್ಮಣನಾದ ಕೌಟಿಲ್ಯನಿಂದ ನಂದರು ಉಚ್ಚಾಟಿತರಾಗಿ ಚಂದ್ರಗುಪ್ತನಿಗೆ ಆತನಿಂದಲೇ ಅಭಿಷೇಕವಾಯಿತೆಂದು ಪುರಾಣಗಳಲ್ಲಿ ಹೇಳಿದೆ.

ಚಂದ್ರಗುಪ್ತನ (ಸು. ಕ್ರಿ. ಪೂ. ೩೨೪–೩೦೦) ಸಾಮ್ರಾಜ್ಯವು ಕಾಶ್ಮೀರವನ್ನೂ ಕಳಿಂಗವನ್ನೂ ಬಿಟ್ಟು ಸಮಗ್ರ ಭರತಖಂಡವನ್ನೂ ಆಧುನಿಕ ಅಫ್ಘಾನಿಸ್ಥಾನ ಬಲೂಚಿಸ್ಥಾನಗಳನ್ನೂ ಒಳಕೊಂಡಿತ್ತೆಂದು ಕೆಲವರು ಚರಿತ್ರಕಾರರು ಹೇಳಿದ್ದಾರೆ. ಆತನ ಸೈನ್ಯದಲ್ಲಿ ಆರು ಲಕ್ಷ ಮಂದಿ ಸೈನಿಕರಿದ್ದರೆಂದು ೩೦ ಸಾವಿರ ಅಶ್ವದಳವೂ, ೯ ಸಾವಿರ ಆನೆಗಳೂ ಇದ್ದವೆಂದು ತಿಳಿಯುವುದು. ಆತನು ವೀರಯೋಧನೂ ರಾಜನೀತಿಜ್ಞನೂ ಉತ್ತಮ ಆಡಳಿತಗಾರನೂ ಆಗಿದ್ದನೆಂಬುದಕ್ಕೆ ಹಲವು ನಿದರ್ಶನಗಳಿವೆ. ಸೆಲ್ಯೂಕಸ್ಸಿನ ಗ್ರೀಕ್ ಸೈನ್ಯದೊಡನೆ ಹೋರಾಡಿದಾಗ ಆತನ ಶೌರ್ಯವೆಂತಹುದು ಎಂಬುದು ತಿಳಿಯಿತು; ಪರಸ್ಪರವಾಗಿ ಹೋರಾಡುತ್ತಿದ್ದ ಹಲವು ಪ್ರಾಂತಗಳನ್ನು ಒಗ್ಗೂಡಿಸಿದ ದೂರದೃಷ್ಟಿಯಲ್ಲಿ ಆತನ ರಾಜನೀತಿಜ್ಞತೆ ಕಂಡುಬಂದಿದೆ. ಮೆಗಾಸ್ತನೀಸನ ಬರವಣಿಗೆಗಳಿಂದ ಆತನು ಎಂತಹ ಸುಶಿಕ್ಷಿತ ಆಡಳಿತಗಾರನಾಗಿದ್ದನೆಂಬುದು ವಿಶದಪಟ್ಟಿದೆ.

ಚಂದ್ರಗುಪ್ತನು ವಿಶಾಲವಾದ ಸಾಮ್ರಾಜ್ಯವನ್ನು ಹಿಡಿತಕ್ಕೆ ಸಿಕ್ಕುವ ಹಾಗೆ ಸಣ್ಣ ಸಣ್ಣ ಪ್ರದೇಶಗಳಾಗಿ ವಿಭಜಿಸಿ ಅವುಗಳನ್ನು ಪ್ರಾಂತೀಯ ರಾಜ ಪ್ರಮುಖನೊಬ್ಬನ ಆಡಳಿತದಲ್ಲಿ ಬಿಡುತ್ತಿದ್ದನು. ಉನ್ನತಾಧಿಕಾರದ ಬಹುಭಾಗವು ಬೇರೆ ಬೇರೆ ಸ್ವಯಮಾಡಳಿತ ಶ್ರೇಣಿಗಳ ನಡುವೆ ಹಂಚಿಕೆಯಾಗಿದ್ದಿತು. ಗ್ರಾಮಘಟಕವು ಸ್ವಯಮಾಡಳಿತ ಪೌರಸಮಿತಿಯೋ ಗಣರಾಜ್ಯವೋ ಎಂಬಂತೆ ಇದ್ದು ಗ್ರಾಮವಾಸಿಗಳಿಗೆ ತಮ್ಮ ಸ್ಥಳೀಯ ವಿದ್ಯಮಾನಗಳ ನಿರ್ವಹಣೆಗೆ ಉಚಿತವಾದ ರೀತಿಯಲ್ಲಿ ಅವಕಾಶವನ್ನು ಕಲ್ಪಿಸಿರುತ್ತಿದ್ದಿತು. ಪಾಟಲೀಪುತ್ರದಂತಹ ಒಂದು ಸ್ಥಳದಿಂದಲೇ ಎಲ್ಲ ಕಾರ್ಯವನ್ನೂ ನಿಯಂತ್ರಿಸುವುದು ಸಾರಿಗೆ ಸಂಪರ್ಕಗಳು ತ್ವರಿತವೂ ಸುಲಭವೂ ಅಲ್ಲದ ಆ ಕಾಲದಲ್ಲಿ ಸಾಧ್ಯವಿರಲಿಲ್ಲವೆಂದು ಈ ರಾಜ್ಯಪದ್ಧತಿಯನ್ನು ಚಂದ್ರಗುಪ್ತನು ಯೋಜಿಸಿದ್ದನು.

ಚಂದ್ರಗುಪ್ತನ ಆಸ್ಥಾನಕ್ಕೆ ರಾಯಭಾರಿಯಾಗಿ ಬಂದಿದ್ದ ಮೆಗಾಸ್ತನೀಸನ ಬರವಣಿಗೆಗಳಿಂದ ಆ ಕಾಲದ ರಾಜ್ಯಪದ್ಧತಿಯ ಕೆಲವು ವಿವರಗಳು ತಿಳಿದುಬರುತ್ತವೆ. ರಾಷ್ಟ್ರದ ಉನ್ನತಾಧಿಕಾರಿಯಾದ ರಾಜನಿಗೆ ದೇಶದ ಭದ್ರತೆ, ನ್ಯಾಯವಿತರಣೆ, ಪ್ರಜಾಹಿತಕಾರ್ಯ—ಮೊದಲಾದ ಎಲ್ಲ ವಿಭಾಗಗಳೂ ಸೇರಿದ್ದಾಗಿತ್ತು. ಆತನು ಕಷ್ಟಪಟ್ಟು ಕೆಲಸಮಾಡುವ ಅಧಿಕಾರಿ. ಹಗಲುಹೊತ್ತು ಮಲಗುತ್ತಿರಲಿಲ್ಲ. ಆತನು ಸ್ವಂತ ಸೌಕರ್ಯಗಳನ್ನು ಕೂಡ ಲಕ್ಷಿಸದೆ ಓಲಗಸಾಲೆಯಲ್ಲಿ ದಿನವಿಡೀ ಇದ್ದುಕೊಂಡು ಸಾರ್ವಜನಿಕ ಕಾರ್ಯಗಳನ್ನು ಪರಿಶೀಲಿಸುತ್ತಿದ್ದನು. ಸಾರ್ವಜನಿಕ ವ್ಯವಹಾರಗಳಲ್ಲಿ ಆತನಿಗೆ ಒಂದು ಸಲಹೆಗಾರ ಸಮಿತಿ (ಮಂತ್ರಿಪರಿಷದ್) ನೆರವು ನೀಡುತ್ತಿದ್ದಿತು. ಈ ಸಮಿತಿ ಅಲ್ಪಸಂಖ್ಯಾಕವಾಗಿದ್ದರೂ ಅತ್ಯಂತ ಪ್ರಭಾವಶಾಲಿಯಾಗಿದ್ದು ರಾಜಪ್ರಮುಖರು ಮುಂತಾದ ಉನ್ನತಾಧಿಕಾರಿಗಳನ್ನು ಆಯುತ್ತಿದ್ದಿತು. ಪತಂಜಲಿಯ ಮಹಾಭಾಷ್ಯದಲ್ಲಿ 'ಚಂದ್ರಗುಪ್ತ ಸಭೆ'ಯೆಂದಿರುವುದನ್ನು ಇಲ್ಲಿ ಗಮನಿಸಬಹುದು. ದೊರೆಯು ನಗರದಲ್ಲಿಯೂ ಸೈನ್ಯದಲ್ಲಿಯೂ ಗಮನಾರ್ಹವಾದ ಸುದ್ದಿಯನ್ನು ಸಂಗ್ರಹಿಸಲು ಗೂಢಚರರ ದೊಡ್ಡ ಪಡೆಯನ್ನೇ ಇಟ್ಟುಕೊಂಡಿದ್ದನು.

ಮೆಗಾಸ್ತನೀಸ್ ಸುವ್ಯವಸ್ಥಿತವಾದ ಆಡಳಿತಘಟಕವು ಜಿಲ್ಲಾಧಿಕಾರಿಗಳು, ಪೌರಾಧಿಕಾರಿಗಳು ಮತ್ತು ಯುದ್ಧಕಛೇರಿಯ ಸದಸ್ಯರು—ಎಂಬುದಾಗಿ ಮೂರುವರ್ಗಗಳ ಜನರಿಂದ ಕೂಡಿದ್ದುದಾಗಿ ವರ್ಣಿಸಿದ್ದಾನೆ. ಇವುಗಳಲ್ಲಿ ಎರಡನೆಯ ವರ್ಗದವರು ೫ ಜನಕ್ಕೆ ಒಂದು ಸಮಿತಿಯಂತೆ ೬ ಸಮಿತಿಗಳನ್ನು ಮಾಡಿಕೊಂಡು ಕಾರ್ಯನಿರ್ವಹಣೆ ಮಾಡುತ್ತಿದ್ದರು. ಈ ಆರು ಸಮಿತಿಗಳೂ ಬೇರೆ ಬೇರೆ

ಯಾದ ತಮ್ಮ ಕಾರ್ಯಭಾರಗಳಲ್ಲದೆ ಸಾರ್ವಜನಿಕ ಕಾರ್ಯಗಳು ಬೆಲೆಗಳು ಬಂದರುಗಳು ದೇವಾಲಯಗಳು—ಇವುಗಳ ಮೇಲ್ವಿಚಾರಣೆಯನ್ನು ಒಟ್ಟಾಗಿಯೂ ನಿರ್ವಹಿಸುತ್ತಿದ್ದವು.

ಜಿಲ್ಲಾಮಟ್ಟದಲ್ಲಿಯೂ ನಾನಾ ಅಧಿಕಾರಿಗಳ ವರ್ಗವಿದ್ದಿತು. ನದಿಗಳ ಮೇಲ್ವಿಚಾರಣೆ, ಭೂಮಿಯ ಅಳತೆಕಾರ್ಯ, ತೂಬುಗಳ ಪರಿಶೀಲನೆ—ಇವನ್ನು ನೋಡಿಕೊಳ್ಳಲು ಭೂಮಿ ಮತ್ತು ನೀರಾವರಿ ಅಧಿಕಾರಿಗಳಿದ್ದರು. ಹೀಗೆಯೇ ವ್ಯವಸಾಯ ಅರಣ್ಯಪಾಲನೆ ದಾರುಕರ್ಮ ಲೋಹಕರ್ಮ ಮೊದಲಾದವುಗಳಿಗೆ ಸಂಬಂಧಿಸಿದ ಅಧಿಕಾರಿಗಳೂ ಇದ್ದರು. ದೊರೆಯ ಸಲಹೆಗಾರರು, ಸರ್ಕಾರದ ಕೋಶಾಧಿಕಾರಿಗಳು, ನ್ಯಾಯಪಾಲಕರು, ಸೇನಾಧಿಕಾರಿಗಳು—ಹೀಗೆ ಇನ್ನೂ ಕೆಲವು ಅಧಿಕಾರಿಗಳನ್ನು ಗ್ರೀಕ್ ಲೇಖಕರು ಉಲ್ಲೇಖಿಸಿದ್ದಾರೆ. ಶಸ್ತ್ರಗಳ ತಯಾರಿಕೆಗಾರರೂ ನಾವೆಗಳನ್ನು ಕಟ್ಟುವವರೂ ಸರ್ಕಾರದ ಕೆಲಸಗಾರರಾಗಿ ದುಡಿಯುತ್ತಿದ್ದರು.

ಮೆಗಾಸ್ತನೀಸ್ ಮೌರ್ಯಕಾಲೀನ ಸೈನ್ಯದ ಆಡಳಿತ ವಿಧಾನವನ್ನೂ ವಿವರಿಸಿದ್ದಾನೆ. ೩೦ ಸದಸ್ಯರಿರುತ್ತಿದ್ದ ೬ ಸಮಿತಿಗಳ ಯುದ್ಧ ಕಛೇರಿಯೊಂದು ಸೈನ್ಯಸಮಸ್ತವನ್ನೂ ನಿಯಂತ್ರಿಸುತ್ತಿದ್ದಿತು. ಆ ಸಮಿತಿಗಳು ನಿರ್ವಹಿಸುತ್ತಿದ್ದ ಶಾಖೆಗಳು ಈ ಪ್ರಕಾರವಾಗಿವೆ: (i) ಪದಾತಿಸೇನೆ; (ii) ಅಶ್ವಸೇನೆ; (iii) ರಥಗಳು; (iv) ಗಜಸೈನ್ಯ; (v) ಸಾರಿಗೆ ಸಂಪರ್ಕ ಮತ್ತು ಸೇನಾಪರಿಚರ್ಯೆಯ ಕಾರ್ಯಗಳು; (vi) ನೌಕಾಧಿಕಾರಿಯೊಡನೆ ಸಹಕರಿಸುವುದು. ಈ ಸಮಿತಿಗಳ ಕಾರ್ಯಭಾರವನ್ನೂ ವಿವರಿಸಲಾಗಿದೆ. ಹಾಗೆಯೇ ಸೈನಿಕರ ಸಂಬಳ ಸಾರಿಗೆ, ಜೀವನ ನಿರ್ವಹಣೆಯನ್ನು ಕುರಿತ ವಿವರಣೆಗಳು ಕೂಡ ದೊರೆಯುತ್ತವೆ. ಅರ್ರಿಯನ್ ನಿಯಾರ್ಕಸ್, ಮೊದಲಾದವರು ಮೌರ್ಯರ ಕಾಲದ ಯೋಧರ ಶಸ್ತ್ರಾಸ್ತ್ರಗಳು ಮತ್ತು ಅವನ್ನು ಅವರು ಉಪಯೋಗಿಸುವ ವಿಧಾನ ಇವನ್ನು ವಿಶದವಾಗಿ ಸ್ವಾರಸ್ಯವಾಗಿ ವರ್ಣಿಸಿದ್ದಾರೆ.

ಮೆಗಾಸ್ತನೀಸ್ ರಾಜಧಾನಿಯ ಉಲ್ಲೇಖಗಳ ಬಹ್ವಂಶಗಳೊಡನೆ ಕೌಟಿಲ್ಯನ ಅರ್ಥಶಾಸ್ತ್ರದ ಉಲ್ಲೇಖಗಳು ಸರಿಬರುತ್ತವೆ. ಮೌರ್ಯ ರಾಜ್ಯಾಡಳಿತಪದ್ಧತಿಯ ವಿವಿಧ ಮುಖಗಳನ್ನು ವಿವಿಧ ಶಾಖೆಗಳ ಕಲಾಪಗಳನ್ನು ಸಮಂಜಸವಾದ ರೀತಿಯಲ್ಲಿ ವಿಸ್ತಾರವಾಗಿ ಅರ್ಥಶಾಸ್ತ್ರದಲ್ಲಿ ವರ್ಣಿಸಿದೆ.

ಚಂದ್ರಗುಪ್ತನ ಕಾಲದ ಆಸ್ಥಾನ ಜೀವನದ ಬಗೆಗೆ ಕೂಡ ಗ್ರೀಕ್ ಲೇಖಕರ ನಿರೂಪಣೆಗಳಿಂದ ಸ್ವಾರಸ್ಯಕರ ಸಂಗತಿಗಳು ತಿಳಿದುಬರುತ್ತವೆ. ರಾಜಾಸ್ಥಾನವು ವೈಭವಶಾಲಿಯಾದುದಾಗಿತ್ತು. ಕ್ಯೂರಿಟಸ್ ಎಂಬ ಗ್ರೀಕ್ ಲೇಖಕನೊಬ್ಬನು ತನ್ನನ್ನು ರಾಜಾಸ್ಥಾನಕ್ಕೆ ಅದ್ದೂರಿಯ ಬಂಗಾರದ ಮೇನೆಯಲ್ಲಿ ಕರೆದೊಯ್ಯಲಾಯಿತೆಂದು ಹೇಳಿಕೊಂಡಿದ್ದಾನೆ. ಈ ಮೇನೆಯನ್ನು ರಾಜರ ಅಂಗರಕ್ಷಕ ಪಡೆಯವರೂ ಸೈನಿಕರೂ ಅನುಸರಿಸುತ್ತಿದ್ದರು; ಅಲ್ಲದೆ ಕೆಲವರು ಜೀವಂತಪಕ್ಷಿಗಳನ್ನು ಹಿಡಿದಿದ್ದ ಮರದ ರೆಂಬೆಗಳನ್ನು ಹಿಡಿದು ಒಯ್ಯುತ್ತಿದ್ದರಂತೆ! ಹೀಗೆಯೇ ದೊರೆಯ ಬೇಟೆಯ ಆಸಕ್ತಿ, ವಿವಿಧ ಪ್ರಾಣಿಗಳ ಬಗೆಬಗೆಯ ಕಾಳಗಗಳನ್ನು ವೀಕ್ಷಿಸುವ ವಿನೋದಪ್ರಿಯತೆ, ವೈಭವಾನ್ವಿತವಾದ ಮೆರವಣಿಗೆ, ರಾಜಾಲಯ ಮತ್ತು ರಾಜಧಾನಿ ಇವನ್ನು ಕುರಿತು ವರ್ಣನೆಗಳೂ ಸ್ವಾರಸ್ಯಕರವಾಗಿವೆ. ಚಂದ್ರಗುಪ್ತನ ಅರಮನೆ ವೈಭವಪೂರ್ಣವಾಗಿ ಅಲಂಕೃತವಾಗಿದ್ದಿತು. ಬಂಗಾರದ ಮುಲಾಮು ಬಳಿದ ಕಂಬಗಳಿಗೆ ಬಂಗಾರದ ಕೆಲಸ ಮಾಡಿದ ಬಳ್ಳಿಗಳು ಸುತ್ತಿಕೊಂಡಂತೆ ಕೆತ್ತನೆಯಾಗಿದ್ದಿತು. ಅವುಗಳನ್ನು ಬೆಳ್ಳಿಯ ಹಕ್ಕಿಗಳು ಅಲಂಕರಿಸಿದ್ದುವು. ದೇಶ ವಿದೇಶಗಳ ಬಗೆ ಬಗೆಯ ಗಿಡಬಳ್ಳಿಗಳ ಉದ್ಯಾನವನಗಳೂ ಅವುಗಳಲ್ಲಿ ಬಗೆಬಗೆಯ ಗಾತ್ರದ ಮೀನುಗಳು ತುಂಬಿದ ಕೃತಕ ಸರೋವರಗಳೂ ನಿರ್ಮಾಣವಾಗಿದ್ದಿತು. ಆ ಸರೋವರಗಳಲ್ಲಿ ನೌಕಾವಿಹಾರಕ್ಕೆ ವ್ಯವಸ್ಥೆಯಿದ್ದಿತು. ರಾಜಧಾನಿಯಾದ ಪಾಟಲಿಪುತ್ರದ ಕೋಟೆಯ ಗೋಡೆಗೆ ೬೪ ದ್ವಾರಗಳೂ ೫೭೦ ಗೋಪುರಗಳೂ ಇದ್ದವು. ನಗರವು ಸು. ೧೦ ಮೈಲಿ ಉದ್ದ, ೨ ಮೈಲಿ ಅಗಲದ ಪ್ರದೇಶದಲ್ಲಿ ಹಬ್ಬಿದ್ದಿತು. ಮೈಲಿಗಲ್ಲುಗಳನ್ನು ಹೆದ್ದಾರಿಗಳಲ್ಲಿ ದೂರಗಳನ್ನು ಗುರುತಿಸಲು ನಟ್ಟಿದ್ದಿತು. ರಸ್ತೆ ರಿಪೇರಿ, ಮೈಲಿಗಳನ್ನು ನಿಲ್ಲಿಸುವುದಕ್ಕೆ ಪ್ರತ್ಯೇಕ ಅಧಿಕಾರಿಗಳಿದ್ದರು.

ಮೌರ್ಯಕಾಲೀನ ಜನಜೀವನದ ಬಗೆಗೆ ಕೆಲವು ಸಂಗತಿಗಳನ್ನು ನೋಡಬಹುದು: ಮೆಗಾಸ್ತನೀಸನ ಬರವಣಿಗೆಗಳ ಮೇಲಿನಿಂದ ಅಂದಿನ ಸಾಮ್ರಾಜ್ಯ ಜೀವನದಲ್ಲಿ ಶಾಂತಿ ಸಂತೃಪ್ತಿಗಳೂ ಸುಭಿಕ್ಷವೂ ನೆಲಸಿದ್ದವೆಂದು ತಿಳಿಯುತ್ತದೆ. ಪ್ರಜೆಗಳು ಕಟ್ಟುಮಸ್ತಾಗಿದ್ದರು. ಕಲೆಯಲ್ಲಿ ಕುಶಲಿಗಳಾಗಿದ್ದರು.

ಯಥೇಚ್ಛವಾಗಿ ಒದಗುತ್ತಿದ್ದ ನದೀಜಲದ ಆಸರೆಯಿಂದ ಭೂಮಿ ಫಲವತ್ತಾಗಿ ದವಸಧಾನ್ಯಗಳು ಸಮೃದ್ಧವಾಗಿ ಬೆಳೆಯುತ್ತಿದ್ದವು. ಖನಿಜ ಸಂಪತ್ತು ಉತ್ತಮವಾಗಿದ್ದು ಯುದ್ಧೋಪಕರಣಗಳನ್ನೂ ಪಾತ್ರೆಪದಾರ್ಥಗಳನ್ನೂ ಅವುಗಳಿಂದ ಮಾಡಿಕೊಳ್ಳುತ್ತಿದ್ದರು. ವರ್ಷಕ್ಕೆ ಎರಡು ಬೆಳೆ ತೆಗೆಯುತ್ತಿದ್ದುದರಿಂದ ಪುಷ್ಟಿಕರವಾದ ಹಣ್ಣುಹಂಪಲು ಬೆಳೆಯುತ್ತಿದ್ದುದರಿಂದ ಧಾನ್ಯಕ್ಷಾಮವೆಂಬುದು ಇರಲಿಲ್ಲ. ಯುದ್ಧವು ನಡೆಯುತ್ತಿರುವಲ್ಲಿ ಉಭಯಪಕ್ಷಗಳಿಂದಲೂ ಕೃಷಿಯ ಕ್ಷೇತ್ರಗಳಿಗಾಗಲಿ ಕೃಷಿಕರಿಗಾಗಲಿ ಯಾವ ಹಾನಿಯೂ ಉಂಟಾಗುತ್ತಿರಲಿಲ್ಲ. ಸಮಾಜದಲ್ಲಿ ಗೌರವಾನ್ವಿತಸ್ಥಾನ ಗಳಿಸಿದ್ದ ಕೃಷಿಕರೇ ಅಧಿಕ ಸಂಖ್ಯೆಯಲ್ಲಿದ್ದರು. ನಗರಗಳ ಸಂಖ್ಯೆಯೂ ವಿಶೇಷವಾಗಿದ್ದು ಅವನ್ನು ಸಾಮಾನ್ಯವಾಗಿ ನದಿತೀರ ಸಮುದ್ರತೀರಗಳಲ್ಲಿ ಕಟ್ಟಲಾಗುತ್ತಿದ್ದಿತು. ಪ್ರವಾಹದಿಂದಲೂ ವರ್ಷಾಪಾತದ ಹಾವಳಿಗಳಿಂದಲೂ ರಕ್ಷಿಸಲು ನಗರನಿರ್ಮಾಣದಲ್ಲಿ ಮರಗಳನ್ನೇ ಹೆಚ್ಚಾಗಿ ಬಳಸುತ್ತಿದ್ದರು. ಚಂದ್ರಗುಪ್ತನು ಜನತೆಯ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದನು. ಆಸ್ತಿಪಾಸ್ತಿಗಳು ಅರಕ್ಷಿತಸ್ಥಿತಿಯಲ್ಲಿದ್ದು ಕೂಡ ಕಳ್ಳತನ ಅತಿ ವಿರಳವಾಗಿತ್ತು. ಜನರು ಸರಳಜೀವಿಗಳಾದರೂ ಒಡವೆ ವಸ್ತುಗಳನ್ನು ಬಯಸುತ್ತಿದ್ದರು. ವ್ಯಾಪಾರ ವಾಣಿಜ್ಯವೂ ಕಲೋದ್ಯಮಗಳೂ ಉತ್ತಮಸ್ಥಿತಿಯಲ್ಲಿದ್ದವು.

ಚಂದ್ರಗುಪ್ತನು ತನ್ನ ವೃದ್ಧಾಪ್ಯದಲ್ಲಿ ಸಿಂಹಾಸನವನ್ನು ತ್ಯಜಿಸಿ ಭದ್ರಬಾಹುಕೇವಲಿಯ ಜತೆಯಲ್ಲಿ ದಕ್ಷಿಣಕ್ಕೆ ಪ್ರಯಾಣಮಾಡಿ ಬಂದು ಶ್ರವಣಬೆಳ್ಗೊಳದಲ್ಲಿ ನೆಲಸಿ ಮುನಿಯ ಪರಿಚರ್ಯೆಯಲ್ಲಿ ಕೆಲಕಾಲ ವಿದ್ದು ಸಲ್ಲೇಖನವ್ರತದಿಂದ ಪ್ರಾಣವನ್ನು ಬಿಟ್ಟನೆಂಬುದಾಗಿ (ಕ್ರಿ.ಪೂ. ೨೯೮) ತಿಳಿಯುತ್ತದೆ. ಕರ್ಣಾಟಕಕ್ಕೆ ಜೈನಧರ್ಮದ ಪ್ರವೇಶವಾದುದನ್ನು ತಿಳಿಸುವ ಈ ಸಂದರ್ಭ ಇಲ್ಲಿಯ ಇತಿಹಾಸದ ದೃಷ್ಟಿಯಿಂದಲೂ ಗಮನಾರ್ಹವಾದದ್ದಾಗಿದೆ.

ಚಂದ್ರಗುಪ್ತನ ತರುವಾಯ ಆತನ ಪುತ್ರ ಬಿಂದುಸಾರನು (ಕ್ರಿ. ಪೂ. ಸು. ೩೦೦–೨೭೩) ತಂದೆಯಿಂದ ಪಡೆದುಕೊಂಡ ರಾಜ್ಯವನ್ನು ಯೋಗ್ಯರೀತಿಯಿಂದ ನಿರ್ವಹಿಸಿದನು. ಗ್ರೀಕ್ ಅರಸರ ಜತೆಯಲ್ಲಿ ಸ್ನೇಹಪರವಾದ ಸಂಬಂಧವನ್ನಿಟ್ಟುಕೊಂಡಿದ್ದನು. ಈತನ ಕಾಲದ ಒಂದು ಘಟನೆ ಅಂದಿನ ಜನಜೀವನದ ವಿಚಾರಧೋರಣೆಗೆ ಕನ್ನಡಿ ಹಿಡಿಯುತ್ತದೆ. ತಕ್ಷಶಿಲೆಯಲ್ಲಿ ಒಂದು ಕ್ರಾಂತಿಯೆದ್ದಿತು. ಅದನ್ನು ಅಡಗಿಸಲು ಬಿಂದುಸಾರನು ತನ್ನ ಮಗ ಅಶೋಕನನ್ನು ಕಳುಹಿಸಿದನು. ಸೈನ್ಯಸಮೇತನಾಗಿ ಅಶೋಕನು ನಗರಕ್ಕೆ ಬಂದು ಮುಟ್ಟಿದಾಗ, ಅಲ್ಲಿಯ ಪೌರರು 'ನಾವು ರಾಜನಿಗಾಗಲಿ ರಾಜಕುಮಾರನಿಗಾಗಲಿ ವಿರೋಧಿಗಳಲ್ಲ. ನಮ್ಮನ್ನು ಹೀನಾಯಮಾಡುವ ಅಧಿಕಾರಿಗಳಿಗೆ ಮಾತ್ರ ನಾವು ವಿರೋಧಿಗಳು'— ಎಂದು ಅರಿಕೆ ಮಾಡಿದರು. ಈ ಘಟನೆಯು ಸರ್ಕಾರ ಮಾಡುವುದನ್ನೆಲ್ಲ ಪ್ರಜೆಗಳು ಕಣ್ಣುಮುಚ್ಚಿ ಒಪ್ಪಿಕೊಳ್ಳುತ್ತಿರಲಿಲ್ಲ ಎಂಬುದನ್ನು ಹೇಳುತ್ತದೆ. ಬಿಂದುಸಾರನಿಗೆ ಸಾಂಸ್ಕೃತಿಕ ವಿಷಯಗಳಲ್ಲಿ ಆಸಕ್ತಿಯೂ ತತ್ತ್ವಶಾಸ್ತ್ರದಲ್ಲಿ ಕುತೂಹಲವೂ ಇದ್ದಿತೆಂಬುದಕ್ಕೆ ನಿದರ್ಶನವಿದೆ. ಕಳಿಂಗದಲ್ಲಿಯೂ ಮೈಸೂರಿನಲ್ಲಿಯೂ ದೊರೆತ ಶಾಸನಗಳು ನಂದರು, ಚಂದ್ರಗುಪ್ತ ಮತ್ತು ಅಶೋಕನನ್ನು ಕುರಿತಾಗಿ ಕೆಲವು ವಿವರಗಳನ್ನು ನೀಡುತ್ತವೆಯಾದರೂ ಬಿಂದುಸಾರನ ಬಗೆಗೆ ಏನನ್ನೂ ಹೇಳುವುದಿಲ್ಲ.

ಅಶೋಕ (ಸು. ಕ್ರಿ. ಪೂ. ೨೭೩–೨೩೬): ಬಿಂದುಸಾರನ ಹಲವರು ಮಕ್ಕಳಲ್ಲಿ ತಂದೆಗೆ ಮೆಚ್ಚಾದವನೆಂದು ತೋರುವ ಅಶೋಕನು ತನ್ನ ಸಾಮರ್ಥ್ಯ ಮತ್ತು ದಕ್ಷತೆಗಳಿಂದಾಗಿ ಆತನಿಂದ ಯುವರಾಜನಾಗಿ ನೇಮಕವಾದನು. ಆತನು ರಾಜನಾದ ಮೇಲೆ ವಿಸ್ತಾರವಾದ ಸಾಮ್ರಾಜ್ಯದ ಒಡೆಯನಾದನು. ಉತ್ತರದಲ್ಲಿ ಹಿಂದೂಕುಶ್ ಪರ್ವತಗಳವರೆಗೆ ಅಫ್ಘಾನಿಸ್ತಾನ, ಬಲೂಚಿಸ್ತಾನ, ಸಿಂಧ್, ಸ್ವಾತ್ ಕಣಿವೆ, ಕಾಶ್ಮೀರ ಮತ್ತು ನೇಪಾಳ—ಇವನ್ನೆಲ್ಲ ಇವನ ರಾಜ್ಯ ಒಳಕೊಂಡಿದ್ದಿತು. ಇತ್ತ ದಕ್ಷಿಣದಲ್ಲಿ ಕಾಂಚಿಯ ಉತ್ತರಭಾಗದವರೆಗೆ ಅದು ಹಬ್ಬಿದ್ದಿತು; ಪರ್ಷಿಯಾದಿಂದ ಹಿಡಿದು ದಕ್ಷಿಣ ಭಾರತದವರೆಗೆ ಕೂಡ ವ್ಯಾಪಿಸಿತ್ತು ಎನ್ನಬಹುದು.

ಭರತಖಂಡದ ಚರಿತ್ರೆಯಲ್ಲಿ ಅಶೋಕನ ಹೆಸರು ಸುವಿಖ್ಯಾತವಾದುದು. ಪ್ರಸಿದ್ಧ ಚರಿತ್ರಕಾರರು ಆತನನ್ನು ಪರಮೋನ್ನತನಾದ ಪ್ರಭುವೆಂದು ಹೊಗಳಿದ್ದಾರೆ. ಆತನ ಸಾಮ್ರಾಜ್ಯದ ವಿಸ್ತಾರದಂತೆ ಆತನ ವ್ಯಕ್ತಿತ್ವದ ಉದಾತ್ತತೆಯಿದ್ದಿತು. ಆತನ ರಾಜಕೀಯ ಸಾಧನೆ, ಆಡಳಿತವ್ಯವಸ್ಥೆ, ಧರ್ಮ

ಶ್ರದ್ಧೆ, ಧರ್ಮಪ್ರಸಾರ, ಜೀವನದೃಷ್ಟಿ—ಇವೆಲ್ಲ ಆತನೇ ಬರೆಯಿಸಿ ಹಾಕಿದ ಬಂಡೆಗಲ್ಲು ಶಾಸನಗಳಲ್ಲಿಯೂ ಸ್ತಂಭಶಾಸನಗಳಲ್ಲಿಯೂ ಸುಪ್ರಕಟವಾಗಿದ್ದು. ಅವು ಭರತಖಂಡದ ನಾನಾ ಭಾಗಗಳಲ್ಲಿ ಮೂವತ್ತಕ್ಕೆ ಮೇಲ್ಪಟ್ಟು ದೊರೆತಿವೆ. ಪಾಲಿ ಮತ್ತು ಸಂಸ್ಕೃತ ಭಾಷೆಗಳಲ್ಲಿರುವ ಕೆಲವು ಸಾಹಿತ್ಯಕ ಉಲ್ಲೇಖಗಳೂ ಶಾಸನಗಳೂ ಆತನ ಜೀವನ ಸಾಧನೆಗಳ ಸ್ಪಷ್ಟ ಸಮಗ್ರಚಿತ್ರವನ್ನು ಕೊಡಲು ಸಮರ್ಥವಾಗಿವೆ.

ಪ್ರಥಮವಾಗಿ ಸ್ವಕೀಯ ರಾಜಕೀಯ ಸಾಧನೆಗಳನ್ನೂ ಧ್ಯೇಯಾದರ್ಶಗಳನ್ನೂ ದಾಖಲೆಮಾಡುವುದಕ್ಕೆ ಅಶೋಕನೇ ಮೊದಲ ಭಾರತೀಯ ಪ್ರಭು. ಆತನ ಶಾಸನಗಳಲ್ಲಿ ೧೪ ಬಂಡೆಗಲ್ಲು ಶಾಸನಗಳು ಏಳು ಸ್ಥಳಗಳಲ್ಲಿ ದೊರೆತಿವೆ; ಕೆಲವು ಕಿರುಬಂಡೆ ಶಾಸನಗಳಲ್ಲಿ ರಾಯಚೂರಿನ ಮಾಸ್ಕಿ, ಚಿತ್ರದುರ್ಗದ ಸಿದ್ದಾಪುರ, ಬ್ರಹ್ಮಗಿರಿ, ಜಟಿಂಗರಾಮೇಶ್ವರ ಇವುಗಳಲ್ಲಿ ದೊರೆತವನ್ನು ಮುಖ್ಯವಾಗಿ ಇಲ್ಲಿ ಗಮನಿಸಬಹುದು. ಸ್ತಂಭಶಾಸನಗಳೆಲ್ಲ ವಿಶೇಷವಾಗಿ ಉತ್ತರಭಾರತದಲ್ಲಿ ದೊರೆತಿವೆ. ಇವುಗಳಲ್ಲಿಯೂ ಹಿರಿಯ ಮತ್ತು ಕಿರಿಯ ಸ್ತಂಭಶಾಸನಗಳೆಂದು ಎರಡು ಬಗೆಗಳಿವೆ. ಇವಲ್ಲದೆ ೪ ಗುಹಾಶಾಸನಗಳು ಕೂಡ ಕಂಡುಬಂದಿವೆ. ಈ ಶಾಸನಗಳ ಭಾಷೆ ಪ್ರಾಕೃತ, ಲಿಪಿ ಬ್ರಾಹ್ಮೀ. ಎರಡು ಶಾಸನಗಳ ಲಿಪಿ ಮಾತ್ರ ಖರೋಷ್ಠಿಯಲ್ಲಿದೆ. ಈ ಶಾಸನಗಳಲ್ಲೆಲ್ಲ ಅಶೋಕನ ಧ್ಯೇಯಾದರ್ಶಗಳು, ಘನತತ್ತ್ವಗಳು ಘೋಷಣೆಗಳ ಸಂದೇಶಗಳ ರೂಪದಲ್ಲಿ ಆತ್ಮೀಯಭಾವದಿಂದ ಕಂಡರಣೆಯಾಗಿವೆ.

ಅಶೋಕನ ಹೆಸರು ಸಾಮಾನ್ಯವಾಗಿ ಶಾಸನಗಳಲ್ಲಿ 'ದೇವಾನಾಂಪ್ರಿಯ', 'ಪ್ರಿಯದರ್ಶಿ' ಎಂದು ಮಾತ್ರ ಕಂಡುಬರುತ್ತದೆ. ಮಾಸ್ಕಿಯ ಕಿರುಬಂಡೆಶಾಸನದಲ್ಲಿ ಮತ್ತು ಗುಜರ್ರಾ ಶಾಸನದಲ್ಲಿ ಮಾತ್ರ 'ಅಶೋಕ' ಎಂಬುದಾಗಿ ಹೆಸರನ್ನು ಹೇಳಿದೆ ('ದೇವಾನಾಂಪಿಯಸ ಅಸೋಕಸ'). ಪದವಿ ಸೂಚಕವಾಗಿ ಕೇವಲ 'ರಾಜ'ಶಬ್ದವನ್ನು ಹಾಕಿಕೊಂಡಿರುವನಲ್ಲದೆ ಇತರ ಚಕ್ರವರ್ತಿಗಳ ಹಾಗೆ ಅದ್ದೂರಿಯ ಬಿಂಕದ ಬಿರುದು ಬಾವಲಿಗಳನ್ನು ಹಾಕಿಕೊಂಡಿಲ್ಲ.

ಅಶೋಕನು ಚಕ್ರವರ್ತಿಯಾದ ಮೇಲೆ ಕೈಕೊಂಡ ಒಂದೇ ಒಂದು ವಿಜಯಯಾತ್ರೆ ಕಲಿಂಗದ ಮೇಲೆ ನಡೆದುದಾಗಿದ್ದು. ಯುದ್ಧದ ಘೋರ ಪರಿಣಾಮವೂ ಅಪಾರಜನಹಾನಿಯೂ ಆತನ ಮನಸ್ಸನ್ನು ಕರಗಿಸಿ ಆತನ ಜೀವನದೃಷ್ಟಿಯನ್ನೆ ಬದಲಾಯಿಸಿಬಿಟ್ಟಿತು. ೧೩ನೆಯ ಬಂಡೆಗಲ್ಲುಶಾಸನದಲ್ಲಿ ಇದನ್ನು ಚೆನ್ನಾಗಿ ನಿರೂಪಿಸಿದೆ. ಇಂತಹ ಒಂದು ಸನ್ನಿವೇಶದಲ್ಲಿ ಇಂತಹುದೊಂದು ಶಾಸನವನ್ನು ಹಾಕಿಸಿದ್ದು ಪ್ರಪಂಚದಲ್ಲಿಯೇ ಇನ್ನೊಂದು ಕಂಡುಬರುವುದಿಲ್ಲ. ಅಂದಿನಿಂದ ಆತನು ತನ್ನ ಸರ್ವಚೈತನ್ಯಶಕ್ತಿಯನ್ನೂ ರಾಜ್ಯದ ಸಮಸ್ತ ಸಾಧನಸಂಪತ್ತಿಯನ್ನೂ ಒಂದು ಘನವಾದ ಉದ್ದೇಶಕ್ಕೆ ವಿನಿಯೋಗಿಸಲು ಮನಸ್ಸು ಮಾಡಿದನು. ಹೊಲ್ಲ ಯುದ್ಧವನ್ನು ಪೂರ್ತಿಯಾಗಿ ನಿಲ್ಲಿಸಿ, ಸಮದೃಷ್ಟಿ ಶಾಂತಿಗಳನ್ನು ತನ್ನ ದೇಶಕ್ಕೆ ಮಾತ್ರವಲ್ಲದೆ ವಿಶ್ವಸಮಸ್ತಕ್ಕೂ ಅನ್ವಯಿಸುವ ಹಾಗೆ ಜನಸಮುದಾಯದಲ್ಲಿ ಪ್ರಸಾರ ಮಾಡಿದನು. ಶಸ್ತ್ರಮೂಲಕವಾದ ದಿಗ್ವಿಜಯಕ್ಕೆ ಪ್ರತಿಯಾಗಿ ಎನ್ನುವಂತೆ ಧರ್ಮಮೂಲಕವಾದ ದಿಗ್ವಿಜಯಕ್ಕೆ ತೊಡಗಿದನು. ಕಲಿಂಗಯುದ್ಧದ ಮನಃಕ್ಷೋಭೆಯನ್ನು ಪರಿಹರಿಸಿಕೊಳ್ಳಲು ಸರ್ವಜೀವದಯಾಪರತೆಯನ್ನು ಬೋಧಿಸಿದ ಬೌದ್ಧಧರ್ಮವನ್ನು ತಾನು ಪಟ್ಟಾಭಿಷಿಕ್ತನಾದ (ಕ್ರಿ. ಪೂ. ಸು. ೨೬೯) ೧೧ನೆಯ ವರ್ಷದಲ್ಲಿ ಅಂಗೀಕರಿಸಿ ಉಪಾಸಕನಾದನು. ಬೌದ್ಧ ಧರ್ಮದ ಆಚಾರಗಳಿಗಿಂತ, ತಾತ್ತ್ವಿಕ ಮೌಲ್ಯಗಳಿಗಿಂತ ನೀತಿಮೌಲ್ಯಗಳಿಗೆ ಪ್ರಾಶಸ್ತ್ಯವಿತ್ತನು. ವರ್ಷಕಳೆಯುತ್ತಿದ್ದಂತೆ ತೀವ್ರವಾಗಿ ಬೌದ್ಧಧರ್ಮದ ಪ್ರಸಾರಕಾರ್ಯಕ್ಕೆ ಮನಸ್ಸುಕೊಟ್ಟು ಅದಕ್ಕಾಗಿ ದೇಶವಿದೇಶಗಳಿಗೆ ಧರ್ಮದೀಕ್ಷಿತರನ್ನು ಕಳಿಸಿಕೊಟ್ಟನು. ತಾನೂ ಪ್ರವಾಸಗಳನ್ನು ಕೈಕೊಂಡನು. ಯಾವ ಯಾವ ಧರ್ಮದೀಕ್ಷಿತರನ್ನು ಯಾವ ಯಾವ ಸ್ಥಳಗಳಿಗೆ ಕಳಿಸಿಕೊಡಲಾಯಿತೆಂಬುದು ಕೂಡ ತಿಳಿದಿದೆ. ಮಹಿಷಮಂಡಲಕ್ಕೆ (ಮೈಸೂರಿಗೆ) ಮಹಾದೇವನೆಂಬವನೂ ವನವಾಸಿಗೆ ರಕ್ಷಿತನೆಂಬವನೂ ಬಂದಿದ್ದರೆಂದು ತಿಳಿಯುವುದು. ಅಶೋಕನ ಕಾಲದಲ್ಲಿ ಪಾಟಲೀಪುತ್ರದಲ್ಲಿ ಸೇರಿದ್ದ ಬೌದ್ಧಸಂಘದ ಸಭೆ ಕಾಶ್ಮೀರದಿಂದ ಹಿಡಿದು ಲಂಕೆಯ ವರೆಗೆ ಧರ್ಮಪ್ರಸಾರಕರನ್ನು ನಿಯಮಿಸಿ ಕಳಿಸಿತು.

ವ್ಯಕ್ತಿ ತನ್ನ ಸಂಸಾರದೊಡನೆ ಸಮಾಜದೊಡನೆ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಆತನ

ಹಲವು ಶಾಸನಗಳು ಒತ್ತಿಹೇಳುತ್ತವೆ. ೧೨ನೆಯ ಬಂಡೆಗಲ್ಲು ಶಾಸನವು ಅನ್ಯಮತಸಹಿಷ್ಣುತೆಯನ್ನು, ಅನ್ಯಮತಗಳನ್ನು ಗೌರವಿಸಬೇಕಾದುದನ್ನು ಹೃದಯಂಗಮವಾಗಿ ನಿರೂಪಿಸಿದೆ. ಮಾಂಸಭೋಜನ ನಿಷೇಧವನ್ನು ಕೈಕೊಳ್ಳುವುದರ ಮೂಲಕ ಅಹಿಂಸೆಯನ್ನು ತಾನು ನಿಷ್ಠೆಯಿಂದ ಮೊದಲು ಪಾಲಿಸಿ ತನ್ನ ಶಾಸನಗಳಲ್ಲಿಯೂ ಅಹಿಂಸಾತತ್ತ್ವವನ್ನು ಪ್ರಚುರಪಡಿಸಿದನು. ತನಗೆ ಪಟ್ಟವಾದ ೨೬ನೆಯ ವರ್ಷದಲ್ಲಿ ಪ್ರಾಣಿವಧೆಯ ಬಗೆಗೆ ಆತನು ಹಾಕಿಸಿದ ಒಂದು ಶಾಸನದಲ್ಲಿ ಅವಧ್ಯಪ್ರಾಣಿಗಳ ಒಂದು ಪಟ್ಟಿಯನ್ನೇ ಕೊಟ್ಟಿದೆ. ೭ನೆಯ ಬಂಡೆಗಲ್ಲು ಶಾಸನದಲ್ಲಿ ಆತನು 'ಎಲ್ಲ ಮತಗಳೂ ಆತ್ಮಸಂಯಮ ಹೃದಯ ಶುದ್ಧಿಯನ್ನು ಬಯಸುವುದಾದ್ದರಿಂದ ಆ ಮತದವರು ತನ್ನ ಸಾಮ್ರಾಜ್ಯದ ಎಲ್ಲೆಡೆಗಳಲ್ಲಿಯೂ ನೆಲಸಿರಲಿ' ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾನೆ. ೮ನೆಯ ಬಂಡೆಗಲ್ಲು ಶಾಸನದಲ್ಲಿ ಆತನು ತನ್ನ ಮೃಗಯಾ ವಿನೋದಾದಿ ವಿಹಾರಯಾತ್ರೆಯನ್ನು ರದ್ದುಪಡಿಸಿದ್ದನ್ನು ಹೇಳಿದೆ. ಅಶೋಕನ ಧರ್ಮದೃಷ್ಟಿ ಅಹಿಂಸೆಯ ಅನುಷ್ಠಾನ ತೀವ್ರ ಸ್ವರೂಪದ್ದಾಗಿತ್ತು. ಪ್ರಾಣಿವಧೆಗೆ ಅವಕಾಶಕೊಡುತ್ತಿದ್ದ ವಿನೋದ ಕ್ರೀಡೆಗಳನ್ನೂ ದ್ಯೂತಗಳನ್ನೂ ನಿಲ್ಲಿಸಿದ. ಧರ್ಮದ ಹೆಸರಿನಲ್ಲಿ ಪ್ರಾಣಿಗಳು ಬಲಿಯಾಗುವುದನ್ನು ತಡೆದನು. ರಾಜನ ವಿಹಾರಯಾತ್ರೆಗಳು ಧರ್ಮಯಾತ್ರೆಗಳಾಗಿ ಪರಿಣಮಿಸಿ, ಗ್ರಾಮಾಂತರಗಳ ಜನಸ್ತೋಮಕ್ಕೆ ಆರ್ಥಿಕವಾಗಿ ಅನುಕೂಲಗಳನ್ನು ಕಲ್ಪಿಸಲು, ನೈತಿಕವಾಗಿ ತಿಳಿವಳಿಕೆಗಳನ್ನು ಕೊಡಲು ತಾನೇ ಸ್ವಯಂ ಪ್ರೇರಣೆಯಂತೆ ಸುತ್ತಾಡಿದನು. ಈ ಕೆಲಸವನ್ನು ಮಹಾಮಾತ್ರರೂ ಕುಮಾರರೂ ಇತರ ಅಧಿಕಾರಿಗಳೂ ತಪ್ಪದೆ ಕೈಕೊಳ್ಳುವಂತೆ ವಿಧಿಸಿದನು. ಅಶೋಕನು ಅವರೆಗೆ ಇಲ್ಲದ ಧರ್ಮಮಹಾಮಾತ್ರರೆಂಬ ಅಧಿಕಾರಿಗಳ ಸ್ಥಾನವನ್ನು ಹೊಸದಾಗಿ ಕಲ್ಪಿಸಿ, ಅವರ ಕರ್ತವ್ಯಗಳನ್ನು ಐದನೆಯ ಬಂಡೆಗಲ್ಲು ಶಾಸನದಲ್ಲಿ ಸೂಚಿಸಿದ್ದಾನೆ. ಧರ್ಮದ ವ್ಯವಸ್ಥೆ, ಪ್ರಸಾರ, ಧರ್ಮಾನುಯಾಯಿಗಳ ಯೋಗಕ್ಷೇಮ ಇವುಗಳಿಗಾಗಿ ಎಲ್ಲ ಪಂಥಗಳಿಂದಲೂ ಧರ್ಮಮಹಾಮಾತ್ರರನ್ನು ಆಯಲಾಗುತ್ತಿತ್ತು.

ಅಶೋಕನು ಬೌದ್ಧಧರ್ಮದ ತತ್ತ್ವಗಳನ್ನು ಸಾರುವುದರ ಮೂಲಕವಾಗಿ ಸರ್ವಜನಹಿತಕಾರಕವಾದ ವಿಶ್ವಮಾನವಧರ್ಮವನ್ನೇ ಸಾರಿದನೆಂದು ಹೇಳಬಹುದು. 'ನನ್ನ ಸ್ವಂತಮಕ್ಕಳ ವಿಷಯದಲ್ಲಿ ನಾನು ಹೇಗೆ ಸುಖಸೌಭಾಗ್ಯಗಳನ್ನು ಕೋರುತ್ತೇನೆಯೋ ಹಾಗೆಯೇ ಎಲ್ಲ ಜನರ ವಿಷಯದಲ್ಲಿಯೂ ಅವರಿಗೆ ಇಹಪರಗಳೆರಡರಲ್ಲಿಯೂ ಸುಖಸೌಭಾಗ್ಯಗಳನ್ನು ಕೋರುತ್ತೇನೆ'—ಎಂದಿದ್ದಾನೆ. 'ವಿಶ್ವದ ಶ್ರೇಯಸ್ಸಿಗಾಗಿ ಶ್ರಮಿಸುವುದಕ್ಕಿಂತ ಉನ್ನತವಾದ ಕರ್ತವ್ಯವಿಲ್ಲ. ನಾನು ಮಾಡುವ ಯತ್ ಕಿಂಚಿತ್ ಪ್ರಯತ್ನಗಳೆಲ್ಲ ಜೀವರಾಶಿಗೆ ನಾನು ಸಲ್ಲಿಸಬೇಕಾಗಿರುವ ಋಣದಿಂದ ಮುಕ್ತನಾಗುವುದಕ್ಕಾಗಿಯೇ ಉದ್ದೇಶಿತವಾಗಿವೆ.'—ಹೀಗೆಂದು ೬ನೆಯ ಬಂಡೆಗಲ್ಲು ಶಾಸನದಲ್ಲಿ ಹೇಳಿದೆ. ಇಂತಹ ವಿಶ್ವವ್ಯಾಪಕವಾದ ಉದಾತ್ತವಾದ ಪ್ರಜಾವಾತ್ಸಲ್ಯದ ಭಾವನೆ ಹಿಂದೆಂದೂ ವ್ಯಕ್ತವಾಗಿರಲಿಲ್ಲ.

ಅಶೋಕನ ಅಭಿಪ್ರಾಯದಲ್ಲಿ 'ಧರ್ಮ'ವೆಂದರೆ, ಸಾಧುತ್ವ, ದಯೆ, ದಾನ, ಸತ್ಯ, ಶೌಚ, ಮಾರ್ದವ ಇವುಗಳನ್ನು ವ್ಯಕ್ತಿ ತನ್ನ ವರ್ತನೆಗಳಲ್ಲಿ ಅನುಷ್ಠಿಸುವುದೇ ಆಗಿದೆ. ಆ ಅನುಷ್ಠಾನವೆಂತಹುದೆಂಬುದನ್ನೂ ಆತನ ಶಾಸನಗಳಲ್ಲಿ ವರ್ಣಿಸಿದೆ.

ಅಶೋಕನ ಕಾಲದ ರಾಜ್ಯಾಡಳಿತದ ವಿಚಾರವಾಗಿ ಕೆಲವಂಶಗಳನ್ನು ಗಮನಿಸಬಹುದು. ನಾನಾ ಅಂತಸ್ತುಗಳು ಅಧಿಕಾರಗಳು ಇವನ್ನುಳ್ಳ ಸ್ಥಳೀಯ ಆಡಳಿತಪದ್ಧತಿಯನ್ನು ಚಂದ್ರಗುಪ್ತನ ಕಾಲದ ಹಾಗೆಯೇ ಅಶೋಕನ ಕಾಲದಲ್ಲಿಯೂ ಜಾರಿಗೆ ತಂದಿದ್ದಿತು. ಉಪರಾಜ, ಯುವರಾಜ, ಅಗ್ರಾಮಾತ್ಯ, ರಾಷ್ಟ್ರೀಯ, ಪ್ರಾದೇಶಿಕ, ರಾಜೂಕ, ಯುತ, ಮಹಾಮಾತ್ರ, ನಾಗರಕ, ದೂತ, ಗೂಢಪುರುಷ, ಪ್ರತಿವೇದಕ, ಮಧ್ಯಭೂಮಿಕ—ಹೀಗೆ ಆಡಳಿತ ವಿಭಾಗದ ಚೌಕಟ್ಟಿನಲ್ಲಿ ಹಲವು ಸ್ಥಾನಗಳಿದ್ದು ಅವು ವ್ಯವಸ್ಥಿತರೀತಿಯಲ್ಲಿ ಕಾರ್ಯನಿರತವಾಗಿರುತ್ತಿದ್ದವು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೂ ಮಂತ್ರಿ, ಪುರೋಹಿತ, ಸೇನಾಪತಿ, ಯುವರಾಜ ಮುಂತಾಗಿ ೧೮ ತೀರ್ಥಗಳೆಂಬ ಮುಖ್ಯ ಅಧಿಕಾರಸ್ಥಾನಗಳನ್ನೂ ಅಧ್ಯಕ್ಷ ಎಂಬ ಬೇರೆ ಬೇರೆ ಶಾಖೆಗಳ ಸಾಮಾನ್ಯ ಅಧಿಕಾರಸ್ಥಾನವನ್ನೂ ಹೇಳಿದೆ. ಬೌದ್ಧ ಬ್ರಾಹ್ಮಣ ಆಜೀವಿಕ ನಿರ್ಗ್ರಂಥ—ಹೀಗೆ ವಿವಿಧ ಧರ್ಮಪಂಥಗಳ ಯತಿಗಳ ಹಾಗೂ ಶ್ರಾವಕರ ಕಾರ್ಯಕಲಾಪಗಳಿಗೆ ತಕ್ಕ ಅನುಕೂಲಗಳನ್ನು ಕಲ್ಪಿಸಿ, ಆಯಾ ಧರ್ಮದ ಬೆಳವಣಿಗೆಗೆ ಸಮುಚಿತವಾದ ವಾತಾ

ವರಣವಿರುವಂತೆ ಧರ್ಮಮಹಾಮಾತ್ರರು ನೋಡಿಕೊಳ್ಳುತ್ತಿದ್ದರು. ಸ್ತ್ರೀಯರ ಉನ್ನತಿಯನ್ನು ಸ್ತ್ರೀ ಅಧ್ಯಕ್ಷ ಮಹಾಮಾತ್ರರು ನೋಡಿಕೊಳ್ಳುತ್ತಿದ್ದರು. ಜನರ ಹಾಗೂ ಪಶುಗಳ ವೈದ್ಯಕ್ಕಾಗಿ ಸರ್ಕಾರವೇ ಔಷಧೋಪಯೋಗಿಯಾದ ಉದ್ಯಾನಗಳನ್ನು ಬೆಳಸುತ್ತಿದ್ದ ವಿಷಯ ೨ನೆಯ ಬಂಡೆಗಲ್ಲು ಶಾಸನದಲ್ಲಿ ಬಂದಿದೆ. ಹಸ್ತ್ಯಧ್ಯಕ್ಷನ ಮೇಲ್ವಿಚಾರಣೆಯಲ್ಲಿ ನಾಗವನದಲ್ಲಿ ಆನೆಗಳನ್ನು ಬೆಳೆಸುವ ಏರ್ಪಾಟಿದ್ದಿತು.

ಅಶೋಕನ ಕಾಲದ ಜನಜೀವನದ ಚಿತ್ರವನ್ನು ನಾವು ಕ್ರಿ. ಪೂ. ೪ ರಿಂದ ೨ನೆಯ ಶತಮಾನದ ವರೆಗೆ ದೊರೆಯುವ ಶಾಸನಗಳು. ಗ್ರೀಕ್ ಮತ್ತು ಸ್ವದೇಶೀಯ ಲೇಖಕರ ಸಾಹಿತ್ಯಕ ಉಲ್ಲೇಖಗಳು ಇವುಗಳ ಮೂಲಕ ತಿಳಿಯಬಹುದಾಗಿದೆ. ವರ್ಣಾಶ್ರಮ ಪದ್ಧತಿಗಳು ಇಂದಿನಂತೆಯೇ ಪಾಲಿತವಾಗುತ್ತಿದ್ದರೂ, ಮೇಲು ಕೀಳಿನ ವರ್ಣಗಳ ನಡುವೆ ಅನುಲೋಮ ಪ್ರತಿಲೋಮ ವಿವಾಹಗಳು ಕೂಡ ಸ್ವಲ್ಪಮಟ್ಟಿಗೆ ಜರುಗುತ್ತಿದ್ದುವು. ಬೌದ್ಧ ಜೈನ ವೈದಿಕ ಮತಗಳೂ ಅವುಗಳೊಳಗೆ ಕೆಲವು ಒಳಪಂಥಗಳೂ ಪ್ರಚಲಿತವಿದ್ದವು. ಅಶೋಕನು ಸರ್ವಧರ್ಮಗಳನ್ನೂ ಸಮದೃಷ್ಟಿಯಿಂದ ನೋಡಿಕೊಳ್ಳುತ್ತಿದ್ದನು. ಮತಮತಗಳ ನಡುವೆ ಶಾಂತಿ ಸಾಮರಸ್ಯಗಳಿದ್ದವು. ಜನರು ತಮ್ಮ ದೈನಂದಿನ ಜೀವನದಲ್ಲಿ ಉಲ್ಲಸಿತರಾಗಿರುತ್ತಿದ್ದರು. ವಸ್ತ್ರಾಭರಣಗಳ ಮೇಲೆ ಒಲವು ವಿಶೇಷವಾಗಿತ್ತು. ಸತ್ರಗಳೂ ಅರವಟ್ಟಿಗೆಗಳೂ ಕ್ರೀಡಾಗಾರಗಳೂ ಇದ್ದವು. ಅರ್ಥಶಾಸ್ತ್ರದಲ್ಲಿ ಕುಟುಂಬಜೀವನ, ವಿವಾಹ ಮೊದಲಾದವುಗಳನ್ನು ಕುರಿತು ವಿಶದವಾಗಿ ವಿವರಣೆಗಳಿವೆ. ಹಾಗೆಯೇ ವ್ಯಾಪಾರ ವಾಣಿಜ್ಯಗಳನ್ನೂ ಕುರಿತು ಹಲವು ಸಂಗತಿಗಳಿವೆ. ವಿದ್ಯಾಸಂಸ್ಥೆಗಳು ಸರ್ಕಾರ ಮತ್ತು ಸಾರ್ವಜನಿಕರ ಸಹಾಯದಿಂದ ನಡೆಯುತ್ತಿದ್ದವು. ತಕ್ಷಶಿಲೆ ಮತ್ತು ಪಾಂಚಾಲಗಳು ಪ್ರೌಢವಿದ್ಯಾಕೇಂದ್ರಗಳಾಗಿದ್ದವು. ಇವುಗಳಲ್ಲಿ ತಕ್ಷಶಿಲೆಯಲ್ಲಿ ಸೈನ್ಯಕೀಯ ಮತ್ತು ವೈದ್ಯವಿದ್ಯೆಯನ್ನೊಳಗೊಂಡು ಎಲ್ಲ ವಿದ್ಯೆಗಳನ್ನೂ ಕಲಿಸಲಾಗುತ್ತಿತ್ತು. ಪಾಂಚಾಲದಲ್ಲಿ ಪ್ರೌಢ ತತ್ತ್ವಶಾಸ್ತ್ರದಲ್ಲಿ ವ್ಯಾಸಂಗವನ್ನು ನೀಡುತ್ತಿದ್ದಿತು.

ಕಲೆ ಮತ್ತು ವಾಸ್ತುಶಿಲ್ಪ: ಅಶೋಕನ ಕಾಲದಲ್ಲಿ ಕಲೆ ಮತ್ತು ಸಾಹಿತ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದಿತು. ಈಗ ಉಳಿದು ಬಂದಿರುವ ಸ್ಮಾರಕಗಳಲ್ಲಿ ಹಲವು ಅಶೋಕನ ಕಾಲಕ್ಕೆ ಸೇರಿದವು. ಧರ್ಮ ಮತ್ತು ಆಡಳಿತವಿಷಯಗಳಲ್ಲಿ ಹೇಗೆ ಆತನ ವೈಯಕ್ತಿಕತೆ ತೋರಿದೆಯೋ ಕಲೆಯ ವಿಷಯದಲ್ಲಿಯೂ ಹಾಗೆಯೇ ತೋರಿದೆ. ಅಶೋಕನ ಕಾಲಕ್ಕೆ ಮೊದಲು ಕಲೆಯ ಕೆಲಸಗಳಲ್ಲಿ ಕಲ್ಲಿನ ಬಳಕೆ ತೀರ ವಿರಳವಾಗಿತ್ತು: ಈಗ ಮರ ಇಟ್ಟಿಗೆಗಳ ಬದಲಿಗೆ ಕಲ್ಲುಗಳನ್ನು ಬಳಸಿದ ಕಲಾತ್ಮಕ ಸ್ಮಾರಕಗಳು ವಿಪುಲವಾಗಿ ಕಾಣಿಸಿಕೊಂಡವು. ಇದಕ್ಕೆ ಗ್ರೀಕ್-ಪರ್ಶಿಯನ್ ಪ್ರಭಾವ ಕಾರಣವಾಗಿರಬಹುದು. ಮೌರ್ಯಕಾಲಕ್ಕೆ ಮೊದಲು ವಾಸ್ತುಶಿಲ್ಪ. ಶಿಲ್ಪಕಲೆಗಳ ಗಮನಾರ್ಹ ರಚನೆಗಳಾವುವೂ ಇರಲಿಲ್ಲ. ಈಗ ನಗರಗಳು ರಾಜಗೃಹಗಳು, ಸ್ತೂಪಗಳು, ವಿಹಾರಗಳು, ಬಂಡೆ ಕೊರೆದ ಗವಿಗಳು, ಏಕಶಿಲಾ ಸ್ತಂಭಗಳು ಕಲಾತ್ಮಕ ರಚನೆಗಳಾಗಿ ಮೇಲೆದ್ದವು. ಫಾಹಿಯಾನನು ಪಾಟಲಿಪುತ್ರದಲ್ಲಿಯ ಅಶೋಕನ ರಾಜಗೃಹದ ಅಪೂರ್ವ ಶಿಲ್ಪಕಲಾಸೌಂದರ್ಯವನ್ನು ನೋಡಿ ಅದು ಮನುಷ್ಯನಿರ್ಮಿತವಾಗಿರದೆ ದೇವನಿರ್ಮಿತವೆಂದೇ ಕೀರ್ತಿಸಿದ್ದಾನೆ. ಆತನ ಕಾಲದಲ್ಲಿ ೮೪.೦೦೦ ಸ್ತೂಪಗಳು ನಿರ್ಮಾಣವಾದವೆಂದು ಮಹಾವಂಶದಲ್ಲಿ ಹೇಳಿದೆ. ಈಸ್ತೂಪಗಳು ಬೆಟ್ಟದ ಶಿಖರಗಳಷ್ಟು ಉನ್ನತವಾಗಿರುತ್ತಿದ್ದವೆಂದು 'ದಿವ್ಯಾವದಾನ'ದಲ್ಲಿ ಹೇಳಿದೆ. ಈ ಕಾಲದ ಬರಾಬರ್ ಗುಹೆಗಳು ಗೋಡೆಗಳು, ನಾಗಾರ್ಜುನೀ ಬೆಟ್ಟಗಳ ಗುಹಾಭಿತ್ತಿಗಳು ಇಂದಿಗೂ ಕನ್ನಡಿಯಂತೆ ಹೊಳೆಯುತ್ತಿವೆ. ಅಶೋಕನ ಕಾಲದ ಕಲೋನ್ನತಿ ಸುವ್ಯಕ್ತವಾಗುವುದು 'ಧರ್ಮಸ್ತಂಭ'ಗಳಲ್ಲಿ. ಇಂಥವು ೩೦ ಕಂಡುಬಂದಿವೆ. ೧೭ ಮತ್ತು ೧೯ನೆಯ ಶತಮಾನಗಳ ಇಬ್ಬರು ಪಾಶ್ಚಾತ್ಯ ಪ್ರವಾಸಿಗರು ಒಂದು ಸ್ತಂಭವನ್ನು, ಅದರ ಹೊಳಪು ನಯಗಾರಿಕೆಯನ್ನು ನೋಡಿ ಲೋಹ ನಿರ್ಮಿತವೆಂದೇ ವರ್ಣಿಸಿದ್ದಾರೆ. ಅಶೋಕನ ಸ್ತಂಭಗಳು ನಯ ನುಣುಪುಗಳಲ್ಲಿಯೂ ಹೊಳಪಿನಲ್ಲಿಯೂ ಆಕೃತಿಯಲ್ಲಿಯೂ ಅತ್ಯುತ್ತಮವಾದುದಾಗಿವೆ. ಗಾತ್ರದಲ್ಲಿಯೂ ಅದ್ಭುತವಾದ ಅವುಗಳನ್ನು ನೂರಾರು ಮೈಲಿಗಳ ದೂರಕ್ಕೆ ಒಯ್ದು ಸ್ಥಾಪಿಸುತ್ತಿದ್ದುದೇ ಒಂದು ಸೋಜಿಗ. ಇಂತಹ ಸಾರನಾಥದ ಅಶೋಕಸ್ತಂಭದ ಶಿಖರಭಾಗವನ್ನೇ ಪ್ರಸ್ತುತ ಭಾರತ ಗಣರಾಜ್ಯವು ತನ್ನ ರಾಷ್ಟ್ರೀಯ ಸಂಕೇತವಾಗಿ ಸ್ವೀಕರಿಸಿರುವುದು.

(ಮುಂದುವರೆಯುತ್ತದೆ.)

ಪುಸ್ತಕಲೋಕ

ಆರ್ಥಿಕ ಚಿಂತನೆಯ ಹೊಂಗಿರಣಗಳು

ಸಿ. ಕೆ. ರೇಣುಕಾರ್ಯ, ಎಂ.ಎ., ರಮ್ಯ ಪ್ರಕಾಶನ, ಮೈಸೂರು ೧೯೭೮. ಪುಟ iv + ೨೫೫, ಬೆಲೆ ರೂ. ೧೫.

'ಆರ್ಥಿಕ ಚಿಂತನೆಯ ಹೊಂಗಿರಣಗಳು' ಎಂಬ ಈ ಪುಸ್ತಕದ ಅರಿಕೆಯಲ್ಲಿ ಗ್ರಂಥಕರ್ತ ಶ್ರೀ ಸಿ. ಕೆ. ರೇಣುಕಾರ್ಯ ಅವರು ಈ ಮಾತುಗಳನ್ನು ಹೇಳುತ್ತಾರೆ: "ಪ್ರಸಕ್ತ ಗ್ರಂಥ ಆಡಂಸ್ಮಿತ್‌ನಿಂದ ಹಿಡಿದು ಮಿರ್ಡಾಲನ ವರೆಗಿನ ಪ್ರಮುಖ ಆರ್ಥಿಕ ಚಿಂತಕರ ಚಿಂತನೆಗಳನ್ನು ಸಂಕ್ಷಿಪ್ತವಾಗಿ, ಪರಿಚಯಮಾಡಿ ಕೊಡುವ ಉದ್ದೇಶವನ್ನು ಹೊಂದಿದೆ. ಓದುಗರಿಗೆ ಈ ಪ್ರಮುಖ ಚಿಂತಕರ ಚಿಂತನೆಯ ಸ್ಥೂಲ ಪರಿಚಯವಷ್ಟೇ ಈ ಗ್ರಂಥದ ಉದ್ದೇಶ." ಈ ಮಾತುಗಳು ಈ ಪುಸ್ತಕದ ವಿಷಯ ವಿಸ್ತಾರ ವ್ಯಾಪ್ತಿ ಮತ್ತು ಇತಿಮಿತಿಗಳನ್ನು ತಿಳಿಸುತ್ತವೆ. ಇಲ್ಲಿ ಶ್ರೀ ರೇಣುಕಾರ್ಯ ಅವರು 'ಓದುಗರು' ಎಂದರೆ ಯಾರು ಎಂದು ಹೇಳಿಲ್ಲ. ಆದರೆ ಈ ಪುಸ್ತಕವನ್ನು ಅಂತಿಮ ಬಿ.ಎ.ಯಲ್ಲಿ ಪ್ರಧಾನ ವಿಷಯವಾಗಿ ಅರ್ಥಶಾಸ್ತ್ರ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ, ಅವರಿಗಿದ್ದ ಅಭ್ಯಾಸಪತ್ರಿಕೆ (Syllabus)ಯನ್ನು ಗಮನಿಸಿ ಬರೆದದ್ದೂ.

ಈ ಪುಸ್ತಕದಲ್ಲಿ ಲೇಖಕರು ಇಪ್ಪತ್ತು ಅರ್ಥಶಾಸ್ತ್ರಜ್ಞರ ಬಗ್ಗೆ ಬರೆಯುತ್ತಾರೆ. ಇವರೇ ಆಡಂಸ್ಮಿತ್‌ನಿಂದ ಹಿಡಿದು ಮಿರ್ಡಾಲನ ವರೆಗಿನ ಪ್ರಮುಖ ಇಪ್ಪತ್ತು ಅರ್ಥಶಾಸ್ತ್ರಜ್ಞರು. ಇವರೆಲ್ಲ ಬೇರೆ ಬೇರೆ ವಿಚಾರ ಪಂಥಕ್ಕೆ ಸೇರಿದವರು. ಕ್ಲಾಸಿಕಲ್ ಪಂಥದ ಆಡಂಸ್ಮಿತ್, ಟಿ. ಆರ್ ಮಾಲ್ಥಸ್, ಡೇವಿಡ್ ರಿಕಾರ್ಡೋ, ಜಾನ್ ಸ್ಟುವರ್ಟ್ ಮಿಲ್,—ಇವರ ಬಗ್ಗೆ; ಕಾರ್ಲ್ ಮಾರ್ಕ್ಸನ ಬಗ್ಗೆ; ಆಸ್ಟ್ರಿಯನ್ ಪಂಥದ ವಿ. ಎಸ್. ಜೇವನ್ಸ, ಕಾರ್ಲಮೆಂಜರ, ಬೋಹಮ್ ಬವರ್ಕ, ಲಿಯೊನ್ ವಾಲರಾ—ಇವರ ಬಗ್ಗೆ; ನಿಯೋಕ್ಲಾಸಿಕಲ್ ಪಂಥದ ಆಲ್‌ಫ್ರೆಡ್ ಮಾರ್ಷೆಲ್, ಎ. ಸಿ. ಪಿಗೋ, ಸರ್ ಡೆನಿಸ್ ರಾಬರ್ಟಸನ್,—ಇವರ ಬಗ್ಗೆ; ಅರ್ಥಶಾಸ್ತ್ರದಲ್ಲಿ ಕ್ರಾಂತಿಯನ್ನುಂಟುಮಾಡಿದ ಜಾನ್ ಮಯ್ನಾರ್ಡ ಕೇನ್ಸ ಇವರ ಬಗ್ಗೆ—; ನವ ನಿಯೋಕ್ಲಾಸಿಕಲ್ ಪಂಥದ ನೋಬಲ ಬಹುಮಾನ ವಿಜೇತ ಮಿಲ್ಟನ ಫ್ರಿಡ್‌ಮನ್ ಇವರ ಬಗ್ಗೆ; ನಿಯೋ ಸಾಂಸ್ಥಿಕ ಪಂಥದ ನೊಬಲ ಬಹುಮಾನ ವಿಜೇತ ಗುನ್ನಾರ ಮಿರ್ಡಾಲ ಇವರ ಬಗ್ಗೆ; ಜೊಸೆಫ ಎ. ಶುಂಪಿವರ, ನೊಬಲ ಬಹುಮಾನ ವಿಜೇತರಾದ ಜೆ. ಆರ್. ಹಿಕ್ಸ ಮತ್ತು ಹಯಕ—ಇವರ ಬಗ್ಗೆ; ಎಫ್. ಹೆಚ್. ಚಾಂಬರ್ಲಿನ ಮತ್ತು ಶ್ರೀಮತಿ ಜೋನ ರಾಬಿನ್‌ಸನ್ ಇವರ ಬಗ್ಗೆ ಶ್ರೀ ರೇಣುಕಾರ್ಯ ಅವರು ಒಂಭತ್ತು ಅಧ್ಯಾಯಗಳಲ್ಲಿ ಬರೆಯುತ್ತಾರೆ.

ಕ್ಲಾಸಿಕಲ್ ಪಂಥದ ಅರ್ಥಶಾಸ್ತ್ರಜ್ಞರು ಮೌಲ್ಯ, ಗೇಣಿ, ಸಾರ್ವಜನಿಕ ಹಣಕಾಸು, ಸ್ವಾಭಾವಿಕ ಸ್ವಾತಂತ್ರ್ಯ, ಸರಕಾರದ ಚಟುವಟಿಕೆಗಳು. ಹಣ, ವಿದೇಶಿ ವ್ಯಾಪಾರ, ಜನಸಂಖ್ಯಾ ಸಿದ್ಧಾಂತ, ಆರ್ಥಿಕ ಅಭಿವೃದ್ಧಿ, ಅನುಭೋಗ, ಉತ್ಪಾದನೆ, ವಿನಿಮಯ, ವಿತರಣೆ, ಸಮಾಜವಾದ ನಿರ್ಲಿಪ್ತ ಆರ್ಥಿಕ ನೀತಿ ಇತ್ಯಾದಿಗಳ ಮೇಲೆ ಆಲೋಚಿಸುತ್ತಾರೆ. ಬರೆಯುತ್ತಾರೆ. ಕಾರ್ಲಮಾರ್ಕ್ಸ ವೈಜ್ಞಾನಿಕ ಸಮಾಜ ವಾದದ ಜನಕ. ಬಂಡವಾಳ ಪ್ರಭುತ್ವವಾದೀ ಅರ್ಥವ್ಯವಸ್ಥೆಯ ವಿರುದ್ಧ ಬಂಡೆದ್ದವನು. ಮಾರ್ಕ್ಸ ಶ್ರಮ ಮೌಲ್ಯ ಸಿದ್ಧಾಂತ, ಅತಿರಿಕ್ತ ಮೌಲ್ಯ, ಅಧಿ ಶೇಷ ಲಾಭ ಬಂಡವಾಳಶಾಹೀ ವ್ಯವಸ್ಥೆಯ ವಿಕಾಸ. ಬಂಡವಾಳದಾತರು ಕಾರ್ಮಿಕರನ್ನು ಹೇಗೆ ಶೋಷಣೆ ಮಾಡುತ್ತಾರೆ ಇತ್ಯಾದಿಗಳನ್ನು ಚರ್ಚಿಸುತ್ತಾರೆ.. ತುಷ್ಟಿಗುಣ ಮೀಮಾಂಸೆಯ ಬಗ್ಗೆ ವಿವರಿಸಿದ ಆಸ್ಟ್ರಿಯನ್ ಪಂಥದ ಆರ್ಥಿಕ ಚಿಂತಕರ ಕೊಡುಗೆಯ ಕುರಿತು ಲೇಖಕರು ವಿವರಿಸಿದ್ದಾರೆ. ಅರ್ಥಶಾಸ್ತ್ರದಲ್ಲಿ ಗಣಿತ ವಿಶ್ಲೇಷಣೆಯನ್ನು ಜೇವನ್ಸ ಬಿತ್ತಿ

ಹೇಳುತ್ತಾನೆ. ಈತ ವಿತರಣೆ ಮತ್ತು ಬಂಡವಾಳದ ಬಗ್ಗೆ ಆಲೋಚಿಸಿದ್ದನ್ನು ಲೇಖಕರು ಈ ಪುಸ್ತಕದಲ್ಲಿ ಬರೆದಿದ್ದಾರೆ. ಮೆಂಜರನ ಮೌಲ್ಯ, ವಿನಿಮಯ ಮತ್ತು ವಿತರಣೆಯ ಕುರಿತು ಇಲ್ಲಿ ಚರ್ಚಿಸಲಾಗಿದೆ. ಬೊಮಮ್ ಬವರ್ಕನ ಬಡ್ಡಿ(ಲಾಭ) ಸಿದ್ಧಾಂತಗಳ ಬಗ್ಗೆ ಮತ್ತು ಲಿಯೊನ್ ವಾಲರಾ ಗಣಿತ ನಿರೂಪಣೆಗೆ ಮಹತ್ವಕೊಟ್ಟಿದ್ದನ್ನು ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಆಸ್ಟ್ರಿಯನ್ ಪಂಥದ ಆರ್ಥಿಕ ಚಿಂತಕರು ಸೀಮಾಂತ ತುಷ್ಟಿಗುಣ ಮೀಮಾಂಸೆಯನ್ನು ವೃದ್ಧಿಗೊಳಿಸುತ್ತಾರೆ.

ನಿಯೋ-ಕ್ಲಾಸಿಕಲ್ ಪಂಥದ ಆಲ್‌ಫ್ರೆಡ್ ಮಾರ್ಷಲನ ಮೌಲ್ಯ ಸಿದ್ಧಾಂತ. ಮೌಲ್ಯ ಸಿದ್ಧಾಂತ ವಿವರಣೆಯಲ್ಲಿ ಕಾಲದ ಮಹತ್ವ. ವಿತರಣೆ. ಸಿದ್ಧಾಂತ. ಸ್ಥಿತಿಸ್ಥಾಪಕತ್ವ. ಅನುಭೋಗಿ ಅಧಿಶೇಷ ಇತ್ಯಾದಿಗಳ ಬಗ್ಗೆ ಚರ್ಚಿಸಲಾಗಿದೆ. ಎ. ಸಿ. ಪಿಗೋ ಅವರ ಕಲ್ಯಾಣ ಅರ್ಥ ವಿಜ್ಞಾನದ ಬಗ್ಗೆ ಸ್ಥಗಿತ ಸ್ಥಿತಿ ಅರ್ಥಶಾಸ್ತ್ರ (Economics of Stationary State) ಉದ್ಯಮಿಕ ಏರಿಳಿತಗಳು (Industrial Fluctuations) ಉದ್ಯೋಗ ಮತ್ತು ಸಮತೋಲನ (Employment and Equilibrium) ಹಣ ಮತ್ತು ತೆರಿಗೆ—ಇವುಗಳ ಬಗ್ಗೆ ವಿವರಿಸಿದ್ದಾರೆ. ರಾಬರ್ಟ್‌ಸನ್ ಅವರ ಕೂಲಿ, ಗೇಣಿ, ಬಡ್ಡಿ, ಹಣ ತುಷ್ಟಿಗುಣ ಮೀಮಾಂಸೆ. ಇವುಗಳ ಕುರಿತು ಬರೆದಿದ್ದಾರೆ. ನ್ಯೂನತೆಯ ಪರಿಭಾವನೆಯ ಮೂಲಕ ಬಂಡವಾಳ ಸೃಷ್ಟಿಯ ವಿಧಾನವನ್ನು ರಾಬರ್ಟ್‌ಸನ್ ಚರ್ಚಿಸುತ್ತಾರೆ.

ಆರ್ಥಿಕ ಚಿಂತನೆಯಲ್ಲಿ ಕ್ರಾಂತಿಯನ್ನುಂಟು ಮಾಡಿದ ಕಾರಣಪುರುಷ ಕೇನ್ಸ್ ಅವರು ಅರ್ಥಶಾಸ್ತ್ರಕ್ಕೆ ಸಲ್ಲಿಸಿದ ಕೊಡುಗೆಯನ್ನು ಲೇಖಕರು ವಿವರಿಸುತ್ತಾರೆ. ನವನಿಯೋ ಕ್ಲಾಸಿಕಲ್ ಪಂಥದ. ಆರ್ಥಿಕ ಚಿಂತಕರಲ್ಲಿ ಅಗ್ರಗಣ್ಯನಾದ ಮಿಲ್ಟನ್ ಫ್ರೀಡ್‌ಮನ್‌ನ ಹಣದ ಪರಿಮಾಣ ಸಿದ್ಧಾಂತ. ಹಣಕಾಸು ನೀತಿ, ಅನುಭೋಗ ಪ್ರವೃತ್ತಿ. ಮುಕ್ತ ಅರ್ಥ ವ್ಯವಸ್ಥೆ—ಇವುಗಳ ಕುರಿತು ವಿವರಣೆ ಇದೆ. ಈ ಪುಸ್ತಕದಲ್ಲಿ ನಿಯೋ ಸಾಂಸ್ಥಿಕ ಪಂಥದ ಪ್ರಮುಖ ಆರ್ಥಿಕ ಚಿಂತಕ ಗುನ್ನಾರ ಮಿರ್ಡಾಲ. ಇವರ ವಿಕಾಸಗೊಳ್ಳುತ್ತಿರುವ ಸಾಮಾಜಿಕ ವಿಧಾನ ಅರ್ಥವಿಜ್ಞಾನದ ವ್ಯಾಪ್ತಿ. ಕೂಡಿಕೊಂಡು ಮುಂದುವರಿಯುವ ಸಾಮಾಜಿಕ ಬದಲಾವಣೆಯ ಸಿದ್ಧಾಂತ. ಗುರಿನಿರ್ದೇಶಿತ ಸಮಾಜ ಕಲ್ಯಾಣ ರಾಜ್ಯದ ವಿಕಾಸ. ಕಲ್ಯಾಣ ರಾಜ್ಯದ ದೌರ್ಬಲ್ಯಗಳು. ಅಮೇರಿಕದ ಸಂಯುಕ್ತ ಸಂಸ್ಥಾನಗಳ ಆರ್ಥಿಕ ಚಟುವಟಿಕೆ. ವಿಶ್ವಕಲ್ಯಾಣ ರಾಜ್ಯ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು. ದಕ್ಷಿಣ ಏಷ್ಯಾದ ಅಭಿವೃದ್ಧಿಶೀಲ ರಾಷ್ಟ್ರಗಳು. ಸಂಯೋಜಿತ ಅರ್ಥವ್ಯವಸ್ಥೆಯ ಸಿದ್ಧಾಂತ. ಸಾಮಾಜಿಕ ಮೌಲ್ಯಗಳು ಮತ್ತು ಅರ್ಥಶಾಸ್ತ್ರ—ಈ ಎಲ್ಲ ವಿಷಯಗಳ ಬಗ್ಗೆ ಈ ಪುಸ್ತಕದಲ್ಲಿ ವಿವರಣೆ ಇದೆ. ಜೋಸೆಫ್ ಎ. ಶುಂಪೀಟರ ಅವರ ಬಂಡವಾಳ ಪ್ರಭುತ್ವಾದೀ ಅರ್ಥವ್ಯವಸ್ಥೆಯ ವಿಶ್ಲೇಷಣೆ. ಜಾನ್ ಆರ್. ಹಿಕ್ಸರ ಅನುಭೋಗಿ ವರ್ತನೆ ಮೀಮಾಂಸೆ. ಸಮತೋಲನ ಮೀಮಾಂಸೆ. ಆರ್ಥಿಕ ಆವರ್ತ. ಕೂಲಿ ಸಿದ್ಧಾಂತ. ಫ್ರೆಡರಿಕ್ ವಾನ್ ಹಯಾಕ ಅವರ ಅರ್ಥವ್ಯವಸ್ಥೆಯ ವಿಶ್ಲೇಷಣೆಯ ಕ್ರಮ. ತಟಸ್ಥ ಹಣ ಮತ್ತು ಉತ್ಪಾದನೆಯ ಮೀಮಾಂಸೆ. ಆರ್ಥಿಕ ಆವರ್ತ ಸಿದ್ಧಾಂತ. ವ್ಯಕ್ತಿ ಸ್ವಾತಂತ್ರ್ಯವಾದ: ಎಡ್ವರ್ಡ ಹೇಸ್ಟಿಂಗ್ಸ್ ಚೇಂಬರ್ಲಿನ ಅವರ ಏಕಸ್ವಾಮ್ಯಯುತ ಮಾರುಕಟ್ಟೆ ಮತ್ತು ಮೌಲ್ಯ ನಿರ್ಧಾರ. ಶ್ರೀಮತಿ ಜೋನ್ ರಾಬಿನ್‌ಸನ್ ಇವರ ಅಪರಿಪೂರ್ಣ ಪೈಪೋಟಿ—ಈ ವಿಷಯಗಳ ಬಗ್ಗೆ ಈ ಪುಸ್ತಕದಲ್ಲಿ ಬರೆಯಲಾಗಿದೆ.

ಈ ಪುಸ್ತಕವನ್ನು ಬರೆಯಲು ಲೇಖಕರು ಒಂದು ಯೋಜನೆಯನ್ನು ಅನುಸರಿಸಿದ್ದಾರೆ: ೧. ಆರ್ಥಿಕ ಚಿಂತಕರ ಜೀವನ ಪರಿಚಯ: ೨. ಅವರ ಮೇಲೆ ಆದ ಪ್ರಭಾವ. ಅಂದರೆ ಆರ್ಥಿಕ ಚಿಂತಕರು ಈ ರೀತಿಯಾಗಿ ಆಲೋಚನೆ ಮಾಡಲು ಯಾರ ಮತ್ತು ಎಂಥ ಪ್ರಭಾವ ಕಾರಣವಾಯಿತು ಎನ್ನುವುದು: ೩. ಆರ್ಥಿಕ ಚಿಂತಕರ ಕೃತಿಗಳು: ೪. ಆರ್ಥಿಕ ಚಿಂತಕರ ಕೃತಿಗಳ ವಿವರಣೆ; ೫. ಪರಾಮರ್ಶೆ. ಆದರೆ ಈ ಕ್ರಮವನ್ನು ಗ್ರಂಥಕರ್ತರು ಇಲ್ಲಿ ೨೦ ಆರ್ಥಿಕ ಚಿಂತಕರ ಬಗೆಗೂ ಅನುಸರಿಸಿಲ್ಲ. ಕೆಲವು ಆರ್ಥಿಕ ಚಿಂತಕರ ಜೀವನ ಪರಿಚಯ ಸಾಲದು. ಇನ್ನೂ ಕೆಲವು ಆರ್ಥಿಕ ಚಿಂತಕರ ಮೇಲೆ ಆದ ಪ್ರಭಾವದ ಬಗ್ಗೆ ಹೇಳಿದ್ದು ಸ್ಪಷ್ಟವಾಗಿಲ್ಲ. ಕೆಲವು ಅರ್ಥಶಾಸ್ತ್ರಜ್ಞರ ಕೃತಿಗಳ ಪಟ್ಟಿಯನ್ನು ಲೇಖಕರು ಸರಿಯಾಗಿ ನೀಡಿಲ್ಲ. ಕೆಲವು ಅರ್ಥಶಾಸ್ತ್ರಜ್ಞರ ಕೃತಿಗಳ ಬಗ್ಗೆ ನೀಡಿದ ವಿವರಣೆ ಸಾಲದು. ಬಿ.ಎ.ಯಲ್ಲಿ ಪ್ರಧಾನ ವಿಷಯವಾಗಿ ಅರ್ಥಶಾಸ್ತ್ರ ಅಧ್ಯಯನವನ್ನು ಮಾಡುವ ವಿದ್ಯಾರ್ಥಿಗಳ ಮಟ್ಟವನ್ನು ಗಮನಿಸಿ ಈ ಪುಸ್ತಕ

ವನ್ನು ಬರೆಯಲಾಗಿದೆ ಎನ್ನುವದನ್ನು ಒಪ್ಪಿಕೊಂಡರೂ ಸಹ ಶುಂಪೀಟರ, ರಾಬರ್ಟಸನ್, ಜೆ. ಆರ್. ಹಿಕ್ಸ್. ಫ್ರೆಡ್ರಿಚ್ ವಾನ್ ಹಯೆಕ್, ಎಡ್ವರ್ಡ್ ಹೇಸ್ಟಿಂಗ್ಸ್ ಚೇಂಬರ್ಲಿನ ಮತ್ತು ಜೋನ್ ರೋಬಿನ್‌ಸನ್–ಈ ಆರ್ಥಿಕ ಚಿಂತಕರ ಕೊಡುಗೆಯ ಬಗ್ಗೆ ನೀಡಿದ ವಿವರಣೆ ಸಾಲದು. ಈ ಪುಸ್ತಕದಲ್ಲಿ ಬರೆದ ಆರ್ಥಿಕ ಚಿಂತಕರ ಚಿಂತನೆಯ ವಿಶ್ಲೇಷಣೆ ಮತ್ತು ವಿವರಣೆಗಳಲ್ಲಿ ಹೆಚ್ಚಿನ ಸ್ಪಷ್ಟತೆಯ ಅಗತ್ಯ ಇದೆ ಎಂದು ನನಗೆ ಅನಿಸುತ್ತದೆ. ಇವುಗಳನ್ನು ಸಾಧಿಸಲು ಗ್ರಂಥಕರ್ತರು ಪ್ರಯತ್ನಿಸಿದ್ದರೆ ಈ ಗ್ರಂಥ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಯೋಜನಕಾರಿ ಮತ್ತು ಆಕರ್ಷಕವಾಗುತ್ತಿತ್ತು ಎಂದು ನನ್ನ ಅನಿಸಿಕೆ.

'ಆರ್ಥಿಕ ಚಿಂತನೆಯ ಹೊಂಗಿರಣಗಳು'—ಈ ಪುಸ್ತಕದ ಪ್ರಾರಂಭವನ್ನು ಲೇಖಕರು ಏಕದಂ ಅಂದರೆ ದಿಢೀರನೆ ಮಾಡಿದ್ದಾರೆ ಎಂದು ಅನಿಸುತ್ತದೆ. ಆಡಂ ಸ್ಮಿತ್ ಆರ್ಥಿಕ ಚಿಂತನೆಯ ರಂಗವನ್ನು ಪ್ರವೇಶಿಸುವ ಪೂರ್ವದಲ್ಲಿ ಆರ್ಥಿಕ ಚಿಂತನೆಯ ಬೆಳವಣಿಗೆಗಳ ಕುರಿತು ಪರಿಚಯಾತ್ಮಕವಾಗಿ ಲೇಖಕರು ಒಂದು ಅಧ್ಯಾಯವನ್ನು ಪ್ರತ್ಯೇಕವಾಗಿಯೇ ಈ ಪುಸ್ತಕದಲ್ಲಿ ಸೇರಿಸಿದ್ದರೆ ಚೆನ್ನಾಗಿತ್ತು. ವಾಣಿಜ್ಯವಾದ, ವ್ಯವಸಾಯವಾದ, ಕಾಣದ ಕೈ, ಲೈಸೆಸ್ ಫೇರ, ಇವೇ ಮೊದಲಾದ ಪಾರಿಭಾಷಿಕಪದಗಳ ಬಗ್ಗೆ ನೀಡಿದ ವಿವರಣೆ ಸಾಲದು. ಇನ್ನೊಂದು ಮುಖ್ಯವಾದ ಮಾತು ಎಂದರೆ ಈ ಗ್ರಂಥದಲ್ಲಿ ಲೇಖಕರು ಉಪಯೋಗಿಸಿದ ಭಾಷೆಯ ಬಗ್ಗೆ. ಈ ಪುಸ್ತಕದಲ್ಲಿ ಉಪಯೋಗಿಸಿದ ಭಾಷೆಗೆ ಸತ್ವ ಇಲ್ಲ ಎನಿಸುತ್ತದೆ. ಅಂದರೆ ಲೇಖಕರು ತೂಕದ ಮತ್ತು ಗಟ್ಟಿಯಾದ ಭಾಷೆಯನ್ನು ಉಪಯೋಗಿಸಿಲ್ಲ ಎಂದರ್ಥ. ಅಂದರೆ ಭಾಷೆ ಕೃತಕವಾಗಿ ತೋರುತ್ತಿದೆ ಎಂದರ್ಥ. ಇದಕ್ಕೆ ಕೆಲವು ಉದಾಹರಣೆಗಳನ್ನು ಈ ಪುಸ್ತಕದಿಂದ ಕೊಡಬಹುದು: "ಇವನ ಸ್ವತಂತ್ರ ವ್ಯಕ್ತಿವಾದ ಆರ್ಥಿಕ ಮಾನವನನ್ನು ಸೃಷ್ಟಿಸುವತ್ತ ಕೊಂಡೊಯ್ದು ಅಷ್ಟು ನಿಜಾತ್ಮಕವಾಗಿರಲಿಲ್ಲ." (ಪುಟ ೨೧)) "ವ್ಯಾಖ್ಯಾನತಃ ಮಾರಾಟಕ್ಕಾಗಿ ಉತ್ಪಾದಿಸಲಾಗಿರುವ ಸರಕು ಅದರ ಉತ್ಪಾದಕನಿಗೆ ಉಪಯುಕ್ತತಾ ಮೌಲ್ಯವಿಲ್ಲದಿರುವ ವಸ್ತು" (ಪುಟ ೮೨) "ಸಮಾಜವಾದವಾದರೆ ಮುಖ್ಯವಾಗಿ ಬಂಡವಾಳಶಾಹಿ ಪದ್ಧತಿಯಲ್ಲಿನ ಅನೇಕ ಕೆಡಕುಗಳ ವಿರುದ್ಧ ಚಿಂತನೆ ಮಾಡುವ ಪಂಥವಾಗಿ ಆರಂಭವಾಯಿತು" (ಪುಟ ೬೬). "೧೯೨೫ ರಿಂದೀಚೆಗೆ ಕೇನ್ಸ್ ಹೆಚ್ಚು ಹೆಚ್ಚಾಗಿ ತನ್ನನ್ನು ಅರ್ಥ ವಿಜ್ಞಾನದ ಚಿಂತನೆಗೆ ವಿನಿಯೋಗಿಸಿಕೊಂಡ" ಪುಟ ೧೭೦). "ವ್ಯಾಖ್ಯಾನತಃ ಹಾಗೆ ಇವು ಸಮನಾದರೂ ಕೂಡ ಉಳಿತಾಯಗಾರರು ಸಮಪ್ರಮಾಣದ ಉಳಿತಾಯ ಮತ್ತು ಹೂಡಿಕೆಗಳಾಗುವಂತೆ ಯೋಜಿಸುತ್ತಾರೆ ಎನ್ನುವುದಕ್ಕೆ ಯಾವ ಖಾತ್ರಿಯೂ ಇಲ್ಲ" (ಪುಟ ೧೭೩) ಇತ್ಯಾದಿ.

ಈ ಪುಸ್ತಕದಲ್ಲಿ ಹೆಚ್ಚುಸಲ ಕೊಟ್ಟಕೊನೆಗೆ ಎನ್ನುವ ಶಬ್ದವನ್ನು ಗ್ರಂಥಕರ್ತರು ಉಪಯೋಗಿಸುತ್ತಾರೆ. 'ಕೊಟ್ಟಕೊನೆಗೆ' ಈ ಶಬ್ದದ ಬದಲಾಗಿ ಕಟ್ಟಕಡೆಗೆ ಎನ್ನುವ ಶಬ್ದವನ್ನು ಉಪಯೋಗಿಸುವದು ಉತ್ತಮ. 'ನಿಯಂತ್ರಣೆ' (ಪುಟ ೨೪) ಎನ್ನುವ ಬದಲು ನಿಯಂತ್ರಣ. 'ಮೌಲ್ಯದ ಮಾಪನೆ' ಎನ್ನುವದರ ಬದಲು ಮೌಲ್ಯಮಾಪನ. (ಪುಟ ೩೨) 'ನಿಯತಕಾಲಿಕೆ' (ಪುಟ ೧೯೯)ರ ಬದಲು ನಿಯತಕಾಲಿಕ ಎಂದು ಉಪಯೋಗಿಸಿದರೆ ಉತ್ತಮ. ಇಂಥ ದೋಷಗಳು ಈ ಪುಸ್ತಕದಲ್ಲಿ ಅಲ್ಲಲ್ಲಿ ಕಾಣಸಿಗುತ್ತವೆ. ಈ ಪುಸ್ತಕದಲ್ಲಿ ಅಲ್ಲಲ್ಲಿ ಮುದ್ರಣದೋಷಗಳು ಸಹ ಇವೆ.

ಇಷ್ಟೆಲ್ಲ ದೋಷಗಳು ಈ ಪುಸ್ತಕದಲ್ಲಿ ಇದ್ದರೂ.ಈ ಪುಸ್ತಕ ಬಿ.ಎ.ಯಲ್ಲಿ ಪ್ರಧಾನವಾಗಿ ಅರ್ಥಶಾಸ್ತ್ರ ಅಧ್ಯಯನ ಮಾಡುವ ಮತ್ತು ಕನ್ನಡದಲ್ಲಿ ಉತ್ತರಗಳನ್ನು ಬರೆಯಲು ನಿರ್ಧರಿಸಿದ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿ ಮತ್ತು ಉಪಯುಕ್ತ ಎಂದು ಹೇಳಬೇಕಾಗುತ್ತದೆ. ಯಾಕೆಂದರೆ ಶ್ರೀ ರೇಣುಕಾರ್ಯ ಅವರು ಆರ್ಥಿಕ ಚಿಂತಕರ ಚಿಂತನೆಯ ಕುರಿತು (ಶುಂಪಿಟರ. ಹಿಕ್ಸ್, ಹಯ್‌ಕ. ಚೇಂಬರ್ಲಿನ್ ಮತ್ತು ಜೋನ್ ರೊಬಿನ್‌ಸನ್ ಇವರನ್ನು ಬಿಟ್ಟು) ಬಿ.ಎ. ವಿದ್ಯಾರ್ಥಿಗಳಿಗೆ ಅವರ ಪರೀಕ್ಷೆಯ ದೃಷ್ಟಿಯಿಂದ ಬೇಕಾಗುವಷ್ಟು ಮಾಹಿತಿಯನ್ನು ನೀಡುತ್ತಾರೆ. ಈ ದೃಷ್ಟಿಯಿಂದ ರೇಣುಕಾರ್ಯ ಅವರ ಪ್ರಯತ್ನ ಮೆಚ್ಚಿಕೊಳ್ಳಬೇಕಾಗುತ್ತದೆ.

—ಡಿ. ಎನ್. ರಾಯ್ಕರ

ಭಾರತದಲ್ಲಿ ಸೆಂಟ್ರಲ್ ಬ್ಯಾಂಕಿನ ವಿಕಾಸ: ಮೂಲ ಲೇಖಕರು ಶ್ರೀ ಬಿ. ರಾಮರಾವ್, ಅನುವಾದ: ಡಾ॥ ಎಸ್. ಆರ್. ರಾವ್, ಪುಟಗಳು ೭೩, ಬೆಲೆ: ರೂ. ೫–೦೦.

ಮದ್ರಾಸು ವಿಶ್ವವಿದ್ಯಾನಿಲಯದ ಸಿಂಡಿಕೇಟಿನ ಆಹ್ವಾನದ ಮೇರೆಗೆ. ಶ್ರೀ ರಾಮರಾವ್ ಅವರು ನೀಡಿದ ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಪೂರ್ತಿದತ್ತಿ ಉಪನ್ಯಾಸಗಳನ್ನು ಈ ಗ್ರಂಥ ಒಳಗೊಂಡಿದೆ. ಈ ಗ್ರಂಥ ಇಂಗ್ಲಿಷ್‌ನಲ್ಲಿ ಪ್ರಕಟವಾದುದು ೧೯೬೦ರಲ್ಲಿ. ಅದನ್ನು ಈಗ ಕನ್ನಡಕ್ಕೆ ಅನುವಾದಿಸಿ ಕರ್ನಾಟಕ ವಿಶ್ವವಿದ್ಯಾನಿಲಯ ಪ್ರಕಟಿಸಿದೆ.

ಈ ಕಿರುಗ್ರಂಥ ಮೂರು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳೆಂದರೆ, ವಾಣಿಜ್ಯ ಬ್ಯಾಂಕಿನ ನಿಯಂತ್ರಣ ಮತ್ತು ಸೌಲಭ್ಯ ವಿಸ್ತರಣೆ. ಉಬ್ಬರ ಮತ್ತು ಧನ ಧೋರಣೆ—ಯುದ್ಧಕಾಲದಲ್ಲಿ ಮತ್ತು ಅನಂತರದಲ್ಲಿ ಉಬ್ಬರ—ಮತ್ತು ಒಕ್ಕಲುತನ ಮತ್ತು ಔದ್ಯಮಿಕ ಹಣಕಾಸು.

ಮೊದಲನೆಯ ಅಧ್ಯಾಯದಲ್ಲಿ ವಾಣಿಜ್ಯ ಬ್ಯಾಂಕಿನ ನಿಯಂತ್ರಣ ಮತ್ತು ಸೌಲಭ್ಯ ವಿಸ್ತರಣೆ, ಯುದ್ಧಾನಂತರದಲ್ಲಿ ಬ್ಯಾಂಕ್ ವ್ಯವಹಾರದ ಪರಿಸ್ಥಿತಿ. ಬ್ಯಾಂಕುಗಳ ಶಾಸನಿಕ ನಿಯಂತ್ರಣ. ಪರಿಶೋಧನೆಯ ಪದ್ಧತಿ. ಬ್ಯಾಂಕರುಗಳು ತರಬೇತಿ ವಿದ್ಯಾಲಯ. ಬ್ಯಾಂಕಿಂಗ್ ಸೌಲಭ್ಯಗಳ ವಿಸ್ತರಣೆ, ಇಂಪೀರಿಯಲ್ ಬ್ಯಾಂಕಿನ ರಾಷ್ಟ್ರೀಕರಣ. ಬಿಲ್ ಪೇಟೆಯ ಯೋಜನೆ—ಇವುಗಳನ್ನು ಐತಿಹಾಸಿಕವಾಗಿ ಸಮೀಕ್ಷಿಸಲಾಗಿದೆ. ವಿಷಯ ಮುಖ್ಯವಾಗಿ ಶ್ರೀ ಬಿ. ರಾಮರಾಯರು ಬ್ಯಾಂಕಿಂಗ್ ಕ್ಷೇತ್ರದ ನಾನಾ ವಿಭಾಗಗಳಲ್ಲಿ ಹೇಗೆ ಸುಧಾರಣೆಗಳನ್ನು ತಂದರು ಎಂಬುದನ್ನು ವಿವರಿಸುತ್ತದೆ.

ಎರಡನೆಯ ಅಧ್ಯಾಯದಲ್ಲಿ, ಯುದ್ಧೋತ್ತರ ವರುಷಗಳಲ್ಲಿ ಹಣಕಾಸಿನ ಧೋರಣೆ, ರೂಪಾಯಿಯ ಅಪಮೌಲ್ಯೀಕರಣ. ಹೊಸ ಧನ ಧೋರಣೆ ಮತ್ತು ಅದರ ಪರಿಣಾಮ, ಭಾರತದಲ್ಲಿ ಬ್ಯಾಂಕುದರ. ವಿಶಿಷ್ಟ ಪತ್ತು ಮುಟ್ಟುಗೋಲು. ಉಬ್ಬರದ ಕಾರಣಗಳು, ಕೊರತೆ ಧನವಿನಿಯೋಗಗಳನ್ನು ಪರಿಚಯ ಮಾಡಿಕೊಡಲಾಗಿದೆ. ಮೂರನೆಯ ಯೋಜನೆಯ ಹೊಸ್ತಿಲಲ್ಲಿದ್ದ ದಿನಗಳಿಗೆ ಉಪನ್ಯಾಸ ಸಂಬಂಧಿಸಿದುದರಿಂದ ಮೇಲಿನ ವಿಷಯಗಳನ್ನು ಸಹ ಐತಿಹಾಸಿಕವಾಗಿ ಚರ್ಚಿಸಿ, ಕೊರತೆ ಹಣ ನೀತಿಯ ಬಗ್ಗೆ ರಿಸರ್ವ್ ಬ್ಯಾಂಕಿಗಿರುವ ಮಿತಿಯ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಲಾಗಿದೆ. "ಸಾರಾಂಶದಲ್ಲಿ, ಸರಕಾರವೇ ಸಂಪೂರ್ಣವಾಗಿ ನಿರ್ಧರಿಸುವುದಿರುವಲ್ಲಿ. ರಿಸರ್ವ್ ಬ್ಯಾಂಕು ಕೊರತೆ ಹಣವನ್ನು ಮಿತಗೊಳಿಸುವುದಕ್ಕೆ ಅಧಿಕಾರವಿಲ್ಲ.... ತೃತೀಯ ಯೋಜನೆಯಲ್ಲಿ ಕೊರತೆ ಧನ ವಿನಿಯೋಗಕ್ಕೆ ಮಾಡಿರುವ ವ್ಯವಸ್ಥೆ ಎರಡನೆಯ ಯೋಜನೆಯದಕ್ಕಿಂತ ಕಿರಿದು ಎಂಬುದನ್ನು ಪತ್ರಿಕಾ ಪ್ರಕಟಣೆಯಿಂದ ತಿಳಿಯಲು ಸಮಾಧಾನವೆನಿಸುತ್ತದೆ....ಅತಿ ಪ್ರಸರಣ ಆಯಾತಕ್ಕೆ ಸಾಕಷ್ಟು ರಕ್ಷಣೆಯನ್ನೊದಗಿಸಿದ್ದ ನಮ್ಮ ವಿದೇಶೀ ವಿನಿಮಯ ಸಂಗ್ರಹವು ಸದ್ಯ ಕೆಳಮಟ್ಟವನ್ನು ಮುಟ್ಟಿರುವ ಕಾರಣದಿಂದ ಕೊರತೆ ಹಣದ ವಿಷಯದಲ್ಲಿ ವಿಶೇಷ ಜಾಗ್ರತಿ ಅತ್ಯಾವಶ್ಯಕ." ಈ ಮಾತುಗಳನ್ನು ಆರನೆಯ ಯೋಜನೆಯ ಅವಧಿಯಲ್ಲಿರುವ ನಾವು ಇಂದುಸಹ ಮೆಲಕುಹಾಕಬಹುದಾಗಿದೆ.

ಮೂರನೆಯ ಅಧ್ಯಾಯದಲ್ಲಿ ಗ್ರಾಮೀಣ ಸಾಲ ಸಮಸ್ಯೆಯನ್ನು ಕೂಲಂಕಷವಾಗಿ ಚರ್ಚಿಸಲಾಗಿದೆ. ಅಖಿಲ ಭಾರತ ಗ್ರಾಮೀಣ ಸಾಲ ಸಮೀಕ್ಷೆ ಸಮಿತಿಯ ನೇಮಕದ ಹಿನ್ನೆಲೆ ಮತ್ತು ಅದರ ಶಿಫಾರಸಿನ ಕೆಲವು ಮುಖಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. ಸಹಕಾರಿ ಬೇಸಾಯ ಪದ್ಧತಿಯನ್ನು ಕುರಿತ ನಿಜಲಿಂಗಪ್ಪ ಸಮಿತಿಯ ವರದಿಯನ್ನು ಸಹ ಚರ್ಚಿಸಲಾಗಿದ್ದು, ನಮ್ಮ ದೇಶಕ್ಕೆ ಸಹಕಾರಿ ಬೇಸಾಯ ಪದ್ಧತಿ ಯುಕ್ತವಾದದ್ದೇ ಎಂಬುದನ್ನು ಚರ್ಚಿಸಲಾಗಿದೆ. ಶ್ರೀ ರಾಮರಾಯರ ತೀರ್ಮಾನವೆಂದರೆ "ನಾವು ಸೇವಾ ಸಹಕಾರಿ ಸಂಘಗಳ ಮೇಲೆ ಹೆಚ್ಚಿನ ಲಕ್ಷ್ಯವನ್ನು ಕೊಟ್ಟರೆ ನಾವು ಹೆಚ್ಚಿನದನ್ನು ಸಾಧಿಸಬಹುದು. ಸ್ವಂತ ಇಚ್ಛೆಯ ಮಹತ್ವವನ್ನು ಸಹಕಾರಿ ಬೇಸಾಯ ಸಂಬಂಧದಲ್ಲಿ ಸಮಿತಿಯು ಒತ್ತಿ ಹೇಳಿತು. ಸ್ವಂತ ಇಚ್ಛೆಯು ಸರಕಾರದ ಧೋರಣೆಯ ಆಧಾರವಿರತಕ್ಕದ್ದು ಸರಿ." ಇದೇ ಅಧ್ಯಾಯದಲ್ಲಿ ಔದ್ಯಮಿಕ ಹಣಕಾಸಿಗೆ ಸಂಬಂಧಿಸಿದ ಕೇಂದ್ರ ಬ್ಯಾಂಕಿನ ನೀತಿಯನ್ನು ಸಹ ಪರಿಶೀಲಿಸಲಾಗಿದೆ.

ವಿಷಯದ ದೃಷ್ಟಿಯಿಂದ ಈ ಗ್ರಂಥ ಹಳೆಯದಾದರೂ, ಐತಿಹಾಸಿಕವಾಗಿ ಭಾರತದಲ್ಲಿ ಸೆಂಟ್ರಲ್ ಬ್ಯಾಂಕಿನ ವಿಕಾಸವನ್ನು ಅರಿಯುವ ದೃಷ್ಟಿಯಿಂದ ಉಪಯುಕ್ತವಾದುದಾಗಿದೆ. ಆದರೆ ಅನುವಾದಕರು ಈ ಗ್ರಂಥವನ್ನು ಇನ್ನೂ ಹೆಚ್ಚು ಸುಂದರವಾಗಿ ಅನುವಾದ ಮಾಡಬಹುದಾಗಿತ್ತೆಂದು ಓದುವಾಗ ಪದೇ ಪದೇ ಅನ್ನಿಸುತ್ತದೆ. ಅನೇಕ ಪರಿಭಾವನೆಗಳು ಓದುವುದಕ್ಕೆ ಅಡ್ಡಿಯನ್ನು ಒಡ್ಡುತ್ತವೆ. ಉದಾಹರಣೆಗೆ ಶೇತಕೀ ಮತ್ತು ಪತ್ತು (?) (ಪುಟ ೩), ಮ. ಬ್ಯಾಂಕಿನ (?) ಬ್ಯಾಂಕು ವ್ಯವಹಾರ (ಬ್ಯಾಂಕವೇ ಅಥವಾ ಬ್ಯಾಂಕೇ?) (ಕೆಲವು ಕಡೆ ಅನುವಾದಕರು ಬ್ಯಾಂಕ್ ಎಂದು ಬಳಸುತ್ತಾರೆ. ಇದೇ ಉತ್ತಮ ಎನ್ನಿಸುತ್ತದೆ). ಶೇರಿನ ತಳಕು ಆಡಳಿತವರ್ಗ (ಪುಟ ೬). ವದಾಂಕಿತ ಅಕ್ವಿಡೇಟರ್ (ಪುಟ ೬೮). (ಬಹುಶಃ ಲಿಕ್ವಿಡೇಟರ್ ಇರಬೇಕು). ಆ ಆರ್ಥಿಕವು (ಪುಟ ೪೪). ಈ ದೃಷ್ಟಿಯಿಂದ ಇಂಗ್ಲಿಷ್ ಪದಗಳನ್ನು ಕನ್ನಡದ ಪದದ ಪಕ್ಕದಲ್ಲೇ ಕಂಸದೊಳಗೆ ನೀಡಿದ್ದರೆ ಓದುವುದು ಹಗುರವೆನ್ನಿಸುತ್ತಿತ್ತು.

ಇನ್ನು ಕೆಲವುಕಡೆ ಅನುವಾದ ತುಂಬಾ ಅಸಮರ್ಪಕವೂ, ಅಸ್ಪಷ್ಟವೂ ಆಗಿದೆ. ಈ ವಾಕ್ಯವನ್ನು ನೋಡಿ "ನಮ್ಮ ಜನಸಂಖ್ಯೆಯ ಭಯಂಕರ ಹೆಚ್ಚಳದಿಂದ ಆಹಾರ ಧಾನ್ಯಗಳಲ್ಲಿನ ಉತ್ಪಾದನೆಯ ನಮ್ಮ ತತ್‌ಕ್ಷಣದ ಆವಶ್ಯಕತೆ ಕೋ-ಆಪರೇಟಿವ್ ಬೇಸಾಯ ಮತ್ತು ಇನ್ನಿತರ ಯೋಜನೆಗಳನ್ನು ಇದೇ ದೃಷ್ಟಿಯಿಂದ ನಿರ್ಣಯಿಸತಕ್ಕದ್ದು "(!)

ಇನ್ನು ಈ ಗ್ರಂಥ ಅಸಂಖ್ಯಾತ ಮುದ್ರಣ ದೋಷಗಳನ್ನೊಳಗೊಂಡಿದೆ. ಒಂದು ತಪ್ಪೋಲೆಯನ್ನೇನೋ ಕೊಡಲಾಗಿದೆ. ಆದರೆ ಈ ತಪ್ಪೋಲೆ ೧೯ನೇ ಪುಟಗಳೊಳಗೆ ಇರುವ ತಪ್ಪುಗಳನ್ನು ಮಾತ್ರ ಸೂಚಿಸುತ್ತದೆ. ಆದರೆ ೧೯ನೆ ಪುಟದ ನಂತರ ಅನೇಕ ಮುದ್ರಣ ದೋಷಗಳಿವೆ. ಉದಾಹರಣೆಗೆ: ಪ್ರತಿಷ್ಟೆ (ಪುಟ. ೬೮), ಸಂಬಂಧಿತ (ಪು. ೬೯).

ವಿಶ್ವವಿದ್ಯಾನಿಲಯ ಈ ಗ್ರಂಥವನ್ನು ಪ್ರಕಟಿಸಿರುವುದರಿಂದ ಅದು ಸರ್ವಾಂಗೀಣ ಸುಂದರವಾಗಿರಬೇಕೆಂದು ಬಯಸುವುದು ಸಹಜ. ಆದರೆ ಈ ಕೃತಿ ಅದಕ್ಕೆ ಹೊರತಾಗಿದೆ ಎಂದು ಹೇಳುವುದು ಅನಿವಾರ್ಯ.

—ಸಿ. ಕೆ. ರೇಣುಕಾರ್ಯ

ಕೆ.ಸ. ೨೩೪೩೨ ಎಂಯುಪಿಎಂ—೫೦೦+೨೫ ಪ್ರತಿಗಳು—೩೦-೭-೮೨

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬